ಸಂಪುಟ: 04 ಸಂಚಿಕೆ: 201 ಪುಟಗಳು: 08 ಗುರುವಾರ 03 ಅಕ್ಟೋಬರ್ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಅಸಹಿಷ್ಣುತೆಯು ಹಿಂಸೆಯ ಒಂದು ರೂಪ ಮತ್ತು ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅದು ಅಡ್ಡಿಯಾಗಿರುತ್ತದೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮುಡಾ ಆಯುಕ್ತರ ಬಂಧನಕ್ಕೆ ಸಚಿವ ಕುಮಾರಸ್ವಾಮಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮುಡಾ 14 ಸೈಟ್‌ಗಳ ಖಾತೆ ರದ್ದು ಮತ್ತು ಸಿಎಂ ಸಿದ್ದರಾಮಯ್ಯ ಪಾರ್ವತಿ ಹೆಸರಿನಲ್ಲಿದ್ದ ಸೈಟ್‌ಗಳು ಮುಡಾ ಪಾಲಾಗಿದ್ದರಿಂದ ಮುಡಾ ಹಗರಣಕ್ಕೆ ದೊಡ್ಡ ತಿರುವು ದೊರೆತಿದೆ. ಖುದ್ದು ಸಿಎಂ ಸಿದ್ದರಾಮಯ್ಯರ ಪತ್ನಿಯೇ ಮುಡಾ ಕಚೇರಿಗೆ ಬಂದು ಸೈಟ್ ವಾಪಸ್ ಕೊಡೋದಾಗಿ ಹೇಳಿದ್ದರು.

ಇದಾಗ್ತಿದ್ದಂತೆಯೇ ತಕ್ಷಣವೇ ಸಿಎಂ ಪತ್ನಿಯ ಹೆಸರಿನಲ್ಲಿದ್ದ ಸೈಟ್‌ಗಳು ಮುಡಾ ಪಾಲಾಗಿದೆ. 14 ಸೈಟ್‌ಗಳ ಕ್ರಮಪತ್ರ ರದ್ದಾಗಿದೆ ಎಂದು ಮುಡಾ ಆಯುಕ್ತರೇ ಹೇಳಿಕೆ ಕೊಟ್ಟಿದ್ದಾರೆ. ಈ ಮಧ್ಯೆ, ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಅನುಮಾನ ವ್ಯಕ್ತಪಡಿಸಿದ್ದಾರೆ.ಸೈಟ್ ವಾಪಸ್ ನೀಡುವ ಮೂಲಕ ಸಿಎಂ ಸಿದ್ದರಾಮಯ್ಯ ಸಾಕ್ಷ್ಯನಾಶಕ್ಕೆ ಪ್ರಯತ್ನಿಸಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ. ಮುಡಾ ಆಯುಕ್ತರ ಮೇಲೆ ಯಾಹಿರು ಪ್ರಭಾವ ಬೀರಿದ್ದಾರೆ ಅಂತಾ ಗೊತ್ತಾಗ್ಬೇಕಿದೆ ಎಂದು ಆಗ್ರಹಿಸಿದ್ದಾರೆ.

## ನಾವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು: ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ವಾಹನ ಸವಾರರೇ ಗಮನಿಸಿ , ನೀವಿನ್ನೂ 'ಎಚ್‌ಎಸ್‌ಆರ್‌ಪಿ' ನಂಬರ್ ಪ್ಲೇಟ್ ಹಾಕಿಸಿಲ್ವಾ.. ನ.20 ರೊಳಗೆ ನಂಬರ್ ಪ್ಲೇಟ್ ಹಾಕಿಸಿದಂಡದಿಂದ ಪಾರಾಗಿ.ಹೌದು. ವಾಹನ ಸವಾರರಿಗೆ ಹೈಕೋರ್ಟ್ ಹೆಚ್‌ಎಸ್ ಆರ್ ಪಿ ನಂಬರ್ ಪ್ಲೇಟ್ ಅಳವಡಿಕೆ ಗಡುವು ನ.20 ರವರೆಗೆ ವಿಸ್ತರಣೆ ಮಾಡಿದೆ.ನ.20 ರೊಳಗೆ ತಪ್ಪದೇ ನಂಬರ್ ಪ್ಲೇಟ್ ಹಾಕಿಸಿಕೊಳ್ಳಬೇಕು, ಇಲ್ಲದಿದ್ರೆ ದಂಡ ಬೀಳುವುದು ಗ್ಯಾರೆಂಟಿ.2019ರ ಏಪ್ರಿಲ್ 1ಕ್ಕಿಂತ ಹಿಂದಿನ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬಹುದು. https://transport.karnataka.gov.in/english ಆನ್ಲೈನ್ ಮೂಲಕವೂ ನೋಂದಣಿಗೆ ಅವಕಾಶ ನೀಡಲಾಗಿದೆ.

## ಕಿತ್ತೂರು ಉತ್ಸವಕ್ಕೆ ಚಾಲನೆ ನೀಡಿದ ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಎಲ್ಲಾ ನ್ಯಾಯಾಲಯಗಳಿಗಿಂತ ಮೇಲೆ ಅತ್ಯುನ್ನತವಾದ ಆತ್ಮಸಾಕ್ಷಿಯ ನ್ಯಾಯಾಲಯವಿದೆ ಎಂದು ಮಹಾತ್ಮಾ ಗಾಂಧೀಜಿ ಹೇಳಿದ್ದರು ಎಂಬ ಮಾತನನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಈಗಿನ ನ್ಯಾಯಲಯಗಳಲ್ಲಿ ಎಲ್ಲರಿಗೂ ನ್ಯಾಯ ಸಿಗದೇ ಹೋಗಬಹುದು. ಆದರೆ ನಾವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು.ಯಾರಾದರೂ ಹೊಗಳಲಿ, ತೆಗಳಲಿ. ಟೀಕೆ ಮಾಡಲಿ, ಬಿಡಲಿ. ಉಳಿದವರು ಗುರುತಿಸಲಿ ಬಿಡಲಿ ನಾವು ಆತ್ಮಸಾಕ್ಷಿಯ ನ್ಯಾಯಾಲಯದಲ್ಲಿ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದರು.

## ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಟ್ರೆ, ಪ್ಲ್ಯಾನ್ 'ಸಿ' ಅನುಷ್ಠಾನ

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ, ಇಡಿ ಕಾಟ ಕೊಡುತ್ತಿದ್ದರೆ, ಇನ್ನೊಂದು ಕಡೆ ಸಿಎಂ ಸಿದ್ದರಾಮಯ್ಯಗೆ ರಾಜೀನಾಮೆಗೆ ವಿಪಕ್ಷಗಳು ಆಗ್ರಹಿಸುತ್ತಿವೆ. ಇದರ ಮಧ್ಯ ಕಾಂಗ್ರೆಸ್ ಪಕ್ಷದಲ್ಲೇ ಸಿಎಂ ಸ್ಥಾನಕ್ಕೆ ಪೈಪೋಟಿ ನಡೆಯುತ್ತಿದೆ.ಈ ಕುರಿತು ಸಚಿವ ಸತೀಶ್ ಜಾರಕಿಹೊಳಿ ಹೊಸ ಬಾಂಬ್ ಸಿಡಿಸಿದ್ದಾರೆ.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡುತ್ತಾರೆ ನಾನೇ ಮುಂದಿನ ಸಿಎಂ ಎಂದು ಹಲವು ಸಚಿವರು ಹೇಳಿಕೆ ನೀಡುತ್ತಾ ಬಂದಿದ್ದಾರೆ. ಹಾಗಾಗಿ ನಮ್ಮಲ್ಲಿ ಪ್ಲಾನ್ ಸಿ ಏನು ಇಲ್ಲ ನೇರವಾಗಿ ಅ ಪ್ಲ್ಯಾನ್ ಅನುಷ್ಠಾನ ತರುತ್ತೇವೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ.ಮುಡಾ ಹಗರಣದಲ್ಲಿ ಸಾಕಷ್ಟು ಬೆಳವಣಿಗೆಯ ಹಿನ್ನಲೆ ಸಿಎಂ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಪಟ್ಟು ಹಿಡಿದಿದ್ದು, ಈ ಬೆನ್ನಲ್ಲೇ ದಲಿತ ಸಚಿವರಾದ ಗೃಹ ಸಚಿವ ಜಿ ಪರಮೇಶ್ವರ್, ಮಹದೇವಪ್ಪ, ಹಾಗೂ ಸತೀಶ್ ಜಾರಕಿಹೊಳಿ ಸೀಕ್ರೆಟ್ ಸಭೆಯನ್ನು ನಡೆಸಿದ್ದಾರೆ.

# ಯುದ್ಧದ ಭೀತಿ ತಂಟೆಗೆ ಬಂದ್ರೆ ಪಜೀತಿ

**ಭೀತಿ, ಆತಂಕದಲ್ಲಿ ಆರ್ಥಿಕತೆ**



**ಜೆರುಸಲೆಮ್:** ಇಸ್ರೇಲ್ ಮೇಲೆ ಇರಾನ್ ಅ.1ರಿಂದ ಕ್ಷಿಪಣಿ ದಾಳಿಗಳನ್ನು ಆರಂಭಿಸಿದೆ. ಇದಕ್ಕೆ ಉತ್ತರವಾಗಿ ಇಸ್ರೇಲ್ ಕೂಡ ಪ್ರತಿದಾಳಿ ನಡೆಸುವ ಸಾಧ್ಯತೆಗಳು ದಟ್ಟವಾಗಿವೆ. ತಿಂಗಳುಗಳ ಹಿಂದೆ, ಇಸ್ರೇಲ್ - ಪ್ಯಾಲೆಸ್ತೀನಿಯನ್ನರ ಯುದ್ಧವೆಂದು ಹೆಸರು ಪಡೆದಿದ್ದ ಈ ಕಾಳಗ ಕ್ರಮೇಣ, ಇಸ್ರೇಲ್-ಹಮಾಸ್ ಹಾಗೂ ಇತ್ತೀಚೆಗೆ ಇಸ್ರೇಲ್-ಇರಾನ್ ನಡುವಿನ ಯುದ್ಧವಾಗಿ ಮಾರ್ಪಾಟು ಹೊಂದಿದೆ. ಹಿಜ್ಬುಲ್ಲಾ ನಾಯಕತ್ವವನ್ನು ಹತ್ಯೆ ಮಾಡಿದ ಬೆನ್ನಲ್ಲೇ ಇರಾನ್ ಮತ್ತು ಇಸ್ರೇಲ್ ನಡುವೆ ಸಂಘರ್ಷ ತೀವ್ರಗೊಂಡಿದ್ದು, ಇರಾನ್ 200ಕ್ಕೂ ಹೆಚ್ಚು ಬ್ಯಾಲೆಸ್ಟಿಕ್ ಕ್ಷಿಪಣಿಗಳನ್ನು ಇಸ್ರೇಲ್ ನಾಗರಿಕ ಪ್ರದೇಶಗಳ ಮೇಲೆ ಉಡಾವಣೆ ಮಾಡಿದೆ. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇಸ್ರೇಲ್ ಪ್ರತಿ ದಾಳಿ ಆರಂಭಿಸಿದೆ. ಹೀಗಾಗಿ ಜಾಗತಿಕವಾಗಿ ಮತ್ತೊಂದು ಯುದ್ಧದ ಭೀತಿ ಎದುರಾಗಿದೆ.

ಈಗಾಗಲೇ ರಷ್ಯಾ ಮತ್ತು ಉಕ್ರೇನ್ ಯುದ್ಧ ಸಂಘರ್ಷದಿಂದಾಗಿ ಜಾಗತಿಕವಾಗಿ ಆರ್ಥಿಕ, ಸಾಮಾಜಿಕ ಏರಿಳಿತಗಳು ತೀವ್ರವಾಗಿವೆ.

ಅದರ ಬೆನ್ನಲ್ಲೇ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ, ದಕ್ಷಿಣ ಕೊರಿಯಾ ಮತ್ತು ಉತ್ತರ ಕೊರಿಯಾ ನಡುವೆ ಸಂಘರ್ಷಮಯ ವಾತಾವರಣವಿದ್ದು, ಅಶಾಂತಿಯ ವಾತಾವರಣ ನಿರ್ಮಾಣವಾಗಿದೆ.ಹಿಜ್ಬುಲ್ಲ ಪರಮೋಚ್ಚ ನಾಯಕ ಹಸನ್ ನಸ್ರುಲ್ಲಾನನ್ನು ಹತ್ಯೆ ಮಾಡಿದ್ದಕ್ಕಾಗಿ ಇರಾನ್ ಪ್ರತಿಕಾರ ತೀರಿಸಿಕೊಳ್ಳಲಿದೆ.

ಇಸ್ರೇಲ್‌ಮೇಲೆ ಯಾವುದೇ ಕ್ಷಣದಲ್ಲಿ ದಾಳಿ ಮಾಡಬಹುದು ಎಂಬ ಮುನ್ಸೂಚನೆಯನ್ನು ಅಮೆರಿಕ ನೀಡಿದ ಕೆಲವೇ ಘಂಟೆಗಳಲ್ಲಿ 180 ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಇರಾನ್ ಇಸ್ರೇಲ್ನ ಜನವಸತಿ ಪ್ರದೇಶದ ಮೇಲೆ ಉಡಾವಣೆ ಮಾಡಿದೆ. ಇದರಿಂದ ಹೆಚ್ಚಿನ ಹಾನಿ ಆಗಿಲ್ಲ. ಬಲಿಷ್ಠ ಇಸ್ರೇಲ್ ಸೇನೆ ದಾಳಿಯನ್ನು ಸಮರ್ಥವಾಗಿ ಪ್ರತಿರೋಧಿಸಿದೆ.

ಕ್ಷಿಪಣಿಗಳಿಂದ ಹೆಚ್ಚಿನ ಹಾನಿ ಆಗಿಲ್ಲ. ಆದರೂ ಕೆಲವು ಇಸ್ರೇಲ್ನ ಜನವಸತಿ ಪ್ರದೇಶಗಳಲ್ಲಿ ನೆಲಕ್ಕಪ್ಪಳಿಸಿವೆ. ಯಾವುದೇ ಸಾವು-ನೋವುಗಳಾಗಿಲ್ಲ. ಆಸ್ತಿಗಳಿಗೂ ಹೆಚ್ಚಿನ ಹಾನಿಯಾಗಿಲ್ಲ ಎಂದು ವರದಿಯಾಗಿದೆ.ಇರಾನ್ನ ದಾಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಲಾಗುವುದು ಎಂದು ಇಸ್ರೇಲ್ನ ಪ್ರಧಾನಿ ಬೆಂಜಮಿನ್ ನೆತ್ಯಾಹು ಎಚ್ಚರಿಕೆ ನೀಡಿದ್ದಾರೆ. ಇರಾನ್ ದೊಡ್ಡ ತಪ್ಪು ಮಾಡಿದೆ. ಇದಕ್ಕೆ ಖಂಡಿತ ಬೆಲೆ ತೆರಬೇಕು ಎಂದು ಕಳೆದ ತಡರಾತ್ರಿ ನಡೆದ ತುರ್ತು ಭದ್ರತಾ ಸಂಪುಟ ಸಭೆಯ ಬಳಿಕ ಘೋಷಣೆ ಮಾಡಿದ್ದಾರೆ.

ಕ್ಷಿಪಣಿ ದಾಳಿಗಳು ವಿಫಲಗೊಂಡಿವೆ. ಈ ಮೊದಲು ಗಾಜಾ, ಲೆಬನಾನ್ ಹಾಗೂ ಇತರರಿಗೆ ಪಾಠ ಕಲಿಸಿದಂತೆ ಕ್ಷಿಪಣಿ ದಾಳಿ ನಡೆಸಿದ ಇರಾನ್‌ಗೆ ಅತ್ಯಂತ ನೋವಿನ ಪಾಠ ಕಲಿಸಲಾಗುವುದು. ನಮ ಮೇಲೆ ಯಾರು ದಾಳಿ ಮಾಡುತ್ತಾರೋ ಅವರ ವಿರುದ್ಧ ನಾವು ಪ್ರತಿದಾಳಿ ಮಾಡುತ್ತೇವೆ ಎಂದು ಹೇಳಿದ್ದಾರೆ. ತೀಕ್ಷ್ಣ ಪ್ರತಿಕ್ರಿಯೆಗಾಗಿ ಈಗಾಗಲೇ ಇಸ್ರೇಲ್ ಕ್ಷಿಪಣಿ ಉಡಾವಣೆ ಸೇರಿದಂತೆ ಯುದ್ಧ ಸಲಕರಣೆಗಳ ಬಳಕೆಯನ್ನು ಆರಂಭಿಸಿದೆ ಎಂದು ತಿಳಿದುಬಂದಿದೆ.ಇರಾನ್ ಕ್ಷಿಪಣಿ ದಾಳಿಗಷ್ಟೇ ಸೀಮಿತವಾದರೆ ಭೂಪ್ರದೇಶದಲ್ಲೂ ಉಗ್ರರನ್ನು ನುಗ್ಗಿಸಿ ನೇರ ಯುದ್ಧ



ಮಾಡುವ ಪ್ರಯತ್ನ ನಡೆಸಿತ್ತು. ಈವರೆಗಿನ ವರದಿ ಪ್ರಕಾರ ಅತಿಕ್ರಮಣವಾಗಿ ಒಳನುಸುಳಿ ಮನಸೋ ಇಚ್ಛೆ ಗುಂಡು ಹಾರಿಸುತ್ತಿದ್ದ ಇಬ್ಬರು ಉಗ್ರರನ್ನು ಇಸ್ರೇಲ್ ಭದ್ರತಾ ಅಧಿಕಾರಿಗಳು ಹೊಡೆದುರುಳಿಸಿದ್ದಾರೆ. ಇಸ್ರೇಲ್ ಮತ್ತು ಇರಾನ್ ನಡುವಿನ ಈ ಸಂಘರ್ಷಮಯ ವಾತಾವರಣ ಜಾಗತಿಕವಾಗಿ ಮತ್ತಷ್ಟು ಸಂಕಷ್ಟಗಳ ಮುನ್ಸೂಚನೆಯನ್ನು ನೀಡಿದೆ.ಇಸ್ರೇಲ್ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತನ್ನ ಪ್ರಜೆಗಳು ತಕ್ಷಣವೇ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚನೆ ನೀಡಿದೆ. ಅಮೆರಿಕ ಇಸ್ರೇಲ್ಗೆ ತನ್ನ ಬೆಂಬಲ ವ್ಯಕ್ತಪಡಿಸಿದೆ. ಅರಬ್ ರಾಷ್ಟ್ರಗಳ ಅಭಿಪ್ರಾಯಗಳು ಹಾಗೂ ನಿಲುವುಗಳು ಇನ್ನೂ ಮುಗುಂ ಆಗಿಯೇ ಉಳಿದಿವೆ.ಈ ನಡುವೆ ಯಾವುದೇ ಕ್ಷಣದಲ್ಲಾದರೂ ಮತ್ತೊಂದು ಸುತ್ತಿನ ಅಪಾಯಕಾರಿ ಆಗುವ ಕ್ಷುದ್ರ ಸನ್ನಿವೇಶವನ್ನು ವಿಶ್ವ ಎದುರು ನೋಡುವಂತಾಗಿದೆ.

**ಇಸ್ರೇಲ್ ಜೊತೆಗೆ ಭಾರತದ ಬಾಂಧವ್ಯವನ್ನು ಹೊಸತಾಗಿ ಹೇಳಬೇಕಿಲ್ಲ. ಅಲ್ಲಿನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತಮ ಸ್ನೇಹಿತರು. ಇಸ್ರೇಲ್‌ನಿಂದ ಭಾರತವು ಕೃಷಿ, ತಂತ್ರಜ್ಞಾನ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ನೆರವು ಪಡೆಯುತ್ತಿದೆ. ಅಲ್ಲದೆ, ಏಷ್ಯಾದ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಇಸ್ರೇಲ್ ನ 2ನೇ ಅತಿ ದೊಡ್ಡ ಗ್ರಾಹಕ ದೇಶವಾಗಿದೆ. ಗುಜರಾತ್‌ನಲ್ಲಿ 2001ರಲ್ ಕಛ್ ಮತ್ತು ಬುಜ್‌ನಲ್ಲಿ ಭೂಕಂಪ ಆಗಿದ್ದಾಗಿನಿಂದಲೂ ಭಾರತಕ್ಕೆ ಅಗತ್ಯವಿದ್ದಾಗಲೆಲ್ಲಾ ಮಾನವೀಯ ಸಹಕಾರಗಳನ್ನು ಇಸ್ರೇಲ್ ನೀಡುತ್ತಲೇ ಬಂದಿದೆ.**

### ನಷ್ಟ ತುಂಬಲು ಫಾರೆಕ್ಸ್ ನಿಧಿ ಭದ್ರ

**ಇಂಥ ತುರ್ತು ಸಂದರ್ಭಗಳನ್ನು ನಿಭಾಯಿಸಲೆಂದೇ ಪ್ರತಿಯೊಂದು ದೇಶವೂ ತನ್ನಲ್ಲಿ ವಿದೇಶಿ ವಿನಿಮಯ ಮೀಸಲು ನಿಧಿ ಎಂಬ ಹಣಕಾಸಿನ ಗಂಟನ್ನು ಇಟ್ಟುಕೊಂಡಿರುತ್ತದೆ. ಅದಕ್ಕೆ ಇಂಗ್ಲೀಷ್ ನಲ್ಲಿ ಫಾರೆಕ್ಸ್ ರಿಸರ್ವ್ ಎಂದು ಕರೆಯುತ್ತಾರೆ. ಭಾರತವು ತನ್ನ ಫಾರೆಕ್ಸ್ ರಿಸರ್ವ್‌ನಲ್ಲಿ ದೊಡ್ಡಮೊತ್ತದ ಹಣವನ್ನು ಇಟ್ಟುಕೊಂಡಿದೆ. ಹಾಗೂ ಆ ಗಂಟು ಕರಗದಂತೆ ನೋಡಿಕೊಂಡಿದೆ. ಸದ್ಯದ ಮಟ್ಟಿಗೆ ಭಾರತದ ಈ ಮೀಸಲು ನಿಧಿಯಲ್ಲಿ 57 ಲಕ್ಷ ಕೋಟಿ ರೂ. ಹಣವಿದೆ. ಅದೇ ಕಾರಣಕ್ಕಾಗಿಯೇ ಭಾರತದ ಸ್ಥಿತಿಗತಿಗಳು ಸುಭದ್ರವಾಗಿದ್ದು, ವಿದೇಶಗಳಿಂದ ಆಗುವ ವ್ಯವಹಾರಗಳಲ್ಲೇನಾದರೂ ನಷ್ಟವಾದರೆ ಈ ನಿಧಿಯು ಉಪಯೋಗಕ್ಕೆ ಬರುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.**

### ಭಾರತದ ಬಾಂಧವ್ಯ

**ಮಧ್ಯಪ್ರಾಚ್ಯದಲ್ಲಿನ ಈ ಪ್ರಕ್ಷುಬ್ಧತೆಯು ದುಷ್ಪರಿಣಾಮ ಭಾರತದ ಮೇಲಾಗುತ್ತದೆಯೇ? ಮಧ್ಯಪ್ರಾಚ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಹೊಂದಿರುವ ಭಾರತಕ್ಕೆ ಇಸ್ರೇಲ್ ಹಾಗೂ ಇರಾನ್ - ಎರಡೂ ಮಿತ್ರ ರಾಷ್ಟ್ರಗಳೇ. ಇರಾನ್ ನಲ್ಲಿರುವ ಚಬಾಹರ್ ಬಂದರು ಅಭಿವೃದ್ಧಿಗಾಗಿ ಭಾರತ ಸಾವಿರಾರು ಕೋಟಿ ಸುರಿದಿದೆ. ಆ ಮೂಲಕ, ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಪಾಕಿಸ್ತಾನದ ಹಂಗಿಲ್ಲದೆ ತನ್ನ ಉತ್ಪನ್ನಗಳನ್ನು ಭಾರತ ಸಾಗಿಸುತ್ತಿದೆ. ಅದಕ್ಕೆ ಇರಾನ್ ಸರ್ಕಾರದ ಸಹಕಾರ ಅಗಾಧವಾಗಿದೆ.**




## ಗಾಂಧೀವಾದದ ಬದಲು ಸಾವರ್ಕರ್ ವಾದ ಗೆಲ್ಲುತ್ತಿದೆಯಾ ಎಂಬ ಆತಂಕ ದೇಶದಲ್ಲಿದೆ

• ಉದಯವಾಹಿನಿ, ಬೆಂಗಳೂರು

ದೇಶದಲ್ಲಿ ಗಾಂಧೀವಾದ ಗೆಲ್ಲಬೇಕೇ ಹೊರೆತು ಸಾವರ್ಕರ್ ಅವರ ವಾದ ಅಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.ಬೆಂಗಳೂರಿನಲ್ಲಿ ಇಂದು ಗಾಂಧೀ ಜಯಂತಿಯ ಪ್ರಯುಕ್ತ ಜಾಗೃತ ಕರ್ನಾಟಕ ಮತ್ತು ಅಹರ್ನಿಶಿ ಪ್ರಕಾಶನ ಅವರು ಆಯೋಜಿಸಿದ್ದ 'ಗಾಂಧೀಜಿಯ ಹಂತಕ' ಪುಸ್ತಕ ಬಿಡುಗಡೆ, ಚರ್ಚಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಚಿವರು ಮಾತನಾಡುತ್ತಿದ್ದರು. ಗೋಡ್ಸೆಗೆ ಉತ್ತರ ಗಾಂಧೀಜಿಯವರೇ.. ಗಾಂಧೀಜಿಯವರ ಹತ್ಯೆ ಮಾಡಿದ ಗೋಡ್ಸೆ, ಸಾವರ್ಕರ್ ವಾದದಿಂದ ಪ್ರಭಾವಿತರಾಗಿದ್ದರು. ದೇಶದಲ್ಲಿ ಇಂದು ಗಾಂಧೀವಾದ ಎದುರು ಸಾವರ್ಕರ್ ಅವರ ವಾದ ಗೆಲ್ಲುತ್ತಿದೆಯೇ ಎಂಬ ಅನುಮಾನ ನಮ್ಮನ್ನ ಕಾಡುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಸಾವರ್ಕರ್ ಅವರಲ್ಲಿ ವೈಚಾರಿಕ ಚಿಂತನೆಗಳು, ರಾಷ್ಟ್ರೀಯವಾದ ಕಾಣಲು ಸಾಧ್ಯವಾದರೂ, ಪ್ರಜಾಪ್ರಭುತ್ವದ ಪರವಾದ ವ್ಯಕ್ತಿತ್ವ ಇರಲಿಲ್ಲ. ಆದರೆ ಗಾಂಧಿಜೀ ಅವರದ್ದು ಡೆಮಾಕ್ರೆಟಿಕ್ ವ್ಯಕ್ತಿತ್ವ ಎಂದು ಹೇಳಿದರು. ಬ್ರಾಹ್ಮಣ ಸಮಾಜದ ಸಾವರ್ಕರ್ ಅವರು ಮಾಂಸ ಸೇವಿಸುತ್ತಿದ್ದರು. ಮಾಂಸಹಾರ ಸೇವನೆಯನ್ನ ಅವರು ಬಹಿರಂಗವಾಗಿ ಸಮರ್ಥಿಸುತ್ತಿದ್ದರು. ಹಾಗೆ ನೋಡಿದರೆ ಸಾವರ್ಕರ್ ಒಂದು ರೀತಿಯಲ್ಲಿ ಮಾಡರ್ನಿಷ್ಟ್ ಆಗಿಯೂ ಕಾಣುತ್ತಾರೆ. ಆದರೆ ಮೂಲಭೂತವಾದಿಯಾಗಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಮೂಲಭೂತವಾದ ನಮ್ಮ ಭಾರತ ದೇಶದ ಸಂಸ್ಕೃತಿಯಲ್ಲ. ಇದು ಯುರೋಪ್ ನಿಂದ ಬಂದಿರುವಂತದ್ದು. ಸಾವರ್ಕರ್ ಯೂರೋಪ್ ನಿಂದ ಸಾಕಷ್ಟು ಪ್ರಭಾವ ಹೊಂದಿದ್ದರು ಎಂದರು.

## ಸರ್ವ ಜನಾಂಗದ ಶಾಂತಿಯ ತೋಟದ ನಾಯಕ ಗಾಂಧೀಜಿ

• ಉದಯವಾಹಿನಿ, ಬೆಂಗಳೂರು

ಮಹಾತ್ಮ ಗಾಂಧೀಜಿ ಅವರು ಸರ್ವ ಜನಾಂಗದ ಶಾಂತಿಯ ತೋಟದ ನಾಯಕ. ಇವರು ಕೇವಲ ವ್ಯಕ್ತಿಯಲ್ಲ, ಶಕ್ತಿ ಮತ್ತು ಸ್ಫೂರ್ತಿ. ರಾಷ್ಟ್ರಪಿತ ದೇಶದ ಧೀಮಂತ, ಇಡೀ ವಿಶ್ವಕ್ಕೆ ಶಾಂತಿ ಮಂತ್ರ ಹೇಳಿಕೊಟ್ಟ ಮಹಾನ್ ನಾಯಕ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಭಿಪ್ರಾಯಪಟ್ಟರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ ಮಹಾತ್ಮ ಗಾಂಧಿ ಅವರ 155 ನೇ ಜನ್ಮ ದಿನದ ಅಂಗವಾಗಿ ಸ್ವಚ್ಛತಾ ಆಂದೋಲನದ ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಪವಾಸ, ಸತ್ಯಾಗ್ರಹವೇ ಇವರ ಆಯುಧ. ಬಾಂಬು, ಬಂದೂಕುಗಳಿಲ್ಲದೆ ಅಹಿಂಸೆಯ ಮೂಲಕ ಹೋರಾಟದ ಹಾದಿಯನ್ನು ಹೇಳಿಕೊಟ್ಟವರು. ಮುಂದಿನ ಒಂದು ವರ್ಷಗಳ ಕಾಲ ಮಹಾತ್ಮನನ್ನು ಸ್ಮರಿಸಲು 'ಗಾಂಧಿ ಭಾರತ' ಎನ್ನುವ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಶಿವನ ಧ್ಯಾನ, ರಾಮನ ತ್ಯಾಗ, ಬುದ್ಧನ ಪ್ರೀತಿ, ಏಸುವಿನ ಸಹನೆ, ಮಹಮದ್ ಪೈಗಂಬರ್ ಅವರ ಮಾನವೀಯತೆಯನ್ನು ಒಳಗೊಂಡ ಸ್ವರೂಪವೇ ಮಹಾತ್ಮಾ ಗಾಂಧಿ ಎಂದರು. ನನ್ನ ಜೀವನವೇ ನನ್ನ ಸಂದೇಶ ಎಂದು ನುಡಿದಂತೆ ನಡೆದವರು ಗಾಂಧಿ.

ಇವರ ಆಚಾರ, ವಿಚಾರ, ತತ್ವ, ಆಶಯಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವ ಕೆಲಸ ನಮ್ಮ ಸರ್ಕಾರ ಮಾಡಲಿದೆ ಎಂದು ಹೇಳಿದರು.

ಪ್ರತಿ ಹಳ್ಳಿಯೂ ಗಣರಾಜ್ಯವಾಗಬೇಕು ಎಂದು ಕನಸು ಕಂಡವರು. ನಾನು ಈ ಹಿಂದೆ ಸಹಕಾರ ಸಚಿವನಾಗಿದ್ದಾಗ ಒಂದು ಊರಿಗೆ ಶಾಲೆ ಹಾಗೂ ಸಹಕಾರ ಸಂಘವಿರಬೇಕು ಎಂದು ಯೋಜನೆ ರೂಪಿಸಿದ್ದೆವು. ಪಂಚಾಯಿತಿಯಿಂದ ಪಾರ್ಲಿಮೆಂಟಿನ ತನಕ ಅಧಿಕಾರ ವಿಕೇಂದ್ರೀಕರಣದ ಕನಸು ಕಂಡವರು ಎಂದರು.

**ಸ್ವಚ್ಛತಾ ಆಂದೋಲನದ ಪ್ರತಿಜ್ಞಾವಿಧಿ ಕಾರ್ಯಕ್ರಮ**



ಉದಯವಾಹಿನಿ ಚಿತ್ರ

**ಲಾಠಿ ಪೆಟ್ಟು, ಬೂಟಿನ ಏಟನ್ನು ಸಹಿಸಿಕೊಂಡು, ಅಹಿಂಸೆಯಿಂದ ಏನು ಬೇಕಾದರೂ ಸಾಧಿಸಬಹುದು ಎಂದು ತೋರಿಸಿಕೊಟ್ಟವರು ಗಾಂಧಿ. ನೂರು ವರ್ಷದ ಹಿಂದೆ ಬೆಳಗಾವಿಯ ಅಧಿವೇಶನದಲ್ಲಿ ಸ್ವಾತಂತ್ರ ಹೋರಾಟದ ನೇತೃತ್ವ ವಹಿಸಿದ್ದು ಈ ದೇಶದ ಪುಣ್ಯ. ನಾವು ಇದನ್ನು ಸಂಭ್ರಮದಿಂದ ಆಚರಿಸಬೇಕು**

**-ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ**

# ಮುಡಾ ಹಗರಣ: ದೂರುದಾರ ಸ್ನೇಹಮಯಿ ಕೃಷ್ಣಗೆ ಇಡಿ ನೋಟಿಸ್

## ಸಿದ್ದರಾಮಯ್ಯ ವಿರುದ್ಧದ ದೂರುದಾರರಿಗೆ ಪ್ರಕರಣದ ಸಾಕ್ಷ್ಯಾಧಾರ ಮತ್ತು ದಾಖಲೆ ಸಲ್ಲಿಸುವಂತೆ ಇ.ಡಿ ಸಮನ್ಸ್

• ಉದಯವಾಹಿನಿ, ಬೆಂಗಳೂರು

ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರ ಮೈಸೂರಿನ ಸ್ನೇಹಮಯಿ ಕೃಷ್ಣ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ.

ಮೊದಲ ಬಾರಿಗೆ ಅಧಿಕೃತವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ಪ್ರಕರಣದ ಸಾಕ್ಷ್ಯಾಧಾರ ಮತ್ತು ದಾಖಲೆ ಸಲ್ಲಿಸುವಂತೆ ಇ.ಡಿ ಸಮನ್ಸ್ ನೀಡಿದೆ. ಈ ಮೂಲಕ ಇ.ಡಿ ಅಧಿಕೃತವಾಗಿ ಮುಡಾ ಪ್ರಕರಣದಲ್ಲಿ ಪ್ರವೇಶ ಮಾಡಿದಂತಾಗಿದೆ. ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಶಾಂತಿನಗರದಲ್ಲಿರುವ ನಿರ್ದೇಶನಾಲಯದ ಕಚೇರಿಗೆ ಮೂಡಾ ಅಕ್ರಮಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಸಮೇತ ಬರುವಂತೆ ಸೂಚನೆ ನೀಡಲಾಗಿದೆ. ಕಳೆದ ಶನಿವಾರವಷ್ಟೇ ಸ್ನೇಹಮಯಿ ಕೃಷ್ಣ ಮುಡಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾಮೈದ ಮಲ್ಲಿಕಾರ್ಜುನ ಸ್ವಾಮಿ, ಭೂ ಮಾಲೀಕ ದೇವರಾಜು ವಿರುದ್ಧ ಇ.ಡಿಗೆ ದೂರು ನೀಡಿದ್ದರು. ಸೋಮವಾರ ಇ.ಡಿ ಇಸಿಐಆರ್ ದಾಖಲಿಸಿಕೊಂಡಿದೆ.ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಯಾದ ಜಾರಿನಿರ್ದೇಶನಾಲಯವು ನಿನ್ನೆಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಇಸಿಐಆರ್ ದಾಖಲಿಸಿಕೊಂಡಿದೆ.ಒಂದು ಕಡೆ ಲೋಕಾಯುಕ್ತ ಪೊಲೀಸರು ಈಗಾಗಲೇ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರೂ, ಜಾರಿ ನಿರ್ದೇಶನಾಲಯ ಸಿದ್ದರಾಮಯ್ಯ ವಿರುದ್ಧ ಇಸಿಐಆರ್ ದಾಖಲಿಸಿಕೊಂಡಿದೆ.

ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ, ಅವರ ಭಾವಮೈದುನ ಮಲ್ಲಿಕಾರ್ಜುನಸ್ವಾಮಿ ಮತ್ತು ಜಾಗವನ್ನು ಸಿಎಂ ಭಾವನಿಗೆ ಮಾರಾಟ ಮಾಡಿದ್ದ ದೇವರಾಜು ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.ಇಡಿ ತನಿಖಾ ಸಂಸ್ಥೆಯು ತನ್ನ ಇಸಿಐಆರ್‌ನಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪೊಲೀಸ್ ಎಫ್‌ಐಆರ್‌ಗೆ ಸಮಾನವಾದ ಹಣ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್‌ಗಳನ್ನು ಹಾಕಿರುವುದು ಗಮನಿಸಬೇಕಾದ ವಿಚಾರವಾಗಿದೆ.ಇ.ಡಿ ತನ್ನ ಕಾರ್ಯವಿಧಾನದ ಪ್ರಕಾರ, ಆರೋಪಿ ಸ್ಥಾನದಲ್ಲಿ ಇರುವವರನ್ನು ವಿಚಾರಣೆಗೆ ಕರೆಯಲು ಮತ್ತು ಅವಶ್ಯಕತೆ ಬಿದ್ದಲ್ಲಿ ಅವರ ಆಸ್ತಿಯನ್ನು ತನಿಖಾ ಅವಧಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಲು ಇಸಿಐಆರ್, ಮೊದಲಿಗೆ ದಾಖಲಿಸಿಕೊಳ್ಳುತ್ತದೆ.

ಎನ್ಫೋರ್ಸ್‌ಮೆಂಟ್ ಕೇಸ್ ಇನ್ಫಾರ್ಮೇಶನ್ ರಿಪೋರ್ಟ್, ಇದು ಪೊಲೀಸ್ ಭಾಷೆಯಲ್ಲಿ ಎಫ್‌ಐಆರ್ ಇದ್ದ ಹಾಗೇ. ಜಾರಿ ನಿರ್ದೇಶನಾಲಯವು ಯಾರನ್ನಾದರೂ ವಿಚಾರಣೆಗೆ ಅಥವಾ ಬಂಧಿಸುವ ಮುನ್ನ ಅಥವಾ ಆರೋಪಿಗಳ ಆಸ್ತಿಯನ್ನು ಮುಟ್ಟುಗೋಲು (ತನಿಖೆಯ ವೇಳೆ) ಹಾಕುವ ಮುನ್ನ ಇಸಿಐಆರ್ ಅನ್ನು ದಾಖಲಿಸಿಕೊಳ್ಳುತ್ತದೆ.


ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ 2002ರ ಕಾಯ್ದೆಯಡಿ, ಇಸಿಐಆರ್ ಎನ್ನುವುದು ಶಾಸನಬದ್ಧವಲ್ಲದ ದಾಖಲೆ/ಕ್ರಮ ಎಂದು ಪರಿಗಣಿಸಲಾಗುತ್ತದೆ.

ಇಸಿಐಆರ್ ಎನ್ನುವುದು ಯಾವುದೇ ಆರೋಪಿಯನ್ನು ವಿಚಾರಣೆ/ಬಂಧನ ಮಾಡುವಲ್ಲಿನ ಮೊದಲ ಹೆಜ್ಜೆಯಾಗಿದೆ. ಪಿಎಂಎಲ್‌ಎ ಕಾಯ್ದೆಯಲ್ಲಿ ಇಸಿಐಆರ್ ಬಗ್ಗೆ ಉಲ್ಲೇಖವಿಲ್ಲದಿದ್ದರೂ, ಇಡಿ ಇದನ್ನು ದಾಖಲಿಸುವ ಪದ್ಧತಿಯನ್ನು ಪಾಲಿಸಿಕೊಂಡು ಬರುತ್ತಿದೆ.ಇಸಿಆರ್ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದ್ದು, ಈ ಪೊಲೀಸರ ಎಫ್‌ಐಆರ್‌ಗೆ ಸರಿಸಮಾನವಾಗಿದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೆ ತನಿಖೆ ಹಂತದಲ್ಲಿ ಆಸ್ತಿಗಳನ್ನು ಸೀಜ್ ಮಾಡುವ ಅಧಿಕಾರವಿದೆ.ಈ ಸೆಕ್ಷನ್ ಅಡಿ ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಜಾರಿ ನಿರ್ದೇಶನಾಲಯಕ್ಕೆ ಅಧಿಕಾರವಿದೆ. ಇದಕ್ಕೆ ಯಾವುದೇ ನ್ಯಾಯಾಲಯದ ಅದೇಶ ಪಡೆಯಬೇಕು ಎಂಬ ನಿಯಮ ಕೂಡ ಇಲ್ಲ. ಸಂಬಂಧಪಟ್ಟ ಆಸ್ತಿಗಾಗಿ ಮನಿಲಾಂಡರಿಂಗ್ (ಹಣಕಾಸು ಅಕ್ರಮ ವರ್ಗಾವಣೆ) ನಡೆದಿದೆ ಎಂದು ತನಿಖಾಧಿಕಾರಿಗೆ ಅನಿಸಿದರೆ 180 ದಿನಗಳವರೆಗೂ ಆಸ್ತಿಯನ್ನು ಮುಟ್ಟಗೋಲು ಹಾಕಿಕೊಳ್ಳಬಹುದಾಗಿದೆ.

**ಮೊದಲ ಹಂತದ ಕಾಮಗಾರಿ ಆರಂಭ**

### ಎಫ್‌ಐಆರ್‌ಗೆ ಸಮನಾದ ಕ್ರಮವನ್ನು ತೆಗೆದುಕೊಳ್ಳಬಾರದು

**ಒಂದು ವೇಳೆ ಸಿಎಂ ಪತ್ನಿ ಈ ಸೈಟ್‌ಗಳನ್ನು ವಾಪಸ್ ಕೊಡದೇ ಇದ್ದಲ್ಲಿ ಜಾರಿ ನಿರ್ದೇಶನಾಲಯ ಯಾವುದೇ ಕ್ಷಣದಲ್ಲಿ ಮುಟ್ಟಗೋಲು ಹಾಕಿಕೊಳ್ಳುವ ಸಾಧ್ಯತೆ ಇದೆ. ಸೈಟ್‌ಗಳನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡರೆ ಸಿದ್ದರಾಮಯ್ಯಗೆ ದೊಡ್ಡ ಹಿನ್ನಡೆಯಾಗುವ ಸಾಧ್ಯತೆ ಇತ್ತು. ಇದಕ್ಕಾಗಿಯೇ ಕೂಡಲೆ ಸೈಟ್‌ಗಳನ್ನು ವಾಪಸ್ ಕೊಡುವ ನಿರ್ಧಾರ ಮಾಡಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಇನ್ನೊಂದು ಆದೇಶದ ಪ್ರಕಾರ, ಇತರ ತನಿಖಾ ಸಂಸ್ಥೆಗಳು ಈಗಾಗಲೇ ಎಫ್‌ಐಆರ್ ದಾಖಲಿಸಿದ್ದ ಸಂದರ್ಭದಲ್ಲಿ ಮತ್ತೊಂದು ತನಿಖಾ ಸಂಸ್ಥೆ ಹೊಸದಾಗಿ ಮತ್ತೊಂದು ಎಫ್‌ಐಆರ್‌ಗೆ ಸಮನಾದ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಮದ್ರಾಸ್ ಹೈಕೋರ್ಟ್ ನಲ್ಲಿ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ಇದರ ವಾದ-ಪ್ರತಿವಾದದ ನಂತರ ನ್ಯಾಯಮೂರ್ತಿ ಎಸ್.ಎಂ.ಸುಬ್ರಹ್ಮಣ್ಯಂ ಮತ್ತು ವಿ.ಶಿವಘಾನಂ ಅವರಿದ್ದ ದ್ವಿಸದಸ್ಯ ಪೀಠ ಇದಕ್ಕೆ ತಡೆ ನೀಡಲು ನಿರಾಕರಿಸಿತ್ತು. ಇದೇ ತಿಂಗಳ ಸೆಪ್ಟಂಬರ್ 11ಕ್ಕೆ ಈ ಆದೇಶ ಹೊರಬಿದ್ದಿತ್ತು.**



### ಸರ್ಕಾರದಿಂದ ಕೆಆರ್‌ಐಡಿಎಲ್ ಕಾಮಗಾರಿ

## ಪಾರದರ್ಶಕತೆಗೆ ಮಹತ್ವದ ಹೆಜ್ಜೆ

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಾಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ನಿರ್ವಹಿಸುವ ಕಾಮಗಾರಿಗಳ ಪ್ರಗತಿಯ ಸಂಪೂರ್ಣ ಮಾಹಿತಿಗಳು, ಕಾಮಗಾರಿಗಳನ್ನು ವಹಿಸುವ ಇಲಾಖೆಗಳಿಂದ ಬಿಡುಗಡೆ ಯಾಗುವ ಅನುದಾನದ ಸ್ವೀಕೃತಿ ಹಾಗೂ ಬಳಕೆ, ಸೂಕ್ತ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆ ಮುಂತಾದ ವಿವಿಧ ಅಂಶಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುಕೂಲವಾಗುವಂತೆ ಗಾಂಧಿ ಸಾಕ್ಷಿ ಕಾಯಕ 2.0 (ವರ್ಕ್ ಮಾನಿಟರಿಂಗ್ ಸಿಸ್ಟಂ) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು ಗಾಂಧಿ ಜಯಂತಿ ದಿನದಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಲೋಕಾರ್ಪಣೆಗೊಳಿಸಿದರು.

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಾಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಈ ಸಂಸ್ಥೆಯು ರಾಜ್ಯಾದ್ಯಂತ ತನ್ನ ಜಾಲವನ್ನು ಹೊಂದಿದ್ದು, ಸರ್ಕಾರದ ವತಿಯಿಂದ ಕೈಗೊಳ್ಳಲಾಗುವ ನಿರ್ಮಾಣ ಯೋಜನೆಗಳು ಹಾಗೂ ವಿವಿಧ ಇಲಾಖೆಗಳು ವಹಿಸುವ ಕಟ್ಟಡಗಳು, ರಸ್ತೆ ಅಭಿವೃದ್ಧಿ ಮೊದಲಾದ ಕಾಮಗಾರಿಗಳನ್ನು ಕಳೆದ 51 ವರ್ಷಗಳಿಂದ ನಿಗದಿತ ಕಾಲಾವಧಿಯಲ್ಲಿ ಉತ್ತಮ ಗುಣಮಟ್ಟದಿಂದ ಅನುಷ್ಠಾನಗೊಳಿಸುತ್ತಿದೆ. ಕೆಆರ್‌ಐಡಿಎಲ್ ಸಂಸ್ಥೆಯ ವಹಿವಾಟನ್ನು ಪಾರದರ್ಶಕಗೊಳಿಸುವ ನಿಟ್ಟಿನಲ್ಲಿ ಸೂಕ್ತ ತಂತ್ರಾಂಶದ ಅವಶ್ಯಕತೆ ಇದ್ದ ಕಾರಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೆಂಟರ್ ಫಾರ್ ಸ್ಮಾರ್ಟ್ ಗರನೆನ್ಸ್ ಮೂಲಕ ಈ ತಂತ್ರಾಂಶ ಸೌಲಭ್ಯವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

**ಗಾಂಧಿ ಸಾಕ್ಷಿ ಕಾಯಕ 2.0 ತಂತ್ರಾಂಶ ಲೋಕಾರ್ಪಣೆ**

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,745/Gram24ct ₹7,100/Gram22ct | ಬೆಳ್ಳಿ: ₹95.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ಡಾ. ಭಗವಾನ್ ರ ಮಾತಿಗೆ ಡಾ. ಸಿದ್ಧಾಶ್ರಮರ ಪ್ರತಿಕ್ರಿಯೆ

ಇತ್ತೀಚೆಗೆ ಕೆ. ಎಸ್. ಭಗವಾನ್ ಮಾನ ಮರ್ಯಾದೆ ಇದ್ದರೆ ಶೂದ್ರರು ದೇವಸ್ಥಾನಗಳಿಗೆ ಹೋಗಬಾರದೆಂದರು. ಇದನ್ನು ಅಲ್ಲಗಳೆದು ಬರೆದ ಸಿದ್ಧಸೂಕ್ತಿಗೆ ಧಾರವಾಡದ ಶ್ರೇಷ್ಠ ತತ್ತ್ವಜ್ಞಾನಿಗಳೂ ಚಿಂತಕರೂ ಆದ ನಿವೃತ್ತ ಪ್ರಾಧ್ಯಾಪಕ ಡಾ. ಬಸವರಾಜ ಸಿದ್ಧಾಶ್ರಮರು ಧ್ವನಿ ಸಂದೇಶ ನೀಡಿ ಬೆಂಬಲಿಸಿದರು. ಅವರ ಮಾತಿನ ಸಾರ: ಹಿಂದು ಧರ್ಮದ ವೇದೋಪನಿಷತ್ತುಗಳ ಬಹುಪಾಲು ಋಷಿಗಳು ಶೂದ್ರರು. ಮಹಾಭಾರತ ಹದಿನೆಂಟು ಪುರಾಣ ಬ್ರಹ್ಮಸೂತ್ರ ಬರೆದ ವ್ಯಾಸ ಬೆಸ್ತ ಶೂದ್ರ. ವೇದ ವಿಂಗಡಣೆ ಮಾಡಿದವರು ಅವರು. ವ್ಯಾಸೋಚ್ಛಿಷ್ಟಂ ಜಗತ್ಸರ್ವಂ = ಜಗದ ಜ್ಞಾನ ಭಂಡಾರ ವ್ಯಾಸರ ಎಂಜಲು. ರಾಮಾಯಣದ ಕರ್ತೃ ವಾಲ್ಮೀಕಿ ಬೇಡ ಶೂದ್ರ. ಕೃಷ್ಣ ಯಾದವ. ಬ್ರಹ್ಮ ಅರಿತವ ಬ್ರಾಹ್ಮಣ. ಈ ಅರ್ಥದಲ್ಲಿ ಇವರೆಲ್ಲ ಬ್ರಾಹ್ಮಣರೇ. ನಿಜ ಬ್ರಾಹ್ಮಣ ಭೇದ ಎಣಿಸಲಾರ. ಮೇಲ್ಕಂಡ ಎಲ್ಲಾರನ್ನೂ ಬ್ರಾಹ್ಮಣರು ಪೂಜಿಪರು ಎಂಬುದನ್ನು ಮರೆಯಬಾರದು. ಕೆಲವು ಸ್ವಾರ್ಥಿಗಳು ತಿಳಿಯದವರು ಜಾತಿಯ ಆಧಾರದಲ್ಲಿ ಅಸ್ಪೃಶ್ಯತೆ ಮುಂತಾದ್ದನ್ನು ಮಾಡಿದರು ಮಾಡುವರು. ಹಾಗೆಂದು ಸಂಪೂರ್ಣ ಹಿಂದುಧರ್ಮವನ್ನು ತೆಗಳುವುದು ಅಪರಾಧ. ಇವರೊಪ್ಪುವ ಬೌದ್ಧಧರ್ಮದಲ್ಲಿ ಹೀನಾಯಾನ ಮಹಾಯಾನಾದಿ ತಾರತಮ್ಯವಿಲ್ಲವೇ? ತಾರತಮ್ಯದ ಪಿಡುಗು ಯಾವ ಧರ್ಮವನ್ನೂ ಬಿಟ್ಟಿಲ್ಲ. ದೇಶದ ಏಕತೆಗಾಗಿ ಸಮಗ್ರ ಮಾನವಕುಲದ ಶಾಂತಿಗಾಗಿ ಎಲ್ಲಾರೂ ಅದರಲ್ಲೂ ಹಿಂದುಗಳು ಒಗ್ಗಟ್ಟಾಗಿರಬೇಕಿದೆ. ಕೆ. ಎಸ್. ಭಗವಾನ್ ರು ಏಕಪಕ್ಷೀಯವಾಗಿ ವರ್ತಿಸುತ್ತಿರುವುದು ತಪ್ಪು. ಹಂಸಕ್ಷೀರ ನ್ಯಾಯ ಪಾಲಿಸಬೇಕು. ಅವರನ್ನು ನಮ್ಮಂಥವರನ್ನು ತಾವು ಒಂದೆಡೆ ಸೇರಿಸಿ ತಿಳಿ ಹೇಳಬೇಕು.

# ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸುವುದು ಅನಿವಾರ್ಯ

## ಕಬ್ಬನ್ ಪಾರ್ಕ್ ಮುಂಭಾಗದಿಂದ ಸಸ್ಯಕಾಶಿ ಲಾಲ್‌ಬಾಗ್‌ವರೆಗೆ ಅರಣ್ಯ ಇಲಾಖೆ ಹಮಿಕೊಂಡಿದ್ದ ಜಾಗೃತಿ ನಡಿಗೆ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ವನ್ಯಜೀವಿಗಳ ಸಂಖ್ಯೆಯಲ್ಲಿನ ಹೆಚ್ಚಳ ಹಾಗೂ ಅರಣ್ಯ ಪ್ರದೇಶ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಕಾಡಿನಂಚಿನ ಜನರು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸುವುದು ಅನಿವಾರ್ಯ ಮತ್ತು ಇಂದಿನ ಅಗತ್ಯವಾಗಿದೆ ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ವನ್ಯ ಜೀವಿ ಸಂರಕ್ಷಣೆಯ ಸಂದೇಶವನ್ನು ಸಾರಲು ಇಂದಿನಿಂದ ಆರಂಭಗೊಂಡ 70ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಕಬ್ಬನ್ ಪಾರ್ಕ್ ಮುಂಭಾಗದಿಂದ ಸಸ್ಯಕಾಶಿ ಲಾಲ್‌ಬಾಗ್‌ವರೆಗೆ ಅರಣ್ಯ ಇಲಾಖೆ ಹಮಿಕೊಂಡಿದ್ದ, ಜಾಗೃತಿ ನಡಿಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಕೃತಿ ಮತ್ತು ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದಾಗಿದೆ. ಕಾಡಿನಲ್ಲಿ ಬೆಳೆಯುವ ಹುಲ್ಲು, ಸೊಪ್ಪನ್ನು ಜಿಂಕೆ, ಕಡವೆ, ಕೃಷ್ಣಮೃಗ ಸೇರಿದಂತೆ ಮೊದಲಾದ ಸಸ್ಯಹಾರಿ ಪ್ರಾಣಿಗಳು ತಿನ್ನುತ್ತವೆ. ಈ ಸಸ್ಯಹಾರಿ ಪ್ರಾಣಿಗಳನ್ನು ಚಿರತೆ, ಹುಲಿ, ಕತ್ತೆಕಿರುಬ ಮೊದಲಾದ ಪ್ರಾಣಿಗಳು ಬೇಟೆಯಾಡುತ್ತವೆ.

ಹೀಗೆ ಪ್ರಕೃತಿ ಸಮತೋಲನ ಕಾಪಾಡುತ್ತವೆ. ಈ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಗೂ ನಮಂತೆಯೇ ಬದುಕುವ ಹಕ್ಕಿದೆ. ಅದು ವನ್ಯಜೀವಿಯಾಗಿರಲಿ, ಕೀಟವೇ ಆಗಿರಲಿ, ಪಕ್ಷಿಯೇ ಆಗಿರಲಿ ಅಥವಾ ಸಸ್ಯ ಸಂಕುಲವೇ ಆಗಿರಲಿ ಎಲ್ಲಾ ಜೀವಿ, ಸಸ್ಯಗಳಿಗೂ ಬದುಕುವ ಹಕ್ಕಿದೆ. ಆದರೆ ಇಂದು ಹಲವು ವನ್ಯ ಜೀವಿಗಳು ಅಳಿವಿನ ಅಂಚಿನಲ್ಲಿವೆ. ಕೆಲವು ನಶಿಸಿಹೋಗಿವೆ.



70ನೇ ವನ್ಯಜೀವಿ ಸಪ್ತಾಹ

ಉದಯವಾಹಿನಿ ಚಿತ್ರ

> ಈ ನಡಿಗೆ ನಾಡಿನ ಜನರಲ್ಲಿ ಜಾಗೃತಿ ಮೂಡಿಸಲಿ, ಅರಣ್ಯ ವನ್ಯಜೀವಿ ಉಳಿಯಲಿ. ನಾವು ನೀವು ಕೂಡಿ ಕಬ್ಬನ್ ಉದ್ಯಾನದಿಂದ ಲಾಲ್ ಬಾಗ್‌ವರೆಗೆ ನಡೆಯೋಣ. ವನ್ಯಜೀವಿ ಸಂರಕ್ಷಣೆ ಮತ್ತು ಸಹಬಾಳ್ವೆಯ ಸಂದೇಶ ಸಾರೋಣ.
> -ಈಶ್ವರ ಖಂಡ್ರೆ, ಅರಣ್ಯ ಸಚಿವ

> ಚಿತ್ರನಟ ರಿಷಬ್ ಶೆಟ್ಟಿ ಮಾತನಾಡಿ, ತಮ ಚಿತ್ರದಲ್ಲಿ ಕೂಡ ಸಹಬಾಳ್ವೆಯ ಸಂದೇಶ ಸಾರಲಾಗಿದ್ದು, ಅರಣ್ಯ ಸಂರಕ್ಷಣೆ ಎಲ್ಲಾರ ಹೊಣೆಯಾಗಿದೆ. ನಾವು ಅರಣ್ಯವನ್ನು ಮತ್ತು ಅರಣ್ಯದಲ್ಲಿನ ಸಂಪತ್ತನ್ನು, ವನ್ಯಜೀವಿಗಳನ್ನು ಸಂರಕ್ಷಿಸಬೇಕು
> -ರಿಷಬ್ ಶೆಟ್ಟಿ, ನಾಯಕ ನಟ

**ವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಸಂರಕ್ಷಣಾ ಕಾಯಿದೆ**

ನಮ್ಮ ದೇಶವನ್ನಾಳಿದ ಪ್ರಥಮ ಮಹಿಳಾ ಪ್ರಧಾನಮಂತ್ರಿ ಇಂದಿರಾಗಾಂಧಿ ಅವರಿಗೆ ದೂರದರ್ಶಿತ್ವ ಇತ್ತು. ಹೀಗಾಗಿಯೇ ಅವರು ವನ್ಯಜೀವಿ ಸಂರಕ್ಷಣಾ ಕಾಯಿದೆ 1972, ಅರಣ್ಯ ಸಂರಕ್ಷಣಾ ಕಾಯಿದೆ 1980ನ್ನು ಜಾರಿಗೆ ತಂದರು. ಇದರ ಫಲವಾಗಿ ಇಂದಿಗೂ ಅರಣ್ಯ, ವನ್ಯ ಜೀವಿಗಳು ಉಳಿದಿವೆ. ಈ ಎರಡು ಕಾಯಿದೆ ಇಲ್ಲದೆ ಇದ್ದಿದ್ದರೆ ಇಂದು ವನ್ಯ ಮೃಗಗಳನ್ನು ಮತ್ತು ಕಾಡುಗಳನ್ನು ನಾವು ಫೋಟೋದಲ್ಲಿ ನೋಡಬೇಕಾದ ಸ್ಥಿತಿ ಬರುತ್ತಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದರು. ಭೂಭಾಗದ ಶೇ.33ರಷ್ಟು ಅರಣ್ಯ ಇರಬೇಕು ಆದರೆ, ರಾಜ್ಯದಲ್ಲಿ 22ರಷ್ಟು ಮಾತ್ರ ಹಸಿರು ಹೊದಿಕೆ ಇದೆ. ಜೊತೆಗೆ ನಾನು ಸಚಿವನಾದ ತರುವಾಯ ಹಲವಾರು ವರ್ಷಗಳಿಂದ ಒತ್ತುವರಿ ಮಾಡಲಾಗಿದ್ದ ಸಾವಿರಾರು ಎಕರೆ ಅರಣ್ಯ ಭೂಮಿಯನ್ನು ತೆರವು ಮಾಡಿಸಿದ್ದೇನೆ. ಹೊಸದಾಗಿ 10 ಸಾವಿರ ಎಕರೆ ಭೂಮಿಯನ್ನು ಅರಣ್ಯ ಎಂದು ಘೋಷಿಸಲಾಗಿದೆ. ಅಂದರೆ ರಾಜ್ಯದಲ್ಲಿನ ಅರಣ್ಯ ಪ್ರದೇಶ ವ್ಯಾಪ್ತಿ ಹೆಚ್ಚಳವಾಗುತ್ತಿದೆ.

ಹೀಗಾಗಿ ಜನರಲ್ಲಿ ಅರಣ್ಯದ ಬಗ್ಗೆ ವನ್ಯ ಜೀವಿಗಳ ಬಗ್ಗೆ ಜಾಗೃತಿ ಮೂಡಿಸಲು ವನ್ಯಜೀವಿ ಸಪ್ತಾಹವನ್ನು ಆಚರಿಸಲಾಗುತ್ತದೆ ಎಂದರು.

ಅರಣ್ಯ ವ್ಯಾಪ್ತಿ ಕ್ಷೀಣಿಸಿದರೆ, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ.

ಇದಕ್ಕೆ ಅರಣ್ಯ ಪ್ರದೇಶ ಒತ್ತುವರಿಯಾಗದಂತೆ ತಡೆಯುವುದೂ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಶ್ರಮಿಸುತ್ತಿದೆ. 2015ರ ನಂತರದ ಅರಣ್ಯ ಒತ್ತುವರಿ ತೆರವು ಮಾಡುಸುತ್ತಿದೆ. ಈ ಪೈಕಿ ಪಟ್ಟಾ ಭೂಮಿಯೂ ಸೇರಿ 3 ಎಕರೆಗಿಂತ ಕಡಿಮೆ ಒತ್ತುವರಿ ಮಾಡಿರುವವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವವರೆಗೆ ಒಕ್ಕಲೆಬ್ಬಿಸಬೇಡಿ ಎಂದು ಸೂಚಿಸಿದ್ದೇವೆ. ಆದರೆ ಇದಕ್ಕೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸುಳ್ಳು ಪ್ರಚಾರ ಮಾಡಿ ಉದ್ದೇಶ ಹಾಳು ಮಾಡಲು ಪ್ರಯತ್ನಿಸುತ್ತಿದ್ದಾರೆ. ನಾವು ದೊಡ್ಡ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸುತ್ತೇವೆ. ಹೊಸ ಒತ್ತುವರಿದಾರರ ಮೇಲೆ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುತ್ತೇವೆ.

# ಮತ್ತೊಂದು ವಿವಾದದಲ್ಲಿ ಸಿಎಂ ಸಿದ್ದರಾಮಯ್ಯ ನಡೆಗೆ ವ್ಯಾಪಕ ಟೀಕೆ!

• ಉದಯವಾಹಿನಿ ಬೆಂಗಳೂರು

ಮುಡಾ ಹಗರಣದ ಸಂಕಷ್ಟದಲ್ಲಿರುವಂತ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು, ಈಗ ಮತ್ತೊಂದು ವಿವಾದದಲ್ಲಿ ಸಿಲುಕಿದ್ದಾರೆ. ಅದೇ ರಾಷ್ಟ್ರಧ್ವಜ ಹಿಡಿದಿದ್ದಂತ ಕಾಂಗ್ರೆಸ್ ಕಾರ್ಯಕರ್ತನೊಬ್ಬನಿಂದ ತಮ್ಮ ಶೂ ಲೇಸ್ ಕಟ್ಟಿಸಿಕೊಂಡು ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾರೆ.ಈ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದು, ಗುಲಾಮಗಿರಿಯ ದವಡೆಯಿಂದ ಮುಕ್ತವಾದ ಭಾರತ, ಇಂದು ವಿಶ್ವದ ಮುಂಚೂಣಿ ರಾಷ್ಟ್ರವಾಗಿದೆ. ರಾಷ್ಟ್ರಭಕ್ತಿ, ರಾಷ್ಟ್ರಧ್ವಜ, ರಾಷ್ಟ್ರ ಭಕ್ತರು ಎಂದರೆ ಕಾಂಗ್ರೆಸ್'ಗೆ ಯಾವಾಗಲೂ ಕಾಲ ಕಸ ಎಂಬುದಾಗಿ ಕಿಡಿಕಾರಿದ್ದಾರೆ.ಗುಲಾಮಗಿರಿಯನ್ನು ಆರಾಧಿಸಿಕೊಂಡು ಬಂದ ಕಾಂಗ್ರೆಸ್ಸಿಗರು ರಾಷ್ಟ್ರಧ್ವಜವನ್ನು ಗಾಂಧಿ ಜಯಂತಿಯಂದೇ ಗುಲಾಮಗಿರಿಯ ಸಂಕೇತದಂತೆ ಕಾಲಕಸವಾಗಿ ಕಂಡಿರುವುದು, ಸ್ವತಃ ಮುಖ್ಯಮಂತ್ರಿಗಳು ಅದನ್ನು ಆಕ್ಷೇಪಿಸದೆ ಉತ್ತೇಜಿಸುವ ಮಾದರಿಯಲ್ಲಿ ಉಡಾಫೆ ಪ್ರದರ್ಶಿಸಿರುವುದು ರಾಷ್ಟ್ರ ಹಾಗೂ ರಾಷ್ಟ್ರಧ್ವಜಕ್ಕೆ ಮಾಡಿದ ಅಪಮಾನವಾಗಿದೆ ಎಂಬುದಾಗಿ ವಾಗ್ದಾಳಿ ನಡೆಸಿದ್ದಾರೆ. ಈ ಕೂಡಲೇ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಕಾಂಗ್ರೆಸ್ ಭಾರತೀಯರ ಕ್ಷಮೆ ಕೇಳುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಆಗ್ರಹಿಸಿದ್ದಾರೆ.

# ಸಂಸತ್ತಿನಲ್ಲಿ ಹಕ್ಕು ಚ್ಯುತಿ ಮಂಡಿಸಿ ಛೀಮಾರಿ ಹಾಕಬೇಕು: ಮಂಜುನಾಥ್



ಉದಯವಾಹಿನಿ ಚಿತ್ರ

• ಉದಯವಾಹಿನಿ ರಾಮನಗರ

ಜವಾಬ್ದಾರಿಯುತ ಐಪಿಎಸ್ ಅಧಿಕಾರಿಯ ಹುದ್ದೆಯಲ್ಲಿದ್ದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಕೀಳು ಮಟ್ಟದ ಭಾಷೆ ಬಳಸಿರುವ ಚಂದ್ರಶೇಖರ್ ವಿರುದ್ಧ ಸಂಸತ್ತಿನಲ್ಲಿ ಹಕ್ಕು ಚ್ಯುತಿ ಮಂಡನೆ ಮಾಡಿ ಛೀಮಾರಿ ಹಾಕಬೇಕು ಎಂದು ಸಂಸದ ಡಾ.ಸಿ.ಎನ್ ಮಂಜುನಾಥ್ ಅಭಿಪ್ರಾಯಪಟ್ಟರು. ರಾಮನಗರದ ಸಂಸದರ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಕೂಡ ಆರೋಪಿ ಎನ್ನುವ ಮೂಲಕ ನೇರವಾಗಿ ಅವರನ್ನು ಪ್ರಾಣಿಗೆ ಹೋಲಿಸಿದ್ದು ಖಂಡನೀಯ. ಇಂತಹ ಅಧಿಕಾರಿಯ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರ ಬಗ್ಗೆಯೇ ಈ ರೀತಿ ಮಾತನಾಡಿರುವ ಚಂದ್ರಶೇಖರ್ ಸಾಮಾನ್ಯ ಜನರ ಜೊತೆಗೆ ಹೇಗೆ ವರ್ತಿಸಬಹುದು ಎಂದು ಊಹಿಸಬಹುದು. ಚಂದ್ರಶೇಖರ್ ಪತ್ರದ ಹಿಂದೆ ಸರ್ಕಾರದ ಪಾತ್ರ ಇದೆಯಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಂಜುನಾಥ್, ಈ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಈ ಅನುಮಾನವನ್ನು ಕುಮಾರಸ್ವಾಮಿ ಅವರೂ ವ್ಯಕ್ತಪಡಿಸಿದ್ದಾರೆ. ಇದನ್ನು ಬಹಿರಂಗ ಮಾಡಲು ತನಿಖೆ ನಡೆಯಬೇಕು ಎಂದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದಸ್ವಾಮಿ ಹಾಗೂ ಮುಖಂಡರು ಹಾಜರಿದ್ದರು.

# ಎಐಸಿಸಿ ಅಧಿವೇಶನಕ್ಕೆ 100 ವರ್ಷ ಕಾಂಗ್ರೆಸ್ಸಿಗರ ಗಾಂಧಿ ನಡಿಗೆ

• ಉದಯವಾಹಿನಿ, ಬೆಂಗಳೂರು

ಮಹಾತ್ಮ ಗಾಂಧೀಯವರು ಬೆಳಗಾವಿಯಲ್ಲಿ ನಡೆದ ಎಐಸಿಸಿ ಅಧಿವೇಶನದ ಅಧ್ಯಕ್ಷತೆ ವಹಿಸಿ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಇಂದು ರಾಜ್ಯಾದ್ಯಂತ ಗಾಂಧಿನಡಿಗೆಯನ್ನು ಆಯೋಜಿಸಲಾಗಿತ್ತು.ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರ ಜೊತೆಗೂಡಿ ಬೆಂಗಳೂರು ಸೇರಿದಂತೆ ಹಲವು ಕಡೆ ಜನಪ್ರತಿನಿಧಿಗಳು, ಕಾಂಗ್ರೆಸ್ ಪ್ರಮುಖ ನಾಯಕರು ಗಾಂಧಿ ನಡಿಗೆಯಲ್ಲಿ ಹೆಜ್ಜೆ ಹಾಕಿದರು.


ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಎಚ್.ಕೆ.ಪಾಟೀಲ್, ಪ್ರಿಯಾಂಕ್ ಖರ್ಗೆ, ಶಾಸಕರಾದ ರಿಜ್ವಾನ್ ಹರ್ಷದ್, ಮುಖಂಡರಾದ ವಿ.ಎಸ್.ಉಗ್ರಪ್ಪ, ಗಾಂಧಿ ಪ್ರತಿಷ್ಠಾನದ ವೂಡೆ ಪಿ ಕೃಷ್ಣ ಸೇರಿದಂತೆ ಮತ್ತಿತರರು ಗಾಂಧಿಭವನದ ಬಳಿಯಿರುವ ಮಹಾತ ಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಾಲ್ನಡಿಗೆ ಜಾಥಾ ಆರಂಭಿಸಿದರು.ಅಲ್ಲಿಂದ ರೇಸ್ಕೋರ್ಸ್ ರಸ್ತೆ, ಚಾಲುಕ್ಯ ವೃತ್ತದ ಮೂಲಕ ವಿಧಾನಸೌಧದ ಬಳಿಯಿರುವ ಮಹಾತಗಾಂಧೀಜಿ ಪ್ರತಿಮೆವರೆಗೂ ಗಾಂಧಿ ನಡಿಗೆ ನಡೆಯಿತು. ಡಿ.ಕೆ.ಶಿವಕುಮಾರ್‌ರವರು ರಾಷ್ಟ್ರಧ್ವಜ ಹಿಡಿದು ಸಿದ್ದರಾಮಯ್ಯನವರೊಂದಿಗೆ ಹೆಜ್ಜೆ ಹಾಕಿದರು.ಆರಂಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಡಿ.ಕೆ.ಶಿವಕುಮಾರ್ ಗಾಂಧಿ ಟೋಪಿ ತೊಡಿಸಿದರು. ಬಿಬಿಎಂಪಿಯ ಹಿರಿಯ ಅಧಿಕಾರಿಗಳಿಗೂ ಗಾಂಧಿ ಟೋಪಿಯನ್ನು ತೊಡಿಸಲಾಯಿತು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್‌ರವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾಗಿ ನೇತೃತ್ವ ವಹಿಸಿದ್ದರು. ಅಲ್ಲಿಂದಲೇ ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ ನೀಡಲಾಯಿತು.

# ನೀರು, ವನ್ಯಜೀವಿ ಸಂರಕ್ಷಣೆಗೆ ದೇಶ ಪರ್ಯಟನೆ

• ಉದಯವಾಹಿನಿ, ವಿಜಯಪುರ(ದೇವನಹಳ್ಳಿ)

ದೇಶ ಸುತ್ತಬೇಕು, ಕೋಶ ಓದಬೇಕು ಎನ್ನುವ ಗಾದೆ ಮಾತಿನಂತೆ ಜೀವನಾನುಭವ ಪಡೆಯಲು ಈ ಎರಡು ಕಾರ್ಯ ಮಾಡುವುದು ಉತ್ತಮ. ಬೇರೆ ಬೇರೆ ಪ್ರದೇಶ ಸಂದರ್ಶಿಸಿ ಅಲ್ಲಿನ ಸಮಾಜ, ಜನರ ಜೀವನ ಶೈಲಿ ಅನುಭವಿಸುವುದಾರೆ, ಮತ್ತೊಂದು ಜ್ಞಾನಾರ್ಜನೆ.ಈ ನಿಟ್ಟಿನಲ್ಲಿ ಪ್ರಕೃತಿ, ನೀರಿನ ಸಂರಕ್ಷಣೆ ಜತೆಗೆ ವನ್ಯಜೀವಿ ಸಂರಕ್ಷಣೆ ಕುರಿತು, ಕನ್ನಡ ಭಾಷೆ ಸೊಗಡು ಎಲ್ಲೆಡೆ ಪಸರಿಸಬೇಕು ಎನ್ನುವ ಧ್ಯೇಯ ಗುರಿಯಾಗಿಸಿಕೊಂಡು ಸೆ.2ರಿಂದ 30ರವರೆಗೆ 8,100 ಕೀ.ಮೀ.ವ್ಯಾಪ್ತಿಯನ್ನು ದ್ವಿಚಕ್ರ ವಾಹನದಲ್ಲಿ ಕ್ರಮಿಸುವ ಮೂಲಕ 29 ದಿನಗಳ ಪ್ರವಾಸ ಮುಗಿಸಿ ಬಂದ ಪಟ್ಟಣದ 46ವರ್ಷದ ಎಸ್. ಕುಮಾರ್ ಅವರನ್ನು ಸ್ಥಳೀಯರು ಮಂಗಳವಾರ ಮುಂಜಾನೆ ಬರಮಾಡಿಕೊಂಡರು.

ಈ ಕುರಿತು ಮಾತನಾಡಿ ಎಸ್.ಕುಮಾರ್, '29 ದಿನ ಪ್ರವಾಸದಲ್ಲಿ ಹಲವು ರಾಜ್ಯ, ಅಲ್ಲಿನ ಜನರ ಜೀವನ ಶೈಲಿ, ಅಲ್ಲಿನ ಸಂಸ್ಕೃತಿ ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಕನ್ನಡ ಭಾಷೆ ಹಿರಿಮೆ ಸಾರಲಾಯಿತು. ಹಲವು ರಾಜ್ಯಗಳ ಜನರು, ಕನ್ನಡದ ಧ್ವಜ ಹಿಡಿದು, ಫೋಟೊ ತೆಗೆಸಿಕೊಂಡು ಕನ್ನಡ ಭಾಷೆ ಕಲಿಯುವ ಪ್ರಯತ್ನ ಮಾಡಿದರು'. ನಾಡಿನಲ್ಲಿರುವ



ಉದಯವಾಹಿನಿ ಚಿತ್ರ

ಉದ್ಯಾನ, ಜಲಪಾತ, ನಮ್ಮಲ್ಲಿರುವ ಮಠಗಳ ಬಗ್ಗೆ ಮಾತನಾಡಿಸಿ ಮಾಹಿತಿ ಪಡೆದರು. ದ್ವಿಚಕ್ರ ವಾಹನದ ಮೇಲೆ ಅಂಟಿಸಿದ್ದ ಪುನೀತ್ ರಾಜ್ ಕುಮಾರ್ ಫೋಟೊ ಸುಲಭವಾಗಿ ಗುರ್ತಿಸಿ ಉಪಚರಿಸಿದರು. ಗೊತ್ತಿಲ್ಲದ ಮಾರ್ಗಗಳ ಬಗ್ಗೆ ತಿಳಿಸಿಕೊಟ್ಟರು. ಅವರಲ್ಲಿ ಪೊಲೀಸ್ ಅಧಿಕಾರಿಗಳೂ ಇದ್ದರು. 'ಕೆಲವು ರಾಜ್ಯಗಳಲ್ಲಿ ದ್ವಿಚಕ್ರ ವಾಹನ ಹಿಂಬಾಲಿಸಿದ ಪೊಲೀಸರು ವಾಹನ ಅಡ್ಡಗಟ್ಟಿ ತಡೆದಿದ್ದರು. ಪುನೀತ್ ರಾಜ್ ಕುಮಾರ್ ಫೋಟೊ ನೋಡುತ್ತಿದ್ದಂತೆ ನೀವು ಕರ್ನಾಟಕದವರಾ? ಎಂದು ಪ್ರೀತಿಯಿಂದ ಮಾತನಾಡಿಸಿ ಉಪಚರಿಸಿದರು. ಒಂದು ಹೊಟೇಲ್ ಗೆ ಹೋದಾಗ ತುಂಬಾ ಬಳಲಿದ್ದೆ. ಅಲ್ಲಿನ ಹೊಟೇಲ್ ಮಾಲೀಕರು, ಪುನೀತ್ ರಾಜ್ ಕುಮಾರ್ ಫೋಟೊ ಕಂಡು, ನನ್ನನ್ನು ಸ್ವಲ್ಪ ದೂರದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ಬೇಸರದಿಂದಲೇ ದೂರ ಹೋಗಿ ಕುಳಿತ ನಂತರ, ಅವರು ನನ್ನನ್ನು ಫ್ಯಾನ್ ಕೆಳಗೆ ಕೂರಿಸಿರುವುದು ಅರಿವಿಗೆ ಬಂತು' ಎಂದು ಭಾವುಕರಾದರು.

**ವನ್ಯಜೀವಿ ಸಂರಕ್ಷಣೆ ಜಾಗೃತಿ**

'ನಾನು ತೆರಳಿದ ಬಹುತೇಕ ರಸ್ತೆಗಳು ದಟ್ಟವಾದ ಅರಣ್ಯದಿಂದ ಕೂಡಿದ್ದವು. ಇಲ್ಲಿನ ಹೊಟೇಲ್ ಬಳಿಯಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ, ರಸ್ತೆಯಲ್ಲಿ ಸಂಚಾರ ಮಾಡುವ ಯಾವುದೇ ಪ್ರಾಣಿಗಳಿಗೆ ಹಾನಿಯುಂಟು ಮಾಡದಂತೆ ಜಾಗೃತಿ ಮೂಡಿಸುತ್ತಿದ್ದೆ. ಬಹಳಷ್ಟು ಮಂದಿ ಈ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು' ಎಂದರು. 'ನಾನು ಪ್ರಕೃತಿ, ನೀರಿನ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಆರಂಭಿಸಿದ ನನ್ನ ಪ್ರವಾಸಕ್ಕೆ ಸ್ಥಳೀಯ ಮಾಜಿ ಪುರಸಭೆ ಸದಸ್ಯ ಬಲಮುರಿ ಶ್ರೀನಿವಾಸ್, ಚೈತನ್ಯ ತುಂಬಿದರು. ನಾವು ಹೋಗಿದ್ದ ದೇಶದ ಬಹುತೇಕ ರಾಜ್ಯಗಳಲ್ಲಿ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಸಿದ್ದರು. ಇದರಿಂದಾಗಿ ಎಲ್ಲಾ ರಾಜ್ಯಗಳಲ್ಲಿ ಸ್ನೇಹಿತರನ್ನು ಸಂಪಾದಿಸಲು ಸಾಧ್ಯವಾಯಿತು' ಎಂದು ಹೇಳಿದರು.

# 3 ದಿನ ಬೆಳಗಾವಿಯಲ್ಲಿ ಕಿತ್ತೂರು ವಿಜಯೋತ್ಸವ ಆಚರಣೆ

• ಉದಯವಾಹಿನಿ, ಬೆಂಗಳೂರು



ಇದೆ ಅಕ್ಟೋಬರ್ 23 ರಿಂದ 25 ರವರೆಗೆ ಬೆಳಗಾವಿಯಲ್ಲಿ ಕಿತ್ತೂರು ವಿಜಯೋತ್ಸವ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.ಅವರು ಇಂದು ವಿಧಾನಸೌಧದ ಮುಂಭಾಗ ಕಿತ್ತೂರು ವಿಜಯ ಜ್ಯೋತಿ ಯಾತ್ರೆಗೆ ಚಾಲನೆ ನೀಡಿದರು. ಇದೇ ವೇಳೆ ಕಿತ್ತೂರು ಉತ್ಸವದ ಪೋಸ್ಟರ್? ಬಿಡುಗಡೆ ಮಾಡಿ,ಕಿತ್ತೂರು ರಾಣಿ ಚೆನ್ನಮ್ಮನವರು ನಮಗೆಲ್ಲ ಸ್ವಾಭಿಮಾನದ ಸಂಕೇತ.ಬ್ರಿಟಿಷರು ಜಾರಿಗೆ ತಂದಿದ್ದ ತೆರಿಗೆ ನೀತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಕಿತ್ತೂರು ರಾಣಿ ಚೆನ್ನಮ್ಮ ಅವರು ವಿರೋಧ ಮಾಡಿದ್ದರು. ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರಿಗೆ ತೆರಿಗೆ ಕೊಡಲ್ಲ ಅಂತ ನೇರವಾಗಿ ಹೇಳಿದರು.

**ಸಿಎಂ ಸಿದ್ದರಾಮಯ್ಯ ಘೋಷಣೆ!**

1824ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರೊಂದಿಗೆ ಹೋರಾಡಿ ವಿಜಯಶಾಲಿಯಾದರು. ಈ ಯುದ್ಧ ನಡೆದು 200 ವರ್ಷಗಳಾಗಿವೆ. ಹೀಗಾಗಿ ವಿಜಯೋತ್ಸವ ಆಚರಣೆ ಮಾಡುತ್ತಿದ್ದೇವೆ. ಕಿತ್ತೂರು ವಿಜಯ ಜ್ಯೋತಿ ಯಾತ್ರೆ ಇಂದಿನಿಂದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕಿತ್ತೂರು ತಲುಪಲಿದೆ. ಕಿತ್ತೂರು ಉತ್ಸವಕ್ಕೆ ರಾಜ್ಯ ಸರ್ಕಾರದಿಂದ ಎಲ್ಲಾ ನೆರವು ನೀಡುತ್ತಿದ್ದೇವೆ ಎಂದರು.ಬೆಳಗಾವಿಯಲ್ಲಿ 1924ರ ಡಿಸೆಂಬರ್? 24ರಂದು ಕಾಂಗ್ರೆಸ್ ಅಧಿವೇಶ ನಡೆಯಿತು. ಇದರ ಶತಮಾನೋತ್ಸವ ಆಚರಣೆ ಮಾಡುತ್ತಿದ್ದೇವೆ. ಮೊದಲ ಶತಮಾನೋತ್ಸವ ಕಾರ್ಯಕ್ರಮ ಬೆಳಗಾವಿಯಲ್ಲಿ ನಡೆಯುತ್ತದೆ. ಸಚಿವ ಹೆಚ್.ಕೆ ಪಾಟೀಲ್ ಅವರು ಇದಕ್ಕೆ ಅಧ್ಯಕ್ಷರಾಗಿರುತ್ತಾರೆ. ಮಹಾತ್ಮ ಗಾಂಧಿಜಿಯವರು ಶಾಂತಿಯುತವಾಗಿ, ಸತ್ಯಗ್ರಹದಿಂದ ಬ್ರಿಟಿಷರನ್ನು ದೇಶದಿಂದ ಓಡಿಸಿ ಸ್ವಾತಂತ್ರ್ಯ ತಂದುಕೊಟ್ಟರು ಎಂದು ಹೇಳಿದರು.ಕಿತ್ತೂರು ಉತ್ಸವದ ವೇಳೆ 'ಅಬ ಸಿದ್ದರಾಮಯ್ಯ' ಶರ್ಟ್‌ಗೆ ತಗುಲಿದ ಬೆಂಕಿ ಅಪಾಯದಿಂದ ಪಾರು..!

ಸಿಎಂ ಸಿದ್ದರಾಮಯ್ಯ ಶರ್ಟ್ ಗೆ ಬೆಂಕಿಯ ಶಾಖ ತಗುಲಿದ ಘಟನೆ ಬೆಂಗಳೂರಿನಲ್ಲಿ ಕಿತ್ತೂರು ಉತ್ಸವಕ್ಕೆ ಚಾಲನೆ ನೀಡುವ ವೇಳೆ ನಡೆದಿದೆ. ಕಿತ್ತೂರು ಉತ್ಸವಕ್ಕೆ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದಾಗ ಪಕ್ಕದಲ್ಲೇ ಇದ್ದ ಜ್ಯೋತಿಯ ಶಾಖ ಸಿದ್ದರಾಮಯ್ಯ ಶರ್ಟ್‌ಗೆ ತಗುಲಿದೆ.ಕೂಡಲೇ ಗನ್ ಮ್ಯಾನ್ ಸಿಎಂ ಸಿದ್ದರಾಮಯ್ಯರನ್ನು ಪಕ್ಕಕ್ಕೆ ಸರಿಯುವಂತೆ ಹೇಳಿದ್ದಾರೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಗಾಂಧಿ ಜಯಂತಿ ಶುಭಾಶಯ ಕೋರಿದ ಸಿಎಂ :ಕೋಮುವಾದ, ಸರ್ವಾಧಿಕಾರ ಮತ್ತು ಹಿಂಸೆಯಿಂದ ಕೂಡಿರುವ ಜಗತ್ತಿನಲ್ಲಿ ಸತ್ಯ, ಶಾಂತಿ ಮತ್ತು ಅಹಿಂಸೆಯ ಸಾಕಾರಮೂರ್ತಿಯಾಗಿದ್ದ ಮಹಾತ್ಮ ಗಾಂಧೀಜಿಯವರು ಮಾತ್ರ ನಮ್ಮ ಕೈಹಿಡಿದು ಮುನ್ನಡೆಸಬಲ್ಲರು. ಸತ್ಯದ ಸತ್ವ ಪರೀಕ್ಷೆಯನ್ನು ಎದುರಿಸುತ್ತಿರುವ ಈಗಿನ ನನ್ನ ಹೋರಾಟಕ್ಕೆ ಕೂಡಾ ಬಾಪುವಿನ ಬದುಕು ಮತ್ತು ಚಿಂತನೆಗಳೇ ಧೈರ್ಯ, ಶಕ್ತಿ ಮತ್ತು ಭರವಸೆಯನ್ನು ನೀಡಿದೆ. ನಾಡಿನ ಸಮಸ್ತ ಜನತೆಗೆ ಗಾಂಧಿ ಜಯಂತಿಯ ಹಾರ್ದಿಕ ಶುಭಾಶಯಗಳು ಎಂದು ಟ್ವೀಟ್ ಮಾಡಿದ್ದಾರೆ.

# ಪಾಕ್ ಕುಟುಂಬ ಬಂಧನ: ತನಿಖೆ ಚುರುಕು

• ಉದಯವಾಹಿನಿ, ಆನೇಕಲ್

ಪಾಕಿಸ್ತಾನದ ಕುಟುಂಬದ ನಾಲ್ವರು ಹೆಸರು ಬದಲಾಯಿಸಿಕೊಂಡು ಆರು ವರ್ಷಗಳಿಂದ ಜಿಗಣಿಯಲ್ಲಿ ನೆಲೆಸಿದ್ದ ಪ್ರಕರಣವನ್ನು ಕೇಂದ್ರ ಗುಪ್ತಚರ ವಿಭಾಗ, ಕೇಂದ್ರ ತನಿಖಾ ಸಂಸ್ಥೆ ಎನ್ಐಎ ಗಂಭೀರವಾಗಿ ಪರಿಗಣಿಸಿದ್ದು, ವಿವಿಧ ಆಯಾಮಗಳಲ್ಲಿ ನಡೆಯುತ್ತಿರುವ ತನಿಖೆಯನ್ನು ಚುರುಕುಗೊಳಿಸಲಾಗಿದೆ.

ಈ ನಡುವೆ ಆನೇಕಲ್ ಉಪ ವಿಭಾಗದ ಪೊಲೀಸರು ಕೂಡ ಬಂಧಿತರ ಮಾಹಿತಿ ಕಲೆ ಹಾಕುತ್ತಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಅ.9ರವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದೆ.ಜಿಗಣಿಗೆ ಭೇಟಿ ನೀಡಿದ ಕಾನೂನು ಮತ್ತು ಸುವ್ಯವಸ್ಥೆಯ ಎಡಿಜಿಪಿ ಆರ್.ಹಿತೇಂದ್ರ, ಮತ್ತು ಕೇಂದ್ರ ವಲಯ ಐಜಿಪಿ ಲಾಭೂರಾಮ ಅವರು ಪ್ರಕರಣದ ಬಗ್ಗೆ ತನಿಖಾ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಆರೋಪಿಗಳು ಭಾರತದ ಪಾಸ್‌ಪೋರ್ಟ್, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಹೇಗೆ ಪಡೆದರು ಮತ್ತು ಅವರಿಗೆ ನೆರವು ನೀಡಿದವರು ಯಾರು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ತನಿಖೆ ವೇಳೆ ಆರೋಪಿಗಳು ನೀಡಿರುವ ಮಾಹಿತಿಯ ಸತ್ಯಾಸತ್ಯ ಪರಿಶೀಲಿಸಲಾಗುತ್ತಿದೆ ಎಂದು ಹಿತೇಂದ್ರ ಸುದ್ದಿಗಾರರಿಗೆ ತಿಳಿಸಿದರು.ಆರೋಪಿಗಳ



ಉದಯವಾಹಿನಿ ಚಿತ್ರ

ಮನೆಯಲ್ಲಿ ವಶಕ್ಕೆ ಪಡೆದ ಲ್ಯಾಪ್‌ಟಾಪ್, ಮೊಬೈಲ್, ಜೆರಾಕ್ಸ್ ಪ್ರತಿಗಳು ಸೇರಿದಂತೆ ಹಲವಾರು ದಾಖಲೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳಿಸಲಾಗಿದೆ. ವರದಿ ಬಂದ ನಂತರ ಆರೋಪಿಗಳ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆಯಲಿದೆ ಎಂದು ಅವರು ಹೇಳಿದರು.ಎಸ್.ಪಿ ಸಿ.ಕೆ.ಬಾಬಾ, ಎಎಸ್‌ಪಿ ನಾಗರಾಜು, ಡಿವೈಎಸ್ಪಿ ಮೋಹನ್, ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್ ಹಾಜರಿದ್ದರು.ಬಿರಿಯಾನಿ ಹೋಟೆಲ್ ಅಕ್ರಮವಾಗಿ ನುಸುಳಿದ್ದ ಪಾಕಿಸ್ತಾನದ ಪ್ರಜೆಗಳು ಜಿಗಣಿಯಲ್ಲಿ ಬಿರಿಯಾನಿ ಹೋಟೆಲ್ ನಡೆಸುತ್ತಿದ್ದರು. ಧರ್ಮ ಪ್ರಚಾರಕ್ಕೆ ಹಣ ಪಡೆಯುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.

# ದೇವಾಲಯ ಬೀಗ ಮುರಿದು ಕಳವು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಹೊಸಕೋಟೆ

ನಗರದ ಬಸವೇಶ್ವರ ನಗರದ ಲಕ್ಷ್ಮಿ ಗಣಪತಿ ದೇವಾಲಯದಲ್ಲಿ ಸೋಮವಾರ ತಡರಾತ್ರಿಯಲ್ಲಿ ಬೀಗ ಮುರಿದು ಚಿನ್ನದ ಮಾಂಗಲ್ಯ ಮತ್ತು ಸರ ಹಾಗೂ ಹುಂಡಿ ದೋಚಿ ಪಕ್ಕದ ಖಾಲಿ ನಿವೇಶನದಲ್ಲಿ ಬಿಸಾಡಿ ಕಳ್ಳರು ಪರಾರಿಯಾಗಿದ್ದಾರೆ.

ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಹೇಮಂತ್ ಕುಮಾರ್, ದೇವಾಲಯಗಳನ್ನೇ ಗುರಿಯಾಗಿಸಿಕೊಂಡು ಕಳವು ನಡೆದಿದೆ.ಶಾರದಾಂಬಾ, ಖಿಲ್ಲೆ ಆಂಜನೇಯಸ್ವಾಮಿ ಮತ್ತು ಕಣ್ಣೂರಹಳ್ಳಿ ಮಾರಮ್ಮ ದೇವಾಲಯದಲ್ಲೂ ಕೂಡ ಕಳವು ನಡೆದಿದೆ. ಪೊಲೀಸರು ಶೀಘ್ರ ಪ್ರಕರಣ ಭೇದಿಸಬೇಕೆಂದು ಆಗ್ರಹಿಸಿದರು. ದೇವಾಲಯ ಆಡಳಿತ ಮಂಡಳಿ ಗೌರಾವಾಧ್ಯಕ್ಷ ಕೃಷ್ಣಪ್ಪ, ಅರ್ಚಕರಾದ ದೀಕ್ಷಿತ್, ಸದಸ್ಯರಾದ ಪ್ರಭಾಕರ್, ವಿಜಿ ಕುಮಾರ್, ದೇವರಾಜ್, ನಟರಾಜ್, ವೆಂಕಟೇಶ, ಪ್ರದೀಪ್, ರವಿ, ಮುರಳಿ, ಪಿಂಕಿ ಸೇರಿದಂತೆ ಇತರರು ಇದ್ದರು.

# ದಂಡಿ ಉಪ್ಪಿನ ಸತ್ಯಾಗ್ರಹದ ನಡಿಗೆ ನೆನಪಿಸುವ ಸುಂದರ ನಿರ್ಮಾಣ

## ಬಾಪೂ ಹೆಜ್ಜೆ ಗುರುತು ರೈತ, ದಲಿತ ಹಾಗೂ ಕನ್ನಡಪರ ಹೋರಾಟಗಳು ಗಟ್ಟಿಯಾಗಿ ನೆಲೆ ಕಂಡುಕೊಳ್ಳಲು ಕಾರಣ

• ಉದಯವಾಹಿನಿ, ದೊಡ್ಡಬಳ್ಳಾಪುರ

ಗಾಂಧಿ ಹೆಜ್ಜೆ ಗುರುತು ನಾಡಿನಾದ್ಯಂತ ಇರುವಂತೆ ದೊಡ್ಡಬಳ್ಳಾಪುರದಲ್ಲೂ ಮೂಡಿದೆ. ಇಲ್ಲಿಯೂ ಸ್ವಾತಂತ್ರ್ಯ ಚಳುವಳಿ ಸೇರಿದಂತೆ ನಂತರದ ದಿನಗಳಲ್ಲೂ ರೈತ, ದಲಿತ ಹಾಗೂ ಕನ್ನಡಪರ ಹೋರಾಟಗಳು ಗಟ್ಟಿಯಾಗಿ ನೆಲೆ ಕಂಡುಕೊಳ್ಳಲು ಕಾರಣವಾಗಿದೆ ಗಾಂಧೀಜಿ ಅವರು ದೊಡ್ಡಬಳ್ಳಾಪುರದ ನೆಲದಲ್ಲಿ ನಿಂತು ಭಾಷಣ ಮಾಡಿದ್ದ ಸ್ಥಳಕ್ಕೆ 'ಗಾಂಧಿನಗರ' ಎಂದು ನಾಮಕರಣ ಮಾಡುವ ಮೂಲಕ ನಗರದ ಹಿರಿಯರು ಸ್ಮರಿಸಿದ್ದಾರೆ.

ಹಾಗೆಯೇ ಸ್ವಾತಂತ್ರ್ಯದ 75ನೇ ವರ್ಷಾಚಣೆ ನೆನಪಿಗಾಗಿ ಗಾಂಧಿನಗರಕ್ಕೆ ಪ್ರವೇಶ ಮಾಡುವ ಮುಖ್ಯ ಪ್ರವೇಶ ದ್ವಾರದಲ್ಲಿ 'ದಂಡಿ ಉಪ್ಪಿನ ಸತ್ಯಾಗ್ರಹ'ದ ನಡಿಗೆ ನೆನಪಿಸುವ ಸುಂದರ ಚಿತ್ರಗಳನ್ನು ನಿರ್ಮಾಣ ಮಾಡಿಸುವ ಮೂಲಕ ಗಾಂಧಿನಗರದ ಭಾಗದ ಹಿರಿಯ ನಗರಸಭೆ ಸದಸ್ಯ ಟಿ.ಎನ್.ಪ್ರಭುದೇವ್ ಅವರು ಇಂದಿನ ಪೀಳಿಗೆ ಗಾಂಧೀಜಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವಂತೆ ಮಾಡಿದ್ದಾರೆ.

ದೊಡ್ಡಬಳ್ಳಾಪುರಕ್ಕೆ ಗಾಂಧೀಜಿ ಅವರು ಎರಡು ಬಾರಿ ಆಗಮಿಸಿದ್ದರು. ಆದರೆ, 1936ರಲ್ಲಿ ಗಾಂಧೀಜಿ ಅವರು ಬಂದ ನಂತರದ ದಿನಗಳು ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಹೊಸ ಬದಲಾವಣೆ ಪ್ರಾರಂಭವಾಗಲು ಕಾರಣವಾಗಿಯಿತು ದೊಡ್ಡಬಳ್ಳಾಪುರ.

ಬೆಂಗಳೂರು ನಗರ, ಕನಕಪುರ, ಚನ್ನಪಟ್ಟಣ ಮುಂತಾದ ಕಡೆ ನೂರಾರು ಸ್ವಾತಂತ್ರ್ಯ ಯೋಧರು ಸ್ವಾತಂತ್ರ್ಯ ಚಳವಳಿಗೆ ಧುಮುಕಲು ಪ್ರೇರಣೆಯಾಗಿದೆ. ಇಲ್ಲಿ ನಿಂತು ಗಾಂಧೀಜಿ ಅವರು ಆಡಿದ್ದ ಸ್ಫೂರ್ತಿದಾಯಕ ಮಾತುಗಳು ಎನ್ನುವುದನ್ನು ಇತಿಹಾಸಕಾರರು ನೆನೆಯುತ್ತಾರೆ.

ಅನಿಬೆಸೆಂಟ್‌ರ ಅನುಯಾಯಿ ಆಗಿದ್ದ ದೊಡ್ಡಬಳ್ಳಾಪುರದ ಟಿ.ಸಿದ್ಧಲಿಂಗಯ್ಯ, ವಲ್ಲಭಭಾಯಿಪಟೇಲ್, ಕಮಲಾದೇವಿ ಚಟ್ಟೋಪಾಧ್ಯಾಯ ಒತ್ತಾಯದ ಮೇರೆಗೆ ಮೈಸೂರು ಸಂಸ್ಥಾನದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಲು ಗಾಂಧೀಜಿ ಅವರು ಇಲ್ಲಿಗೆ ಭೇಟಿ ನೀಡಿ ಹೋಗಿದ್ದು ಸಹ ಒಂದು ಕಾರಣವಾಗಿದೆ.

ಟಿ.ಸಿದ್ಧಲಿಂಗಯ್ಯ ನೇತೃತ್ವದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಕೆಂಗಲ್ ಹನುಮಂತಯ್ಯ, ಎಚ್.ಕೆ.ವೀರಣ್ಣಗೌಡ, ಟಿ.ವೆಂಕಟಪ್ಪ, ಎಸ್.ಕರಿಯಪ್ಪ, ಎಚ್.ಮುಗುವಾಳಪ್ಪ ಮೊದಲಾದವರು ಸ್ವಾತಂತ್ರ್ಯ ಯೋಧರಾಗಿ ನಿಂತವರು. ಈ ಬೆಳವಣಿಗೆಯಿಂದ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿ ತೀವ್ರತೆ ಪಡೆಯಲು ಕಾರಣವಾಯಿತು.

80ರ ದಶಕದ ಕೊನೆಯಲ್ಲಿ ಕೊಂಗಾಡಿಯಪ್ಪ ಕಾಲೇಜಿನ ಎನ್.ಎಸ್.ಎಸ್ ವಿದ್ಯಾರ್ಥಿಗಳಿಗೆ ಗಾಂಧಿ ವಿಚಾರ ತಿಳಿಸಲು ಪರ್ಯಾಯ ಅಭಿವೃದ್ಧಿ ಮಾದರಿಗಳನ್ನು ಪರಿಚಯಿಸಲಾಯಿತು. ಬದಲಿ ಬೇಸಾಯ ಪದ್ಧತಿ, ಅಧಿಕಾರ ವಿಕೇಂದ್ರೀಕರಣ ಕುರಿತು, ಪರಿಸರ ವ್ಯವಸ್ಥೆ ಬಗ್ಗೆ ಶಿಕ್ಷಣ ನೀಡಲು ಪ್ರತಿವರ್ಷ ವಿಶೇಷ ಶಿಬಿರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸುವ ಮೂಲಕ ವಿದ್ಯಾರ್ಥಿಗಳು ಮತ್ತು ಗ್ರಾಮದ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ನಡೆಯಿತು.

ಇದರಿಂದ ನೂರಾರು ಜನ ಯುವಕ, ಯುವತಿಯರು ಪಠ್ಯದಾಚೆಗಿನ ಪ್ರಜ್ಞಾವಂತರಾಗಿ ಬೆಳೆಯಲು ಮಾರ್ಗದರ್ಶಿಯಾಗಿದೆ. ಇದಕ್ಕೆ ಕಾರಣ ಈ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಹಿರಿಯ ಗಾಂಧಿವಾದಿಗಳಾಗಿದ್ದ ಎಚ್.ಎಸ್.ದೊರೆಸ್ವಾಮಿ, ಸತ್ಯವ್ರತ, ಡಾ.ವಿಷ್ಣುಕಾಮತ್, ಪ್ರೊ.ಎಸ್.ನಾರಾಯಣನ್, ಡಾ.ಮಹಾದೇವ, ಸಿ.ನಾರಾಯಣಸ್ವಾಮಿ, ಪ್ರೊ.ಬಿ.ಕೆ.ಚಂದ್ರಶೇಖರ್, ರಾಮಚಂದ್ರಗುಹ, ಎಲ್.ನಾರಾಯಣರೆಡ್ಡಿ, ಡಾ.ಸೋಮಶೇಖರರೆಡ್ಡಿ ಮುಂತಾದ ಅನೇಕ ಪ್ರಸಿದ್ಧ ಚಿಂತಕರು, ಹೋರಾಟಗಾರರು ಭಾಗವಹಿಸಿದ್ದರು.




ಉದಯವಾಹಿನಿ ಚಿತ್ರ

**ಸ್ವಾತಂತ್ರ್ಯದ 75ನೇ ವರ್ಷಾಚಣೆ**

**ಹೋರಾಟದ ಸ್ಫೂರ್ತಿ ಕುಗ್ಗದಂತೆ ದಶಕಗಳ ಕಾಲ ನೋಡಿಕೊಂಡವರು.**

ಯುವ ವಿದ್ಯಾರ್ಥಿ ಸಮುದಾಯ ಕ್ರಿಯಾಶೀಲ ವ್ಯಕ್ತಿತ್ವ ರೂಪಿಸಿಕೊಂಡು ಸ್ವತಂತ್ರವಾಗಿ ಆಲೋಚಿಸುವ ಸಾಮರ್ಥ್ಯ ಬೆಳೆಸಿದ್ದು 'ಗಾಂಧಿ ಶಿಬಿರಗಳು'. ಗಾಂಧೀಜಿಯವರ ಹೋರಾಟ ಮನೋಭಾವ, ಸತ್ಯಪ್ರಿಯತೆ, ಸಾಮರಸ್ಯ, ಧಾರ್ಮಿಕ ಸಹಿಷ್ಣುತೆ, ಜಾತ್ಯತೀತ ಮನೋಭಾವ ಬೆಳೆಯಲು ಕಾರಣವಾಗಿದೆ. ದೊಡ್ಡಬಳ್ಳಾಪುರಕ್ಕೆ ಗಾಂಧೀಜಿ ಅವರು 1934ರಲ್ಲಿ ಆಗಮಿಸಿದ್ದಾಗಿನ ಚಿತ್ರ ಚಳುವಳಿಗಳಿಗೆ ಬಲ ಸ್ವಾತಂತ್ರ್ಯದ ನಂತರ ದೊಡ್ಡಬಳ್ಳಾಪುರದಲ್ಲಿ ಚಳವಳಿ ಕಾಲದ ಬಿಸಿ ಆರಲಿಲ್ಲ. ಹಳೆ ಕಾಂಗ್ರೆಸ್ಸಿಗರಾದ ನಾ.ನಂಜುಂಡಯ್ಯ ಅಂತರಹಳ್ಳಿ ನರಸಿಂಹಯ್ಯ ಕಮ್ಯುನಿಸ್ಟ್ ಪಕ್ಷದ ಎಚ್.ಮುಗುವಾಳಪ್ಪ ರಾಮಭದ್ರಯ್ಯ ಗಾಂಧೀಜಿ ಅವರ ಹೋರಾಟದ ಸ್ಫೂರ್ತಿ ಕುಗ್ಗದಂತೆ ದಶಕಗಳ ಕಾಲ ನೋಡಿಕೊಂಡವರು. ಈ ಎಲ್ಲ ಹಿರಿಯರ ಪರಿಶ್ರಮದ ಫಲವಾಗಿ ರೈತ ಹೋರಾಟ ಕನ್ನಡಪರ ಹೋರಾಟ ದಲಿತ ಚಳವಳಿ ಕಮ್ಯುನಿಸ್ಟ್ ಸಂಘಟನೆಗಳು ಇಂದಿಗೂ ಬಲವಾಗಿ ಬೇರೂರಿ ನಿಂತಿವೆ.

# ಜಿಲ್ಲಾಡಳಿತ ನಿರ್ಲಕ್ಷ್ಯ; ತಲೆ ಎತ್ತದ 'ಗಾಂಧಿ ಭವನ'

## 3 ಕೋಟಿ ಅನುದಾನ ಬಿಡುಗಡೆ ಮಾಡಿ 9 ವರ್ಷಗಳಾಗಿದ್ದರೂ ಜಿಲ್ಲಾಡಳಿತದ ಉದಾಸೀನ, ನಿರ್ಲಕ್ಷ್ಯ ಮನೋಭಾವ

• **ಉದಯವಾಹಿನಿ, ಕೋಲಾರ**

ಈ ಬಾರಿ ಗಾಂಧಿ ತಾತನ ಜಯಂತಿಯನ್ನು ವಿನೂತನವಾಗಿ ಆಚರಿಸಲು ರಾಜ್ಯ ಸರ್ಕಾರ ಭರ್ಜರಿ ಸಿದ್ಧತೆ ನಡೆಸಿದೆ. ಆದರೆ, ಜಿಲ್ಲೆಯಲ್ಲಿ 'ಗಾಂಧಿ ಭವನ' ನಿರ್ಮಾಣಕ್ಕೆ 3 ಕೋಟಿ ಅನುದಾನ ಬಿಡುಗಡೆ ಮಾಡಿ 9 ವರ್ಷಗಳಾಗಿದ್ದರೂ ಜಿಲ್ಲಾಡಳಿತದ ಉದಾಸೀನ, ನಿರ್ಲಕ್ಷ್ಯ ಮನೋಭಾವದಿಂದಾಗಿ ಮೂಲೆಗುಂಪಾಗಿದೆ.

ಮೂರು ವರ್ಷಗಳ ಹಿಂದೆ ಕೋಲಾರಮ್ಮ ಕೆರೆ ಬಳಿ ಕೆರೆ ಕೋಡಿ ಕಾಲುವೆಯಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿ ಅಧಿಕಾರಿಗಳು ಎಡವಟ್ಟು ಮಾಡಿದ್ದರು. ಅಡಿಪಾಯ ಹಾಕಿದ್ದು, ನ್ಯಾಯಾಲಯದಿಂದ ತಡೆಯಾಜ್ಞೆ ಸಿಕ್ಕಿದೆ. ಆನಂತರ ಬೇರೆ ಸ್ಥಳ ಹುಡುಕುವ ಗೋಜಿಗೆ ಜಿಲ್ಲಾಡಳಿತ ಕೈಹಾಕಿಲ್ಲ.

ಸಿದ್ದರಾಮಯ್ಯ ಅವರು ಮೊದಲು ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಜಿಲ್ಲೆಗೊಂದು ಗಾಂಧಿ ಭವನ ನಿರ್ಮಾಣಕ್ಕೆಂದು 2016ರಲ್ಲೇ ಆದೇಶ ಮಾಡಿದ್ದರು. ನಂತರ 3 ಕೋಟಿ ಅನುದಾನವೂ ಬಿಡುಗಡೆಯಾಗಿತ್ತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಜವಾಬ್ದಾರಿ ನೀಡಿ, ಕಟ್ಟಡ ನಿರ್ಮಿಸಲು ನಿರ್ಮಿತಿ ಕೇಂದ್ರಕ್ಕೆ ಒಪ್ಪಿಸಲಾಗಿತ್ತು.ಅಂದಿನ ಜಿಲ್ಲಾಧಿಕಾರಿಯ ಸೂಚನೆ ಮೇರೆಗೆ ತಹಶೀಲ್ದಾರ್ ಜಾಗ ಗುರುತಿಸಿದ್ದರು. ಅದನ್ನು ಬಿಟ್ಟು ಮಣಿಘಟ್ಟ ರಸ್ತೆಯ ಬಳಿಯ ಕಾಲುವೆಯಲ್ಲಿ ಭವನ ನಿರ್ಮಾಣಕ್ಕೆ ಮುಂದಾದರು. ಇದಕ್ಕೆ ಪರಿಸರವಾದಿಗಳು ಹಾಗೂ ಹೋರಾಟಗಾರರ ಭಾರಿ ವಿರೋಧ ವ್ಯಕ್ತಪಡಿಸಿದ್ದರು.

'ಕಾಲುವೆಯ ಬಫರ್ ಜೋನ್ ಪ್ರದೇಶದ ಜಾಗ ಒತ್ತುವರಿ ಮಾಡಿಕೊಂಡು ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ' ಎಂದು ದೂರಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಕೂಡ ತಂದಿದ್ದರು. ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಚ್.ನಾಗೇಶ್ ಆದೇಶಕ್ಕೂ ಮುನ್ನವೇ ಅಂದರೆ 2021ರ ಜನವರಿ 8ರಂದು ಭೂಮಿಪೂಜೆ ನೆರವೇರಿಸಿದ್ದರು. ನಿರ್ಮಿತಿ ಕೇಂದ್ರದಿಂದ ಅಡಿಪಾಯ, ಕಂಬ, ಕಾಂಪೌಂಡ್ ನಿರ್ಮಿಸಿಯೂ ಆಗಿತ್ತು. ಈ ಕಾಮಗಾರಿಗೆ 70 ಲಕ್ಷ ವೆಚ್ಚವಾಗಿದೆಯೆಂದು ಹೇಳುತ್ತಿದ್ದಾರೆ. ಆದರೆ, ಸಾರ್ವಜನಿಕರು, ಹೋರಾಟಗಾರರು ಹೇಳುವ ಪ್ರಕಾರ ಅಷ್ಟೇನೂ ಖರ್ಚಾಗಿಲ್ಲ. 15ರಿಂದ 20 ಲಕ್ಷ ಖರ್ಚು ಮಾಡಿ ಹೆಚ್ಚಿನ ಲೆಕ್ಕ ತೋರಿಸುತ್ತಿದ್ದಾರೆ ಎಂದು ದೂರುತ್ತಾರೆ. ಅಲ್ಲೂ ಅವ್ಯವಹಾರದ ವಾಸನೆ ಬರುತ್ತಿದೆ. ಅಡಿಪಾಯ ಹಾಕಿರುವ ಜಾಗದಲ್ಲಿ ಈಗ ಪೊದೆ ನಿರ್ಮಾಣವಾಗಿದ್ದು, ಗಿಡ ಬೆಳೆದಿದೆ. ಕಂಬಕ್ಕೆ ಹಾಕಿದ್ದ ಕಬ್ಬಿಣದ ಸಲಾಕೆಗಳನ್ನು ಕೆಲವರು ಕಿತ್ತುಕೊಂಡು ಹೋಗಿದ್ದಾರೆ.

ಆದರೆ, ಕಟ್ಟಡ ನಿರ್ಮಾಣದ ಜವಾಬ್ದಾರಿ ಹೊತ್ತಿರುವ ನಿರ್ಮಿತಿ ಕೇಂದ್ರ, ಜಾಗ ಸಂಬಂಧ ನ್ಯಾಯಾಲಯ ತಡೆಯಾಜ್ಞೆ ತೆರವುಗೊಳಿಸಲು ಪಯತ್ನವನ್ನೂ ನಡೆಸಿಲ್ಲ. ಇತ್ತ ಜಿಲ್ಲಾಡಳಿತವು ಪರ್ಯಾಯ ಜಾಗ ಕಂಡುಕೊಳ್ಳುವ ಪ್ರಯತ್ನವನ್ನೂ ಹಾಕಿಲ್ಲ.



ಜಿಲ್ಲೆಗೊಂದು ಗಾಂಧಿ ಭವನ ನಿರ್ಮಾಣ

ಉದಯವಾಹಿನಿ ಚಿತ್ರ

> 'ಗಾಂಧಿ ಭವನ ಬೇಗನೇ ನಿರ್ಮಿಸಬೇಕೆಂಬುದು ಇಲಾಖೆ ಉದ್ದೇಶ. ಆಯುಕ್ತರು ಕೂಡ ಆಸಕ್ತಿ ಹೊಂದಿದ್ದಾರೆ. ನಮ್ಮ ಇಲಾಖೆ ಸುಪರ್ದಿಗೆ ಬಂದ ಹಣವನ್ನು ಗಾಂಧಿ ಭವನ ನಿರ್ಮಾಣಕ್ಕೆಂದು ಜಿಲ್ಲಾಧಿಕಾರಿ ಖಾತೆಗೆ ನೀಡಿದ್ದೇವೆ. 70 ಲಕ್ಷ ಖರ್ಚಾಗಿದ್ದು, ಉಳಿದ 2.3 ಕೋಟಿ ಅವರ ಬಳಿ ಇದೆ. ಜಾಗದ ಸಮಸ್ಯೆ ಬಗೆಹರಿಸಿ ಕಟ್ಟಡ ನಿರ್ಮಿಸಿ ನಮ್ಮ ಸುಪರ್ದಿಗೆ ಒಪ್ಪಿಸಿದ ಮೇಲೆ ಗಾಂಧಿ ಭವನ ನಿರ್ವಹಣೆ ಹೊಣೆ ನಮ್ಮದು'
>
> **–ಚೇತನ್ ಕುಮಾರ್, ಜಿಲ್ಲಾ ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ**

### ಕೋಲಾರ ಜಿಲ್ಲೆಯಲ್ಲಿ ಮಾತ್ರ ನಿರ್ಲಕ್ಷ್ಯ ಮುಂದುವರಿದಿದೆ

**ಈ ಜಾಗವು ಬಫರ್ ಜೋನ್ ಪ್ರದೇಶದಲ್ಲಿ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ನಿರ್ಮಿತಿ ಕೇಂದ್ರವು ಸಣ್ಣ ನೀರಾವರಿ ಇಲಾಖೆ ಹಾಗೂ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದಿತ್ತು. ಈ ಸಂಬಂಧ ಯಾವುದೇ ಪ್ರಕ್ರಿಯೆ ಈವರೆಗೆ ನಡೆದಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಏಕರೂಪದಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಈಗಾಗಲೇ ಹಲವು ಜಿಲ್ಲೆಯಲ್ಲಿ ತಲೆಎತ್ತಿದೆ. ಪಕ್ಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಉದ್ಘಾಟನೆಗೆ ಸಜ್ಜಾಗಿದೆ. ಕೋಲಾರ ಜಿಲ್ಲೆಯಲ್ಲಿ ಮಾತ್ರ ನಿರ್ಲಕ್ಷ್ಯ ಮುಂದುವರಿದಿದೆ. ಕಟ್ಟಡ ನಿರ್ಮಾಣ ಸಂಬಂಧ ಭೂಸೇನಾ ನಿಗಮದವರು (ಕೆಆರ್‌ಐಡಿಎಲ್) ಮೂರು ವರ್ಷ ವಿಳಂಬ ಮಾಡಿದ್ದರು. ಬಳಿಕ ನಿರ್ಮಿತಿ ಕೇಂದ್ರಕ್ಕೆ ನೀಡಲಾಯಿತು. 30 ಗುಂಟೆ ಜಾಗದಲ್ಲಿ 2 ಕೋಟಿ ವೆಚ್ಚದಲ್ಲಿ ಕಟ್ಟಡ, 1 ಕೋಟಿ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣ ಹಾಗೂ ಹೊರಾಂಗಣ ವಿನ್ಯಾಸ ಮಾಡಲು ಯೋಜನೆ ರೂಪಿಸಲಾಗಿತ್ತು.**

---

# ಜವಾಬ್ದಾರಿ ನಿರ್ವಹಿಸಲು ಶಾಸಕ ಸೂಚನೆ



ಉದಯವಾಹಿನಿ ಚಿತ್ರ

**ಡಿಸಿ ಭೇಟಿ**

**ಜಿಲ್ಲಾಧಿಕಾರಿ ಕುಮಾರ, ಜಿ.ಪಂ. ಸಿಇಒ ಶೇಕ್ ತನ್ವೀರ್ ಆಸಿಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಜಂಬೂ ಸವಾರಿ ಸಾಗುವ ಮಾರ್ಗವನ್ನು ಪರಿಶೀಲಿಸಿದರು.**

• **ಉದಯವಾಹಿನಿ, ಶ್ರೀರಂಗಪಟ್ಟಣ**

'ದಸರಾ ಉತ್ಸವದ ಆರಂಭದಿಂದ ಕೊನೆಯ ದಿನದವರೆಗೆ ಎಲ್ಲಾ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

'ದಸರಾ ಉತ್ಸವ ಆರಂಭವಾಗುವ ಕಿರಂಗೂರು ಬನ್ನಿ ಮಂಟಪದಿಂದ ಶ್ರೀರಂಗನಾಥಸ್ವಾಮಿ ದೇವಾಲಯ ಮೈದಾನದ ವರೆಗೆ, ಮೆರವಣಿಗೆ ಸಾಗುವ ಮಾರ್ಗವನ್ನು ತಳಿರು, ತೋರಣಗಳಿಂದ ಅಲಂಕರಿಸಬೇಕು. ಜಂಬೂ ಸವಾರಿಯಲ್ಲಿ ಮೂರು ಆನೆಗಳು ಪಾಲ್ಗೊಳ್ಳುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಆನೆಗಳ ಚಲನವಲನದ ಬಗ್ಗೆ ನಿಗಾ ವಹಿಸಬೇಕು. ಮೂರು ಕಿ.ಮೀ. ಸಾಗುವ ಮೆರವಣಿಗೆಗೆ ಯಾವುದೇ ಅಡ್ಡಿ ಆಗದಂತೆ ಎಚ್ಚರವಹಿಸಬೇಕು' ಎಂದರು.'ಸಾಂಸ್ಕೃತಿಕ ಕಾರ್ಯಕ್ರಮಗಳು ನಾಲ್ಕು ದಿನ ನಡೆಯಲಿದ್ದು, ವೇದಿಕೆ ನಿರ್ವಹಣೆ ಮತ್ತು ಅತಿಥಿ ಸತ್ಕಾರದಲ್ಲಿ ಲೋಪವಾಗಬಾರದು. ಕಲಾವಿದರನ್ನು ಗೌರವದಿಂದ ನಡೆಸಿಕೊಳ್ಳಬೇಕು. ದಸರಾ ಉತ್ಸವದ ಬಗ್ಗೆ ಪಟ್ಟಣ, ಗ್ರಾ.ಪಂ. ಕೇಂದ್ರ ಸ್ಥಾನ ಮತ್ತು ಗ್ರಾಮ ಮಟ್ಟದಲ್ಲಿ ಪ್ರಚಾರ ಮಾಡಬೇಕು. ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು' ಎಂದು ತಿಳಿಸಿದರು.

ಕಿರಂಗೂರು ವೃತ್ತದ ದಸರಾ ಬನ್ನಿ ಮಂಟಪ, ಬೆಂಗಳೂರು- ಮೈಸೂರು ಮುಖ್ಯ ರಸ್ತೆ, ಕುವೆಂಪು ವೃತ್ತ, ಪುರಸಭೆ ವೃತ್ತ, ಅಂಬೇಡ್ಕರ್ ವೃತ್ತ, ಮಿನಿ ವಿಧಾನಸೌಧ ವೃತ್ತ ಹಾಗೂ ಶ್ರೀರಂಗನಾಥಸ್ವಾಮಿ ದೇವಾಲಯ ಮೈದಾನಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ವೀಕ್ಷಿಸಿದರು. ಶಾಸಕ ರಮೇಶ ಬಂಡಿಸಿದ್ದೇಗೌಡ ಅವರ ಜತೆ ಕಾವೇರಿ ನದಿ ಸ್ನಾನಘಟ್ಟಕ್ಕೂ ಅಧಿಕಾರಿಗಳ ತಂಡ ಭೇಟಿ ನೀಡಿತ್ತು. ಕಾವೇರಿ ಆರತಿ ನಡೆಯುವ ಸ್ನಾನಘಟ್ಟದ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವಂತೆ ಸ್ಥಳೀಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು. ತಹಶೀಲ್ದಾರ್ ಪರಶುರಾಮ ಸತ್ತಿಗೇರಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವೇಣು, ಪುರಸಭೆ ಮುಖ್ಯಾಧಿಕಾರಿ ಎಂ. ರಾಜಣ್ಣ, ಡಿವೈಎಸ್ಪಿ ಮುರಳಿ, ಸಿಪಿಐ ಬಿ.ಎಸ್. ಪ್ರಕಾಶ್ ಜತೆಗಿದ್ದರು.

ಶ್ರೀರಂಗಪಟ್ಟಣದಲ್ಲಿ ದಸರಾ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ನಿರ್ಮಿಸುತ್ತಿರುವ ವೇದಿಕೆಯ ಸ್ಥಳಕ್ಕೆ ಶಾಸಕ ರಮೇಶ ಬಂಡಿಸಿದ್ದೇಗೌಡ ಜಿಲ್ಲಾಧಿಕಾರಿ ಕುಮಾರ ಜಿ.ಪಂ. ಸಿಇಒ ಶೇಕ್ ತನ್ವೀರ್ ಆಸಿಫ್ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಪರಿಶೀಲಿಸಿದರು

---


# ಗಮನಸೆಳೆದ ಬಾ-ಬಾಪು ಗಾಂಧಿದರ್ಶನ

## ಬೆಳಗಾವಿ ಕಾಂಗ್ರೆಸ್ ಅಧಿವೇಶನ ಕುರಿತ ಪುಸ್ತಕ, ಚಿತ್ರ ಪ್ರದರ್ಶನ

• **ಉದಯವಾಹಿನಿ, ಶಿಡ್ಲಘಟ್ಟ**

ಸತ್ಯ, ಅಹಿಂಸೆ, ಆಸ್ತೇಯದಂತಹ ವ್ರತಗಳೂ, ದೇಶದ ಪ್ರಗತಿಗೆ ರಚನಾತ್ಮಕ ಕಾರ್ಯಕ್ರಮಗಳೂ ಅಗತ್ಯವಿದೆ. ಗಾಂಧೀಜಿ ಕನಸಿನ ಭಾರತ ಕಾರ್ಯರೂಪಕ್ಕೆ ಬರಬೇಕು ಎಂದು ಮುಖ್ಯಶಿಕ್ಷಕ ಎಚ್.ಎಸ್.ರುದ್ರೇಶಮೂರ್ತಿ ತಿಳಿಸಿದರು.

ತಾಲ್ಲೂಕಿನ ಸುಗಟೂರು ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಗಾಂಧಿಜಯಂತಿ, ಶಾಸ್ತ್ರೀಜಿ ಜಯಂತಿ, ವಿ.ಸೀತಾರಾಮಯ್ಯ ಜಯಂತಿ, ಬಾ-ಬಾಪು ಗಾಂಧಿದರ್ಶನ ಮತ್ತು ಬೆಳಗಾವಿ ಕಾಂಗ್ರೆಸ್ ಅಧಿವೇಶನ ಕುರಿತ ಲೇಖನ, ಪುಸ್ತಕ, ಚಿತ್ರಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು. ವಿಶ್ವದಲ್ಲಿ ಅಹಿಂಸಾ ಮಾರ್ಗದ ಮೂಲಕ ಭಾರತವು ಸ್ವಾತಂತ್ರ್ಯ ಪಡೆಯುವಲ್ಲಿ ಗಾಂಧೀಜಿ ನೀಡಿದ ಕೊಡುಗೆ, ತ್ಯಾಗ ಅಪೂರ್ವವಾದುದು, ಶಾಸ್ತ್ರೀಜಿ ಯವರು ಸರಳ ಸಜ್ಜನಿಕೆಯ ಪ್ರಾಮಾಣಿಕ ಆಡಳಿತಗಾರರಾಗಿದ್ದರು. ತತ್ವರಹಿತ ರಾಜಕೀಯ, ನೀತಿರಹಿತ ವಾಣಿಜ್ಯ, ಮಾನವತಾಶೂನ್ಯ ವಿಜ್ಞಾನ, ಶೀಲವಿಲ್ಲದ ಶಿಕ್ಷಣ, ದುಡಿಮೆಯಿಲ್ಲದ ಸಂಪತ್ತಿನಂತಹ ಸಾಮಾಜಿಕ ಪಾಪಗಳು ತೊಲಗಬೇಕು. ಗಾಂಧೀಜಿಯವರ ವ್ಯಕ್ತಿತ್ವ ಬದಲಾವಣೆ ಮಾಡಿದ ಶ್ರವಣಕುಮಾರನ ಪಿತೃಭಕ್ತಿಯಂತಹ ಮೌಲಿಕ ಕತೆ, ಕೃತಿಗಳ ಅಧ್ಯಯನವು ಇಂದಿನ ಮಕ್ಕಳಿಗೆ ಅಗತ್ಯವಿದೆ ಎಂದರು. ವಿದ್ಯಾರ್ಥಿಗಳಿಗೆ ಪುಸ್ತಕ ಪ್ರದರ್ಶನ ಪೂರಕ : ತ್ಯಾಗ ಅಹಿಂಸೆಯ ಪ್ರತೀಕವಾಗಿವಾಗಿದ್ದ ಮಹಾತ್ಮ ಗಾಂಧೀಜಿಯವರ ಜೀವನವೇ ಒಂದು ಸಂದೇಶ. ಸತ್ಯ, ಪ್ರೇಮ, ಅಹಿಂಸೆ, ಸತ್ಯಾಗ್ರಹ, ಸರಳ ಜೀವನ, ಸ್ವಾವಲಂಬನೆ ಗಳಂತಹ ಗುಣಗಳನ್ನು ಹೋರಾಟಗಾರರು ಸ್ವಾತಂತ್ರ್ಯ ತಂದುಕೊಡಲು ಬಳಸಿಕೊಂಡರು. ಗಾಂಧಿದರ್ಶನ ಪುಸ್ತಕ ಮತ್ತು ಚಿತ್ರಪ್ರದರ್ಶನವು ವಿದ್ಯಾರ್ಥಿಗಳಲ್ಲಿ ಪುಸ್ತಕಗಳ ಸಂಗ್ರಹ ಮತ್ತು ನಿರಂತರ ಅಧ್ಯಯನಶೀಲತೆಗೆ ಸಹಕಾರಿಯಾಗಲಿದೆ. ಎಂದರು. ಶಿಕ್ಷಕ ಟಿಎಂ ಮಧು,ಎಸ್‌ಡಿಎಂಸಿ ಅಧ್ಯಕ್ಷ ವೆಂಕಟೇಶ್, ಸದಸ್ಯ ಎಸ್.ಎಲ್.ನಾರಾಯಣಸ್ವಾಮಿ, ಗ್ರಾಮಪಂಚಾಯಿತಿ ಸದಸ್ಯ ಸತೀಶ್‌ಕುಮಾರ್, ಶಿವಶಂಕರಪ್ಪ ಪಾಲ್ಗೊಂಡಿದ್ದರು.



ಉದಯವಾಹಿನಿ ಚಿತ್ರ

### ಪ್ರದರ್ಶನಗೊಂಡ ಪುಸ್ತಕಗಳು

**ಪುಸ್ತಕಗಳ ಮತ್ತು ಚಿತ್ರ ಪ್ರದರ್ಶನವನ್ನು ಗ್ರಾಮಸ್ಥರು, ಶಾಲಾ ವಿದ್ಯಾರ್ಥಿಗಳು ವೀಕ್ಷಿಸಿ ಕಣ್ತುಂಬಿಸಿಕೊಂಡರು. ಗಾಂಧೀಜಿ ಮತ್ತು ಶಾಸ್ತ್ರೀಜಿರವರ ವಿವಿಧ ಭಾವಚಿತ್ರಗಳು, ಬ್ಯಾಡ್ಜ್ ಮತ್ತು ಸ್ಟಾಂಪ್‌ಗಳು, ಗಾಂಧಿಭವನ ಪ್ರಕಟಿತ ಬಾಪೂಪ್ರಪಂಚ, ಗಾಂಧೀಜಿ ಆನ್ ಕನ್ರ?ಶನ್, ಗಣ್ಯರು ಕಂಡಂತೆ ಗಾಂಧೀಜಿ, ಗಾಂಧೀ ಗೀತೆಗಳು, ರಾಮನಾಮ, ಗಾಂಧೀ ಇನ್ ಬೆಂಗಳೂರು, ಮಹಾತ್ಮಗಾಂಧಿ ಮತ್ತು ಸ್ವಚ್ಛತೆ, ನಂದಿಗಿರಿಧಾಮದಲ್ಲಿ ಗಾಂಧಿ, ನನ್ನ ಸತ್ಯಾನ್ವೇಷಣೆ, ಗಾಂಧಿರೇಖಾ ಚಿತ್ರ ದರ್ಶನ, ಮಹಾತ್ಮಗಾಂಧಿ ಕೃತಿಸಂಚಯ ವಿವಿಧ ಸಂಪುಟಗಳು, ಗಾಂಧಿ ಮತ್ತು ಕರ್ನಾಟಕ, ನನ್ನ ಮನಸಿನ ಭಾರತ,ಮಹಾತ್ಮರ ಬಾಳು, ಬಹುರೂಪಿಗಾಂಧಿ, ಮತ್ತಿತರ ನೂರಾರು ಪುಸ್ತಕಗಳು ಆಕರ್ಷಕವಾಗಿದ್ದವು.**

**ಗಾಂಧೀಜಿ ಕೊಡುಗೆ, ತ್ಯಾಗ ಅಪೂರ್ವ**

---

# 40 ದಶಕಗಳ ಪುರಾತನ ದಾಸಪ್ಪನ ಕಲ್ಯಾಣಿಯ ಸ್ವಚ್ಛತೆ

• **ಉದಯವಾಹಿನಿ, ಶಿಡ್ಲಘಟ್ಟ**

ಪ್ರತಿಗ್ರಾಮದಲ್ಲೂ ಹಿರಿಯರು ಕಲ್ಯಾಣಿಗಳನ್ನು ನಿರ್ಮಿಸಿ ಗ್ರಾಮದ ನೀರಿನ ಬೇಡಿಕೆಯನ್ನು ಪೂರೈಸಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕಲ್ಯಾಣಿಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ ಎಂದು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಆರ್ ಹೇಮಾವತಿ ಹೇಳಿದರು.

ತಾಲ್ಲೂಕಿನ ಬಶೆಟ್ಟಹಳ್ಳಿ ಹೋಬಳಿಯ ದೊಡ್ಡತೇಕಹಳ್ಳಿ ಗ್ರಾಮದ 40 ದಶಕಗಳ ಪುರಾತನ ದಾಸಪ್ಪನ ಕಲ್ಯಾಣಿಯನ್ನು, ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ವತಿಯಿಂದ ಹಮ್ಮಿಕೊಂಡಿದ್ದ ಸ್ವಚ್ಛತಾ ಅಭಿಯಾನದಲ್ಲಿ ಮಾತನಾಡಿ,ದಾಸಪ್ಪನ ಕಲ್ಯಾಣಿಯು ಪುರಾತನವಾದ ಕಲ್ಯಾಣಿಯಾಗಿದ್ದು ಈ ಕಲ್ಯಾಣಿಯನ್ನು ಅಭಿವೃದ್ಧಿಗೊಳಿಸಲು ಗ್ರಾಮ ಪಂಚಾಯಿತಿ ಬದ್ಧವಾಗಿದ್ದು, ಕಲ್ಯಾಣಿಯ ಸುತ್ತಲೂ ಕಾಲುವೆ ನಿರ್ಮಿಸಿ ಕಲ್ಯಾಣಿಗೆ ನೀರು ಹರಿದು ಬರುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಜಲಮೂಲಗಳ ಸಂರಕ್ಷಣೆಗೆ ಸಂಘ ಸಂಸ್ಥೆಗಳ ಜೊತೆಗೆ ಸ್ಥಳೀಯ ಯುವಕರು ಮತ್ತು ಆಡಳಿತ ಕೈಜೋಡಿಸುವುದರಿಂದ ವ್ಯಾಪಕವಾಗಿ ನೀರಿನ ಸಂರಕ್ಷಣೆ ಮಾಡಲು ಸಾಧ್ಯ ಎಂದರು.

ನರೇಗಾ ಸಹಾಯಕ ನಿರ್ದೇಶಕ ಚಂದ್ರಪ್ಪ ಮಾತನಾಡಿ, ಪಾರಂಪರಿಕ ಜಲಮೂಲಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ತಾಲ್ಲೂಕು ಪಂಚಾಯಿತಿಯು ಶ್ರಮದಾನದ ಮೂಲಕ ಪರಿಸರ ಸಂರಕ್ಷಣೆ, ರಾಜಕಾಲುವೆಗಳ ಸ್ವಚ್ಛತೆಗೆ ಹೆಚ್ಚು ಒತ್ತು ನೀಡುತ್ತದೆ. ಬರಗಾಲದಿಂದ ತತ್ತರಿಸಿರುವ ತಾಲ್ಲೂಕಿನಲ್ಲಿ ಕುಡಿವ ನೀರಿಗೂ ಹಾಹಾಕಾರ ಎದುರಾಗಿದೆ.

ಮಳೆಯಿಲ್ಲದೆ ಅಂತರ್ಜಲ ಪಾತಾಳಕ್ಕೆ ಕುಸಿದಿದೆ. ಇದು ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಸಮಸ್ಯೆ ಇನ್ನಷ್ಟು ಗಂಭೀರ ಸ್ಥಿತಿಗೆ ಹೋಗಲಿದೆ. ಹಾಗಾಗಿ ಯಾವುದೇ ನದಿ ಮೂಲಗಳಿಲ್ಲದ ಈ ಭಾಗದಲ್ಲಿ ಪುರಾತನ ಕಲ್ಯಾಣಿಗಳು, ಕೆರೆ, ಕಾಲುವೆಗಳೇ ಪ್ರಮುಖ ಜಲ ಮೂಲಗಳಾಗಿದ್ದು, ಅಂತರ್ಜಲ ಹೆಚ್ಚಳ ಮಾಡುವ ಸಲುವಾಗಿ ಜಲ ಮೂಲಗಳ ಪುನಶ್ಚೇತನ ಮಾಡಲಾಗುತ್ತಿದೆ ಎಂದರು.

ಪೂರ್ವಿಕರ ಕಾಲದಲ್ಲಿ ನಿರ್ಮಾಣವಾಗಿದ್ದ ದಾಸಪ್ಪನ ಕಲ್ಯಾಣಿಯಲ್ಲಿ ಕಸ ಕಡ್ಡಿ ತುಂಬಿ ಬಳಕೆಗೆ ಯೋಗ್ಯವಲ್ಲದಂತಾಗಿತ್ತು. ಅಂತರ್ಜಲ ಕುಸಿತದ ಕಾರಣ ಕಲ್ಯಾಣಿ ಬತ್ತಿ ಹೋಗಿತ್ತು.

ಮಂಗಳವಾರ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿವತಿಯಿಂದ ದಾಸಪ್ಪನ ಕಲ್ಯಾಣಿಯನ್ನು ಸ್ವಚ್ಛಗೊಳಿಸಲಾಯಿತು.



ಉದಯವಾಹಿನಿ ಚಿತ್ರ



### ದಾಸಪ್ಪನ ಬಾವಿಯ ಶ್ರಮದಾನ

**ಇನ್ನೂ ಶ್ರಮದಾನಕ್ಕೆ ಮುಖ್ಯವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಮ್ಮ, ಮಹಿಳಾ ಸದಸ್ಯರ ಗೈರು. ಇವರ ಗೈರು ಹಾಜರಿಯಲ್ಲಿಯೂ ದಾಸಪ್ಪನ ಬಾವಿಯ ಶ್ರಮದಾನವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಹೆಸರಿಗಷ್ಟೇ ಕೆಲ ಮಹಿಳಾ ಸದಸ್ಯರು ಅವರು ಗ್ರಾಮ ಪಂಚಾಯಿತಿಗೆ ಬರುವುದು ಸಭೆ ನಡೆದಾಗ ಸಹಿ ಮಾಡಲು ಮಾತ್ರ ಬರುತ್ತಾರೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಜ್ರೇಶ್, ಉಪಾಧ್ಯಕ್ಷ ಡಿಸಿ ಮಂಜುನಾಥ್ ,ಸದಸ್ಯರಾದ ಟಿ.ಎಸ್ ಗೋಪಾಲರೆಡ್ಡಿ, ಸಿ.ಕೆ ಮಂಜುನಾಥ್, ತಾಲ್ಲೂಕಿನ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ,ಮತ್ತು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಾಗೂ ನರೇಗಾ ಸಿಬ್ಬಂದಿ ಸೇರಿದಂತೆ ಇತರರು ಸ್ವಚ್ಛತಾ ಅಭಿಯಾನದಲ್ಲಿ ಭಾಗಿಯಾಗಿದ್ದರು.**

---

# ಜಿಲ್ಲಾ ಕಾಂಗ್ರೆಸ್ ವತಿಯಿಂದ ಗಾಂಧಿ ಜಯಂತಿ

## ಒಗ್ಗಟ್ಟಿನಿಂದ ಭವ್ಯ ಭಾರತ ನಿರ್ಮಾಣಕ್ಕೆ ಬೈರತಿ ಸುರೇಶ್ ಕರೆ

• **ಉದಯವಾಹಿನಿ, ಕೋಲಾರ**

ದೇಶಕ್ಕೆ ಸಿಕ್ಕಿರುವ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳಬಾರದು ಗಾಂಧಿಯವರ ಅಹಿಂಸ ಮಾರ್ಗದಲ್ಲಿ ನಾವು ಎಲ್ಲಾರೂ ಒಗ್ಗಟ್ಟಿನಿಂದ ಭವ್ಯ ಭಾರತವನ್ನು ನಿರ್ಮಾಣ ಮಾಡಬೇಕಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ಗಾಂಧಿ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಗಾಂಧೀಜಿಯವರು ಅಹಿಂಸೆಯ ಮಾರ್ಗದಲ್ಲಿ ದೇಶಾದ್ಯಂತ ಲಕ್ಷಾಂತರ ಜನರನ್ನು ಒಗ್ಗೂಡಿಸಿ ಹೋರಾಟದ ಮಂತ್ರದ ಮೂಲಕವೇ ಉಪವಾಸ ಸತ್ಯಾಗ್ರಹ ಮಾಡಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ್ದಾರೆ ಅವರ ತ್ಯಾಗ ಬಲಿದಾನದ ಪ್ರತೀಕ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದ್ದಾರೆ ಅದು ಪ್ರಸ್ತುತ ದಿನಗಳಲ್ಲಿ ಸದುಪಯೋಗವಾಗಬೇಕು ಎಂದು ಅಭಿಪ್ರಾಯ ಪಟ್ಟರು, ದೇಶದಲ್ಲಿ ಗಾಂಧೀಜಿಯವರ ಹಾದಿಯಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಮತ್ತು ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರನ್ನು ಸಹ ನೆನೆಯಬೇಕಾಗಿದೆ ಭಾರತ ದೇಶವು ವಿವಿಧ ಭಾಷೆ ಸಂಸ್ಕೃತಿಗಳಿಂದ ಬೆಳೆದಿದೆ ದೇಶಕ್ಕಾಗಿ ಪ್ರತಿ ಹಂತದಲ್ಲೂ ಕೊಡುಗೆ ಕೊಟ್ಟ ಅಂತಹ ಮಹನೀಯರ ಮಾರ್ಗದರ್ಶನದಲ್ಲಿ ಯುವ ಪೀಳಿಗೆ ನಡೆಯಬೇಕು ಜೊತೆಗೆ ಯವ ಜನತೆಗೆ ಸ್ವಾತಂತ್ರ್ಯದ ಮಹತ್ವವನ್ನು ತಿಳಿ ಹೇಳಬೇಕಾಗಿದೆ ಎಂದರು. ದೇಶದಲ್ಲಿ ನಾವು ಎಲ್ಲಾರೂ ಅಣ್ಣತಮ್ಮಂದಿರ ರೀತಿಯಲ್ಲಿ ಬದುಕಬೇಕು ಸಣ್ಣಪುಟ್ಟ ಜಗಳಗಳು ಸಹಜವಾಗಿದ್ದು ಅವುಗಳನ್ನು ಸರಿಪಡಿಸಿಕೊಂಡು ಹೋಗಬೇಕು ಸಮಸ್ಯೆಗಳು ಇದ್ದರೆ ಪರಿಹಾರ ಮಾಡಿಕೊಳ್ಳೋಣ ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಇದ್ದು ಒಳ್ಳೆಯ ಜನಪರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದು ಅವರ ಬೆಂಬಲವಾಗಿ ನಿಲ್ಲಬೇಕು ಎಂದರು, ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾ ಕಾಂಗ್ರೆಸ್ ಕಛೇರಿಯಿಂದ ಗಾಂಧಿವನದವರೆಗೂ ಕಾಲ್ನಡಿಗೆ ಜಾಥಾ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ಕೊತ್ತೂರು ಜಿ ಮಂಜುನಾಥ್, ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮೀನಾರಾಯಣ, ಕಾರ್ಯಾಧ್ಯಕ್ಷ ಊರಬಾಗಿಲು ಶ್ರೀನಿವಾಸ್, ನಗರ ಅಧ್ಯಕ್ಷ ಪ್ರಸಾದ್ ಬಾಬು, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವೈ ಶಿವಕುಮಾರ್ ನಗರಸಭೆ ಅಧ್ಯಕ್ಷೆ ಲಕ್ಷ್ಮೀದೇವಮ್ಮ, ಉಪಾಧ್ಯಕ್ಷೆ ಸಂಗೀತಾ, ಕುಡಾ ಅಧ್ಯಕ್ಷ ಮಹಮ್ಮದ್ ಹನೀಫ್, ಕೋಚಿಮುಲ್ ನಿರ್ದೇಶಕ ಷಂಷೀರ್ ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲಗೌಡ, ಮುಖಂಡರಾದ ಜಯದೇವ್ ನಾಗರಾಜ್, ಮೈಲಾಂಡಹಳ್ಳಿ ಮುರಳಿ, ಮೀನುಗಾರಿಕೆ ರಂಗನಾಥ್, ರವಿರಾಮಸ್ವಾಮಿ, ಒಬಿಸಿ ಮಂಜುನಾಥ್, ಹೊನ್ನೇನಹಳ್ಳಿ ಯಲ್ಲಪ್ಪ, ಮುಂತಾದವರು ಇದ್ದರು



ಉದಯವಾಹಿನಿ ಚಿತ್ರ

---

# ಮರೆಯಾದ ಸೌಜನ್ಯ ಮಾನವೀಯತೆ; ರೋಗಿಗಳು ಕಂಗಾಲು

## ನರ್ಸ್‌ಗಳು ರೋಗಿಗಳ, ಅವರ ಸಂಬಂಧಿಗಳ ಜೊತೆ ಒರಟಾಗಿ ವರ್ತಿಸುತ್ತಿರುವ ಬಗ್ಗೆ ವ್ಯಾಪಕ ದೂರು

• **ಉದಯವಾಹಿನಿ, ಕೊಳ್ಳೇಗಾಲ**

ನಗರದ ಸರ್ಕಾರಿ ಉಪವಿಭಾಗ ಆಸ್ಪತ್ರೆಯಲ್ಲಿ ರೋಗಿಗಳಿಗೆ ಉಪಚರಿಸುವ, ಆರೈಕೆ ಮಾಡುವ ಜವಾಬ್ದಾರಿ ಹೊತ್ತಿರುವ ನರ್ಸ್‌ಗಳು ರೋಗಿಗಳ ಹಾಗೂ ಅವರ ಸಂಬಂಧಿಗಳ ಜೊತೆ ಒರಟಾಗಿ ವರ್ತಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿಬಂದಿವೆ. ಪ್ರತಿದಿನ ಕೊಳ್ಳೇಗಾಲ, ಹನೂರು ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಿಂದ ಇಲ್ಲಿನ ಉಪವಿಭಾಗ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬರುವ ಬಡ ರೋಗಿಗಳು ಶುಶ್ರೂಷಕರ ಒರಟು ಸ್ವಭಾವಕ್ಕೆ ಬೆಚ್ಚುತ್ತಿದ್ದಾರೆ. ಚಿಕಿತ್ಸೆಗೆ ಬರುವ ಯಾರೊಂದಿಗೂ ಸಮಾಧಾನದಿಂದ ವರ್ತಿಸುವುದಿಲ್ಲ, ಏನು ಕಾಯಿಲೆ ಎಂದು ಕೇಳುವುದಿಲ್ಲ, ಏಕವಚನದಲ್ಲಿ ಗದರುತ್ತಾರೆ ಎಂದು ರೋಗಿಗಳು ಅಳಲು ತೋಡಿಕೊಂಡಿದ್ದಾರೆ.

ಪೊಲೀಸ್ ಠಾಣೆಗಳಿಗೆ ಹೋಗಲು ಜನರು ಹೆದರುವಂತೆ ಇಲ್ಲಿನ ಉಪ ವಿಭಾಗ ಆಸ್ಪತ್ರೆಗೆ ಬರಲೂ ಭಯ ಪಡುತ್ತಿದ್ದಾರೆ. ಪೊಲೀಸ್ ಇಲಾಖೆ 'ಜನಸ್ನೇಹಿ' ಪೊಲೀಸ್ ಠಾಣೆಗಳನ್ನು ಮಾಡುತ್ತಿರುವಂತೆ ಆರೋಗ್ಯ ಇಲಾಖೆಯೂ 'ಜನಸ್ನೇಹಿ' ಆಸ್ಪತ್ರೆ ಮಾಡಬೇಕು ಎಂದು ರೋಗಿಗಳು ಒತ್ತಾಯಿಸಿದ್ದಾರೆ.

'ಮೇಲಧಿಕಾರಿಗಳ ಮೇಲಿನ ಕೋಪವನ್ನು, ವೈಯಕ್ತಿಕ ಸಮಸ್ಯೆಯ ಅಸಹನೆಯನ್ನು ರೋಗಿಗಳ ಮೇಲೆ ತೋರುವುದು ಸರಿಯಲ್ಲ. ಸಹನೆ, ಕರುಣೆ, ಮಾನವೀಯತೆ ಗುಣಗಳುಳ್ಳವರು ಮಾತ್ರ ಶುಶ್ರೂಷಕರಾಗಲು ಅರ್ಹರು ಎಂಬ ಭಾವನೆ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿದೆ. ಇಂತಹ ಪವಿತ್ರ ವೃತ್ತಿಗೆ ಚ್ಯುತಿಬಾರದಂತೆ ನಡೆದುಕೊಳ್ಳಬೇಕು' ಎಂದು ರೋಗಿಗಳು ಒತ್ತಾಯಿಸಿದ್ದಾರೆ.

'ಸರ್ಕಾರಿ ಉಪ ವಿಭಾಗ ಆಸ್ಪತ್ರೆಯಲ್ಲಿ ಶುಶ್ರೂಷಕರ ನಡವಳಿಕೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಕ್ಷೇತ್ರದ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ನಿರಂತರವಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಆಸ್ಪತ್ರೆಯ ಪರಿಸ್ಥಿತಿಯ ಬಗ್ಗೆ ರೋಗಿಗಳಿಂದ ಅಹವಾಲು ಆಲಿಸಬೇಕು' ಎಂದು ಆಗ್ರಹಿಸುತ್ತಾರೆ ರೋಗಿಗಳು.

ಇಲ್ಲಿನ ಉಪ ವಿಭಾಗ ಆಸ್ಪತ್ರೆ ಕೊಳ್ಳೇಗಾಲ ಹಾಗೂ ಹನೂರು ಭಾಗದ ರೋಗಿಗಳಿಗೆ ಸಂಜೀವಿನಿಯಂತಾಗಿದೆ. ಹನೂರು ತಾಲ್ಲೂಕಿನ ತಮಿಳುನಾಡಿನ ಜೊತೆ ಗಡಿ ಹಂಚಿಕೊಂಡಿರುವ ಗೋಪಿನಾಥಂ ಸೇರಿದಂತೆ ತೀರಾ ಹಿಂದುಳಿದ ಗ್ರಾಮಗಳಿಂದ, ಯಳಂದೂರು ತಾಲ್ಲೂಕಿನ ಹಲವು ಹಳ್ಳಿಗಳಿಂದ ಮೈಸೂರು ಜಿಲ್ಲೆಯ ಕಾವೇರಿ ನದಿ ಪಾತ್ರದ ಗ್ರಾಮಗಳಿಂದ ಹಾಗೂ ಮಂಡ್ಯ ಜಿಲ್ಲೆಯ ಬೆಳಕವಾಡಿ ಗ್ರಾಮದಿಂದಲೂ ಹೆಚ್ಚಿನ ಸಂಖ್ಯೆಯ ರೋಗಿಗಳು ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬರುತ್ತಾರೆ.

'ಆಸ್ಪತ್ರೆಯ ಶುಶ್ರೂಷಕರ ವರ್ತನೆಗೆ ರೋಗಿಗಳು ಬೇಸತ್ತಿದ್ದು ಭಯದಲ್ಲೇ ಚಿಕಿತ್ಸೆ ಪಡೆಯಬೇಕಾಗಿದೆ. ಎದುರು ಮಾತನಾಡಿದರೆ ಚಿಕಿತ್ಸೆ ನಿರಾಕರಿಸಬಹುದು ಎಂಬ ಆತಂಕದಿಂದ ಅವಮಾನ ಸಹಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಹೋರಾಟಗಾರ ವಿನಯ್ ದೂರುತ್ತಾರೆ.

'ಆಸ್ಪತ್ರೆಯಲ್ಲಿ ರೋಗಿಗಳ ಜತೆ ಕಠೋರವಾಗಿ ವರ್ತಿಸುತ್ತಿರುವ ಬಗ್ಗೆ ತನಿಖೆ ನಡೆಸಿ ಸತ್ಯಾಂಶ ಕಂಡಂಬಂದರೆ ಬೇರೆಡೆಗೆ ವರ್ಗಾವಣೆ ಮಾಡಬೇಕು. ಬಡ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಉಚಿತವಾಗಿ ನೀಡುತ್ತಿರುವ ಸರ್ಕಾರದ ಆಶಯ ಮಣ್ಣುಪಾಲಾಗಬಾರದು. ಆಸ್ಪತ್ರೆಯಲ್ಲಿ ಹಣಕೊಟ್ಟರೆ ಮಾತ್ರ ಉತ್ತಮ ಚಿಕಿತ್ಸೆ ದೊರೆಯುತ್ತದೆ ಎಂಬ ದೂರುಗಳಿದ್ದು ತನಿಖೆ ನಡೆಸಬೇಕು. ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಬಾರದವರ ವಿರುದ್ಧವೂ ಶಿಸ್ತು ಕ್ರಮ ಜರುಗಿಸಬೇಕು' ಎಂದು ಹೋರಾಟಗಾರ ವಿನಯ್ ಒತ್ತಾಯಿಸಿದರು.




ಉದಯವಾಹಿನಿ ಚಿತ್ರ

**ಶುಶ್ರೂಷಕರ ಒರಟು ಸ್ವಭಾವ**

### ವಿದ್ಯಾರ್ಥಿಗಳಿಂದ ಚುಚ್ಚುಮದ್ದು ಆರೋಪ!

**'ಆಸ್ಪತ್ರೆಯಲ್ಲಿ ಶುಶ್ರೂಷಕರ ಉಸ್ತುವಾರಿ ಇಲ್ಲದೆ ನರ್ಸಿಂಗ್ ವಿದ್ಯಾರ್ಥಿಗಳೇ ರೋಗಿಗಳಿಗೆ ಚುಚ್ಚುಮದ್ದು ಹಾಕುತ್ತಿದ್ದಾರೆ ಎಂಬ ದೂರುಗಳು ಇವೆ. ಕಲಿಕಾ ಹಂತದಲ್ಲಿರುವ ವಿದ್ಯಾರ್ಥಿಗಳು ಚುಚ್ಚುಮದ್ದು ಹಾಕುವಾಗ, ಡ್ರಿಪ್ ಬಾಟಲ್‌ಗಳ ಅಳವಡಿಕೆ ಮಾಡುವಾಗ ಸಮಸ್ಯೆಗಳು ಎದುರಾಗುತ್ತಿವೆ. ಈ ಬಗ್ಗೆ ಹಿರಿಯ ಅಧಿಕಾರಿಗಳು ಹಾಗೂ ವೈದ್ಯರು ಉಪ ವಿಭಾಗ ಆಸ್ಪತ್ರೆಗೆ ಭೇಟಿನೀಡಿ ಪರಿಶೀಲಿಸಬೇಕು. ರೋಗಿಗಳಿಂದ ಹಣ ವಸೂಲಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳಬೇಕು. ಇಲ್ಲವಾದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ಅಯಾಜ್ ಕನ್ನಡಿಗ ಎಚ್ಚರಿಕೆ ನೀಡಿದರು.**

> **ಕೊಳ್ಳೇಗಾಲ ವಿಭಾಗ ಆಸ್ಪತ್ರೆಯಲ್ಲಿ ರೋಗಿಗಳ ಜೊತೆ ಸ್ಥಳೀಯ ಶುಶ್ರೂಷಕರ ವರ್ತನೆ ಸರಿ ಇಲ್ಲ ಎಂಬ ದೂರುಗಳು ಕೇಳಿಬಂದಿದ್ದು ಈ ಸಂಬಂಧ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಹಿರಿಯ ವೈದ್ಯರ ಜೊತೆ ಸಭೆ ನಡೆಸಿ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡುತ್ತೇನೆ. ರೋಗಿಗಳನ್ನು ಮಾನವೀಯ ನೆಲೆಯಲ್ಲಿ ಆರೈಕೆ ಮಾಡಬೇಕು ಸರ್ಕಾರದ ಕೆಲಸವನ್ನು ಜವಾಬ್ದಾರಿಯಿಂದ ನಿಭಾಯಿಸಬೇಕು.**
>
> **–ರೇಖಾ, ನಗರಸಭೆ ಅಧ್ಯಕ್ಷೆ**

---

ಉದಯ ವಾಹಿನಿ

ಪ್ರಾದೇಶಿಕ

ಗುರುವಾರ 03 ಅಕ್ಟೋಬರ್ 2024



## ಮಿನಿ ನ್ಯೂಸ್

### ಮಹಾಲಯ ಅಮಾವಾಸ್ಯೆಯ ಪೂರ್ವಜರ ಸಮಾಧಿಗಳಿಗೆ ಪೂಜೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಶಿಡ್ಲಘಟ್ಟ**

ನಗರದ ಸಿದ್ಧಾರ್ಥ ನಗರದ ಬೈಪಾಸ್ ಬಳಿ ಇರುವ ರುದ್ರಭೂಮಿಯಲ್ಲಿ ಬುಧವಾರ ಮಹಾಲಯ ಅಮಾವಾಸ್ಯೆಯ ದಿನ ತಮ್ಮ ಪೂರ್ವಜರಿಗೆ ಕುಟುಂಬಸ್ಥರು ತಂದಿದ್ದ ಎಡೆಯನ್ನು ಅರ್ಪಿಸಿ ಶ್ರದ್ಧಾ- ಭಕ್ತಿಯಿಂದ ಅವರನ್ನ ಸ್ಮರಿಸಿ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಹಿಂದೂ ಸಂಪ್ರದಾಯದಲ್ಲಿ ಹದಿನೈದು ದಿನಗಳು ಪೂರ್ವಜರನ್ನು ಪೂಜಿಸಲು ಮತ್ತು ಸ್ಮರಿಸಲು ಮೀಸಲಾಗಿವೆ. ಈ ಅವಧಿಯಲ್ಲಿ, ಸತ್ತ ಪೂರ್ವಜರ ಆತ್ಮಗಳು ಭೂಮಿಗೆ ಮರಳುತ್ತವೆ ಎನ್ನಲಾಗುತ್ತದೆ. ಈ ಸಮಯದಲ್ಲಿ ಅವರಿಗೆ ಗೌರವ ಸಲ್ಲಿಸುವುದು ಮರಣಾನಂತರದ ಜೀವನದಲ್ಲಿ ಅವರ ಆತ್ಮಕ್ಕೆ ಶಾಂತಿ ಲಭಿಸುವಂತೆ ನೋಡಿಕೊಳ್ಳಲು ಈ ಸಮಯದಲ್ಲಿ ಈ ಕಾರ್ಯಗಳನ್ನ ಮಾಡಲಾಗುತ್ತದೆ. ಇದರಂತೆ ಸಿದ್ದಾರ್ಥ ನಗರದ ರುದ್ರಭೂಮಿಯಲ್ಲಿ ತಮ್ಮ ಪೂರ್ವಜರ ಸಮಾಧಿಗಳಿಗೆ ತಮ್ಮ ತಮ್ಮ ಕುಟುಂಬಗಳ ಸಮೇತ ಪೂಜೆಗಳನ್ನು ನೆರವೇರಿಸಿದರು.

### ಮೃತಪಟ್ಟ ಹಸುಗಳ ಮಾಲೀಕರಿಗೆ ವಿಮೆ ಹಣ

• **ಉದಯವಾಹಿನಿ ಮಾಲೂರು**

ಪಟ್ಟಣದ ಕೋಚಿಮುಲ್ ಶಿಬಿರ ಕಚೇರಿಯಲ್ಲಿ ಹಾಲು ಉತ್ಪಾದಕರ ಒಕ್ಕೂಟದ ವತಿಯಿಂದ ಮೃತಪಟ್ಟ ಹಸುಗಳ ಮಾಲೀಕರಿಗೆ ವಿಮೆ ಪರಿಹಾರದ ಚೆಕ್ ವಿತರಣೆ ಕಾರ್ಯಕ್ರಮವು ಮಂಗಳವಾರ ನಡೆಯಿತು. ಶಾಸಕ ಕೆ.ವೈ. ನಂಜೇಗೌಡ ಮಾತನಾಡಿ, 'ರೈತರು ಕಡ್ಡಾಯವಾಗಿ ತಮ್ಮ ಹಸುಗಳಿಗೆ ವಿಮೆ ಮಾಡಿಸಬೇಕು. ಆಕಸ್ಮಿಕವಾಗಿ ಹಸು ಮರಣ ಹೊಂದಿದರೆ ಮತ್ತೊಂದು ಹಸು ಖರೀದಿಸಲು ವಿಮೆ ಮೊತ್ತ ಅನುಕೂಲವಾಗುತ್ತದೆ' ಎಂದರು.'ಆರು ವರ್ಷಗಳಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಒಕ್ಕೂಟದ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದು, ನನ್ನ ಆಡಳಿತ ಅವಧಿಯಲ್ಲಿ ಹಾಲು ಉತ್ಪಾದಕರ ಅಭಿವೃದ್ಧಿಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದಿಂದ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ' ಎಂದರು. 'ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ಸಹಕಾರದಿಂದ ಹಾಲು ಉತ್ಪಾದಕರ ಕ್ಷೇಮಕ್ಕೆ ಉತ್ತಮ ನಿರ್ಣಯ ಕೈಗೊಳ್ಳಲಾಗಿದೆ. ಅದರಲ್ಲಿ ರಾಸುಗಳ ವಿಮೆ ಮೊತ್ತವನ್ನು 25 ಸಾವಿರದಿಂದ 70 ಸಾವಿರಕ್ಕೆ ಏರಿಸಲಾಗಿದೆ. ಈ ಮೊತ್ತವನ್ನು 80 ಸಾವಿರಕ್ಕೆ ಹೆಚ್ಚಿಸುವ ಬಗ್ಗೆ ಚಿಂತಿಸಲಾಗುತ್ತಿದೆ. ವಿಮೆಯನ್ನು ಎರಡು ಕಂತುಗಳಾಗಿ ಕಟ್ಟಲು ಅವಕಾಶ ಮಾಡಿ ಕೊಡಲಾಗಿದೆ' ಎಂದರು.

ಅಂತರಾಳದಿಂದ... EDITORIAL

## ಎಚ್‌ಡಿಕೆ ಆರೋಪಕ್ಕೆ ಎಡಿಜಿಪಿ

# ಎದುರೇಟು: ಬೆದರಿಕೆ ತಂತ್ರ ಸರಿಯಲ್ಲ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಲೋಕಾಯುಕ್ತದ ವಿಶೇಷ ತನಿಖಾ ದಳದ ಎಡಿಜಿಪಿ ಎಂ.ಚಂದ್ರಶೇಖರ್ ಅವರ ನಡುವಿನ ಜಟಾಪಟಿ ಅನಪೇಕ್ಷಿತವಾಗಿತ್ತು. ಈ ಜಟಾಪಟಿಯು ಸಭ್ಯತೆಯ ಎಲ್ಲೆಯನ್ನು ಮೀರಿದೆ. ಆರೋಪಿ ಸ್ಥಾನದಲ್ಲಿ ನಿಂತಿರುವ ಕುಮಾರಸ್ವಾಮಿ ಅವರು ತನಿಖಾಧಿಕಾರಿಯ ಬಗ್ಗೆ ಬಹಿರಂಗವಾಗಿ ಆಡಿರುವ ಮಾತು ಅವರ ಸ್ಥಾನದ ಘನತೆಗೆ ತಕ್ಕುದಲ್ಲ. ಅದೇ ರೀತಿ ಚಂದ್ರಶೇಖರ್ ಅವರು ತಮ್ಮ ತಂಡದ ಸದಸ್ಯರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿರುವ ಕೆಲವು ಮಾತುಗಳು ಕೆಟ್ಟ ಅರ್ಥವನ್ನು ಧ್ವನಿಸುವಂತಿವೆ. ಅಧಿಕಾರಿಗಳು ಪ್ರಬಲ ರಾಜಕಾರಣಿಗಳನ್ನು ಎದುರುಹಾಕಿಕೊಳ್ಳುವುದನ್ನು ಬಯಸುವುದಿಲ್ಲ. ಆದರೆ ಚಂದ್ರಶೇಖರ್ ಬಹಳ ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

ಕುಮಾರಸ್ವಾಮಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಎಸ್‌ಐಟಿ ಮುಖ್ಯಸ್ಥರು ರಾಜ್ಯಪಾಲರಿಗೆ ಪ್ರಸ್ತಾವ ಸಲ್ಲಿಸಿರುವ ಮಾಹಿತಿ ಸೋರಿಕೆಯಾಗಿತ್ತು. ಮಾಹಿತಿ ಸೋರಿಕೆ ಕುರಿತು ರಾಜಭವನದ ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೋರಿ ಎಡಿಜಿಪಿ ಪತ್ರ ಬರೆದಿದ್ದರು. ಇದು. ಕುಮಾರಸ್ವಾಮಿ ಮತ್ತು ಚಂದ್ರಶೇಖರ್ ಮಧ್ಯೆ ಜಟಾಪಟಿಗೆ ಕಾರಣವಾಗಿದೆ. ಬೆಂಗಳೂರಿನ ಗಂಗೇನಹಳ್ಳಿಯಲ್ಲಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಾಗ (ಡಿನೋಟಿಫೈ) ಅಕ್ರಮ ನಡೆದಿದೆ ಎಂಬ ಆರೋಪದ ಬಗ್ಗೆಯೂ ಲೋಕಾಯುಕ್ತದ ಪೊಲೀಸ್ ವಿಭಾಗವು ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದೆ. ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಅವರ ಪಾತ್ರ ಈ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಇದೆ. ಈ ಡಿನೋಟಿಫಿಕೇಷನ್‌ನಿಂದಾಗಿ ರಾಜ್ಯದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಎಂಬ ಆರೋಪವಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸ್ವಾಧೀನದಲ್ಲಿ 30 ವರ್ಷಗಳಿಂದ ಇದ್ದ ಜಮೀನನ್ನು ಯಡಿಯೂರಪ್ಪ ಅವರು 2007ರಲ್ಲಿ ಕಿರು ಅವಧಿಗೆ ಮುಖ್ಯಮಂತ್ರಿಯಾಗಿದ್ದಾಗ ಡಿನೋಟಿಫೈ ಮಾಡಲಾಯಿತು. ಡಿನೋಟಿಫೈ ಮಾಡಲಾದ ಜಮೀನನ್ನು ಕುಮಾರಸ್ವಾಮಿ ಅವರ ಅತ್ತೆ ಮತ್ತು ಬಾಮೈದನ ಹೆಸರಿಗೆ ವರ್ಗಾಯಿಸಲಾಯಿತು ಎಂಬ ಆರೋಪವಿದೆ. ಈ ವಿಚಾರವಾಗಿ ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಅವರನ್ನು ಲೋಕಾಯುಕ್ತ ಪೊಲೀಸರು ಪ್ರತ್ಯೇಕವಾಗಿ ವಿಚಾರಣೆಗೆ ಗುರಿಪಡಿಸಿದ್ದರು. ರಾಜಭವನದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿ ಚಂದ್ರಶೇಖರ್ ಬರೆದಿರುವ ಪತ್ರ ಬಹಿರಂಗವಾದ ನಂತರ ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ ಅವರು, ಎಡಿಜಿಪಿ ವಿರುದ್ಧ ಭ್ರಷ್ಟಾಚಾರ ಮತ್ತು ಸುಲಿಗೆಯ ಆರೋಪ ಹೊರಿಸಿದರು. ಕೇಂದ್ರ ಸಚಿವರು ಈ ರೀತಿ ಮಾಡುವ ಮೂಲಕ ಅಧಿಕಾರಿಗಳನ್ನು ಬೆದರಿಸಲು ಹಾಗೂ ತನಿಖೆಯ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದ್ದಾರೆ ಎಂಬ ಟೀಕೆಗಳು ಬಂದವು. ಕುಮಾರಸ್ವಾಮಿ ಅವರ ಬಳಿ ಅಧಿಕಾರಿಯ ವಿರುದ್ಧ ಸಾಕ್ಷ್ಯಗಳು ಇವೆ ಎಂದಾದರೆ, ಅವರು ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಮೊದಲೇ ಸಲ್ಲಿಸಬೇಕಿತ್ತು. ಈಗ ಆರೋಪ ಮಾಡುವ ಮೂಲಕ ಕುಮಾರಸ್ವಾಮಿ ಅವರು, ತನಿಖೆಗೆ ಸಹಕರಿಸುವ ಬದಲು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಬೇಕಾಗಿದೆ. ಕುಮಾರಸ್ವಾಮಿ ಅವರು ಬಹಿರಂಗವಾಗಿ ಮಾಡಿದ ಆರೋಪಗಳಿಗೆ ತ್ವರಿತವಾಗಿ ಪ್ರತಿಕ್ರಿಯೆ ನೀಡಿದ ಚಂದ್ರಶೇಖರ್. ಕಟುವಾದ ಪತ್ರವೊಂದನ್ನು ಬರೆದರು. ಕುಮಾರಸ್ವಾಮಿ ಅವರ ಉದ್ದೇಶವು ಎಸ್‌ಐಟಿ ಸದಸ್ಯರನ್ನು ಬೆದರಿಸುವುದಾಗಿದೆ. ಆರೋಪಿಯು ಯಾವುದೇ ಸ್ಥಾನದಲ್ಲಿ ಇರಲಿ ಆತ ತನಿಖೆಯನ್ನು ಎದುರಿಸಲೇಬೇಕು ಎಂದು ಒತ್ತಿಹೇಳಿದರು. ಎಸ್‌ಐಟಿ ಸಿಬ್ಬಂದಿ ನಿಷ್ಪಕ್ಷಪಾತವಾಗಿ ಇರಬೇಕು ಎಂಬ ಕಿವಿಮಾತು ಹೇಳಿದ ಎಡಿಜಿಪಿ, ಬಾಹ್ಯ ಒತ್ತಡಗಳಿಂದ ಅವರನ್ನು ತಾವು ರಕ್ಷಿಸುವುದಾಗಿ ಭರವಸೆ ನೀಡಿದರು.

> **ಕುಮಾರಸ್ವಾಮಿ ಅವರು ಮಾಡಿದ ಆರೋಪಗಳಿಗೆ ಪ್ರತಿಯಾಗಿ ತಮ್ಮ ಸಹೋದ್ಯೋಗಿಗಳಿಗೆ ಪತ್ರವೊಂದನ್ನು ಬರೆಯುವ ಮೂಲಕ ಚಂದ್ರಶೇಖರ್ ಅವರು, ತನಿಖಾಧಿಕಾರಿಗಳು ರಾಜಕೀಯ ಒತ್ತಡಗಳಿಗೆ ಮಣಿಯುವುದಿಲ್ಲ. ಬೆದರುವುದಿಲ್ಲ ಎಂಬ ಬಲವಾದ ಸಂದೇಶವನ್ನು ರವಾನಿಸಿದ್ದಾರೆ. ಕುಮಾರಸ್ವಾಮಿ ಅವರು 2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಎಂಬ ಕಂಪನಿಗೆ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆಯನ್ನು ಕಾನೂನುಬಾಹಿರವಾಗಿ ಮಂಜೂರು ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಚಂದ್ರಶೇಖರ್ ನೇತೃತ್ವದ ಎಸ್‌ಐಟಿ ನಡೆಸುತ್ತಿದೆ.**

ಅದರ ಜೊತೆಯಲ್ಲೇ ಅವರು, ಜಾರ್ಜ್ ಬರ್ನಾರ್ಡ್ ಶಾ ಅವರ ಮಾತುಗಳನ್ನು ಉಲ್ಲೇಖಿಸಿ ಎಸ್‌ಐಟಿ ಸದಸ್ಯರಿಗೆ ಒಂದು ಸಲಹೆ ನೀಡಿದರು: 'ಹಂದಿಗಳ ಜೊತೆ ಗುದ್ದಾಟಕ್ಕೆ ಹೋಗಲೇಬೇಡಿ. ಹಾಗೆ ಮಾಡಿದರೆ ಇಬ್ಬರಿಗೂ ಗಲೀಜಾಗುತ್ತದೆ. ಆದರೆ ಹಂದಿಯು ಅದರಿಂದ ಖುಷಿಪಡುತ್ತದೆ ಎಂಬುದು ಆ ಮಾತು. ಪತ್ರದಲ್ಲಿ ಚಂದ್ರಶೇಖರ್ ಅವರು ಶಾ ಅವರ ಈ ಮಾತನ್ನು ಉಲ್ಲೇಖಿಸಿರುವುದು ಎಷ್ಟು ಸಮಂಜಸ ಎಂಬ ಪ್ರಶ್ನೆ ಖಂಡಿತವಾಗಿಯೂ ಇದೆ. ಕುಮಾರಸ್ವಾಮಿ ಅವರು ಕೇಂದ್ರ ಸಚಿವ. ಅವರು ಹೊರಿಸಿದ ಆರೋಪಗಳಿಗೆ ಪ್ರತಿಕ್ರಿಯೆ ನೀಡುವಾಗ ಈ ಮಾತುಗಳನ್ನು ಉಲ್ಲೇಖಿಸಿರುವುದು ಸುಸಂಸ್ಕೃತ ನಡೆಯಂತೆ ಕಾಣುವುದಿಲ್ಲ. ತನಿಖಾಧಿಕಾರಿ ಯಾರಾಗಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಆರೋಪ ಎದುರಿಸುತ್ತಿರುವ ವ್ಯಕ್ತಿಯು ಹೊಂದಿರುವುದಿಲ್ಲ. ಈ ಮಾತನ್ನು ಸುಪ್ರೀಂ ಕೋರ್ಟ್ ಕೂಡ ಹೇಳಿದೆ ಎಂಬುದು ಮುಖ್ಯಮಂತ್ರಿಯಾಗಿಯೂ ಕರ್ತವ್ಯ ನಿರ್ವಹಿಸಿರುವ ಕುಮಾರಸ್ವಾಮಿ ಅವರಿಗೆ ತಿಳಿದಿರಬೇಕು. ಚಂದ್ರಶೇಖರ್ ಅವರನ್ನು ಅವರ ಮೂಲ ಕೇಡರ್ ಆಗಿರುವ ಹಿಮಾಚಲ ಪ್ರದೇಶಕ್ಕೆ ಕಳುಹಿಸಲಾಗುತ್ತದೆ ಎಂಬ ಊಹಾಪೋಹಗಳು ಅಧಿಕಾರಿಗಳ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಉದ್ದೇಶ ಹೊಂದಿವೆ. ಅಲ್ಲದೆ, ಆರೋಪಿಯ ಪರವಾಗಿ ಕೇಂದ್ರ ಸರ್ಕಾರದ ತಾಕತ್ತು ಬಳಕೆಯಾಗುತ್ತದೆ ಎಂಬ ಸಂದೇಶವನ್ನೂ ಅಂತಹ ಊಹಾಪೋಹಗಳು ರವಾನಿಸುತ್ತವೆ. ಪ್ರಬಲ ರಾಜಕಾರಣಿಗಳ ಎದುರು ಗಟ್ಟಿಯಾಗಿ ನಿಲ್ಲುವ ಸಾಮರ್ಥ್ಯ ಇರುವ, ನ್ಯಾಯಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಧೈರ್ಯವಿರುವ ಅಧಿಕಾರಿಗಳು ದೇಶಕ್ಕೆ ಇನ್ನಷ್ಟು ಸಂಖ್ಯೆಯಲ್ಲಿ ಬೇಕು. ಒಟ್ಟಾರೆಯಾಗಿ ಈ ಘಟನೆಯು ತನಿಖಾ ಪ್ರಕ್ರಿಯೆಯನ್ನು ರಾಜಕಾರಣಿಗಳು ಗೌರವಿಸಬೇಕಿರುವುದರ, ಅದರ ಮೇಲೆ ಪ್ರಭಾವ ಬೀರುವುದಕ್ಕೆ ಪ್ರಯತ್ನಿಸುವುದರಿಂದ ದೂರ ಉಳಿಯಬೇಕಿರುವುದರ ಮಹತ್ವವನ್ನು ಬಿಡಿಸಿ ಹೇಳಿದೆ.

---



# ರಾಮಾಯಣ

## ದಶರಥನು ಯಾಗ ದೀಕ್ಷೆಯನ್ನು ಹೊಂದಿದ್ದು

• ಹಿಂದಿನ ಸಂಚಿಕೆಯಿಂದ **8ನೆಯ ಅಧ್ಯಾಯ**

ಮನ್ನಣೆಯಿಂದ ಕೊಟ್ಟರೆ ರಾಜಕಾರವು ಕೆಡುವುದಿಲ್ಲವೆಂದು ಆ ಅಧಿಕಾರಿಗಳಿಗೆ ಹೇಳಿದನು ಆಮೇಲೆ ಕೆಲವು ದಿವಸಗಳೊಳಗೆ ನಾನಾದೇಶಗಳ ಸಮಸ್ತ ರಾಯರೂ ರತ್ನ ವಸ್ತು ವಾಹನಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಬರಲು ವಸಿಷ್ಠಮುನೀಶ್ವರನು ಅತಿಹರ್ಷದಿಂದ ಅವರನ್ನು ಎದುರುಗೊಂಡನು. ದಶರಥರಾಯನ ಸಮೀಪಕ್ಕೆ ಹೋಗಿ ''ಸಮಸ್ತ ದೇಶದ ರಾಯರೂ ತಮ್ಮ ತಮ್ಮ ದೇಶಗಳ ವಸ್ತುಗಳನ್ನು ನಿನಗೆ ಕಾಣಿಕೆಯಾಗಿ ತಂದಿರುವರು. ಆ ಅರಸುಗಳಿಗೆ ಯಥಾಕ್ರಮದಲ್ಲಿ ಸತ್ಕಾರವನ್ನು ಮಾಡಿದೆನು. ಊಳಿಗದವರು ಯಾಗಮಂಟಪವನ್ನು ಅತಿ ವಿಚಿತ್ರವಾಗಿ ನಿರ್ಮಿಸಿರುವರು. ಬೇಕಾದ ವಸ್ತುಗಳಿಂದ ಯಾಗಮಂಟಪವು ಪರಿಪೂರ್ಣವಾಗಿದೆ ನೀನು ಯಾಗಮಂಟಪವನ್ನು ನೋಡಬೇಕು ಎಂದು ವಸಿಷ್ಠನು ಹೇಳಿದನು.

ಆ ಬಳಿಕ ವಸಿಷ್ಠ ಮತ್ತು ಋಷ್ಯಶೃಂಗಮುನಿಗಳ ಆಜ್ಞೆಯಿಂದ ಶುಕ್ಲಪಕ್ಷದ ಶುಭದಿವಸದಲ್ಲಿ ಶುಭನಕ್ಷತ್ರ ಶುಭಯೋಗದಲ್ಲಿ ಸಮಸ್ತ ಭೂಮಂಡಲಕ್ಕೂ ಒಡೆಯನಾದ ದಶರಥಮಹಾರಾಯನು ಶಾಲಾಪ್ರವೇಶವನ್ನು ಮಾಡಿದನು. ವಸಿಷ್ಠಾದಿ ಸಮಸ್ತಋಷಿಗಳೂ ಋಷ್ಯಶೃಂಗಮುನೀಶ್ವರನನ್ನು ಮುಂದಿಟ್ಟುಕೊಂಡು ಶಾಸ್ತ್ರೋಕ್ತಪ್ರಕಾರದಲ್ಲಿ ಅಶ್ವಮೇಧಯಾಗವನ್ನು ಪ್ರಾರಂಭಿಸಿದರು ಆಗ ಅತ್ಯಂತ ವಿಭವದಿಂದ ದಶರಥನು ತನ್ನ ಸ್ತ್ರೀಯರೊಡನೆ ಯಾಗದೀಕ್ಷೆಯನ್ನು ಕೈಗೊಂಡನು.

### ದಶರಥನು ಅಶ್ವಮೇಧಯಾಗವನ್ನು ಮಾಡಿದ್ದು

ಅನಂತರ ಅಶ್ವಮೇಧಯಾಗಕ್ಕೋಸ್ಕರ ಬಿಟ್ಟ ಕುದುರೆಯು ಒಂದು ವರುಷದ ಮೇಲೆ ದಿಗ್ವಿಜಯ ಮಾಡಿಕೊಂಡು ತಿರುಗಿ ಬಂದಮೇಲೆ ಸರಯೂ ನದೀತೀರದಲ್ಲಿ ಅಶ್ವಮೇಧಯಾಗವು ಪ್ರವರ್ತಿತ ವಾಯಿತು. ವಸಿಷ್ಠ ಮೊದಲಾದ ಋಷಿಗಳು ಋಷ್ಯಶೃಂಗನನ್ನು ಮುಂದಿಟ್ಟುಕೊಂಡು ಯಾಗವನ್ನು ಮಾಡಿದರು. ವೇದವೇದಾಂಗತತ್ತ್ವಜ್ಞರಾದ ಋತ್ವಿಜರು ಹೋಮಾದಿ ಕರ್ಮಗಳನ್ನು ಮಾಡಿದರು.ಆಮೇಲೆ ಪ್ರವರ್ಗಕರ್ಮಗಳನ್ನು ಮಾಡಿ ಉಳಿದ ಕರ್ಮಗಳನ್ನು, ವಿಧ್ಯುಕ್ತ ಪ್ರಕಾರ ದಲ್ಲಿ ಸಮಾಪ್ತಿಗೊಳಿಸಿದರು. ದಶರಥರಾಯನಿಂದ ಅನೇಕ ಸತ್ಕಾರಗಳನ್ನು ಪಡೆದು ಪ್ರಾತಸ್ಸವನವೆಂಬ ಸತ್ಕರ್ಮವನ್ನು ಮಾಡಿದರು. ಆಮೇಲೆ ಇಂದ್ರದೇವತಾಕವಾದ ಪುರೋಡಾಶ ವನ್ನು ವಿಧ್ಯುಕ್ತ ಪ್ರಕಾರದಲ್ಲಿ ಹೋಮಮಾಡಿ ಅಭಿಷವನವೆಂಬ ಸತ್ಕರ್ಮವನ್ನು ಸಮಾಪ್ತಿಗೊಳಿಸಿ ತೃತೀಯಸವನವೆಂಬ ಸತ್ಕರ್ಮವನ್ನು ಮಾಡಿದರು ಹೀಗೆ ಮಂತ್ರ, ತಂತ್ರ ಕರ್ಮಗಳ ಲೋಪವಿಲ್ಲದೆ ಸಾಂಗವಾಗಿ ಸತ್ಕರ್ಮಗಳನ್ನು ಮಾಡುತ್ತಿರಲು ಆ ಯಾಗಮಂಟಪವು ಸಾಕ್ಷಾತ್ಪರಬ್ರಹ್ಮಮಯವಾಗಿ ಮಂಗಳಕರವಾಗಿ ಪ್ರಕಾಶಿಸುತ್ತಿತ್ತು. **ಮುಂದುವರಿಯುವುದು...**

---

# ಎನ್‌ಎಸ್‌ಇಪಿಡಬ್ಲ್ಯು 2024 ವಿಚಾರ ಸಂಕಿರಣ ಆಯೋಜನೆ

## ಹಿರಿಯರ ಮಾನಸಿಕ ಯೋಗಕ್ಷೇಮದ ಕುರಿತು ಸಂವಾದ ನಡೆಸಿದ ತಜ್ಞರು, ಸೆಲೆಬ್ರಿಟಿಗಳು

• **ಉದಯವಾಹಿನಿ ಬೆಂಗಳೂರು**



ಉದಯವಾಹಿನಿ ಚಿತ್ರ

ಭಾರತ ಅಕ್ಟೋಬರ್ 1, 2024 ವಿಶ್ವಸಂಸ್ಥೆಯ ಹಿರಿಯ ವ್ಯಕ್ತಿಗಳ ಅಂತರರಾಷ್ಟ್ರೀಯ ದಿನಾಚರಣೆ ಯುಎನ್ ಐಡಿಒಪಿ ಹಿನ್ನೆಲೆಯಲ್ಲಿ ಹಿರಿಯರ ಮಾನಸಿಕ ಯೋಗಕ್ಷೇಮ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ 2024 (ಎನ್‌ಎಸ್ ಇಪಿಡಬ್ಲ್ಯು24) ಬೆಂಗಳೂರು ಇಂಟರ್‌ನ್ಯಾಶನಲ್ ನಲ್ಲಿ ಸೆಂಟರ್ ನಲ್ಲಿ ನಡೆಯಿತು. ಕರಿಸ್ತಾ ಫೌಂಡೇಶನ್ ಮತ್ತು ಸೆನಿ ಇಂಡಿಯಾ (ಟಿಝುಡ್‌ಎಂಒ ಅವರ) ಆಯೋಜಿಸಿದ್ದ ಈ ಒಂದು ದಿನದ ವಿಚಾರ ಸಂಕಿರಣದಲ್ಲಿ ತಜ್ಞರು, ಪರಿಣತರು ಭಾಗವಹಿಸಿದರು. ದೇಶದ ವೃದ್ಧರು ಅನುಭವಿಸುವ ಮಾನಸಿಕ ಸವಾಲುಗಳು ಮತ್ತು ಸಾಮಾಜಿಕ ಒತ್ತಡಗಳ ಕುರಿತು ಈ ವಿಚಾರ ಸಂಕಿರಣದಲ್ಲಿ ಸಂವಾದ ನಡೆಯಿತು.

ನಗರಗಳು ಬೆಳೆದಂತೆ, ಸಮಾಜಗಳು ಬದಲಾದಂತೆ, ಯುವ ಜನತೆ ವಲಸೆ ಹೋದಂತೆ ಹಿರಿಯ ನಾಗರಿಕರು ಏಕಾಕಿತನದ ನೋವನ್ನು ಅನುಭವಿಸುತ್ತಾರೆ. ವೃದ್ಧರಲ್ಲಿನ ಏಕಾಕಿತನ ಈಗ ಬಹಳ ದೊಡ್ಡ ಸಮಸ್ಯೆಯಾಗಿದೆ. ಏಕಾಕಿತನದಿಂದ ಸಿಗರೇಟ್ ಸೇವನೆ ಹೆಚ್ಚಾಗುತ್ತದೆ ಎಂದು ವರದಿಗಳು ಹೇಳುತ್ತವೆ. ಎರಡು ಪ್ಯಾಕ್ ಸಿಗರೇಟ್ ಸೇದುವ ವ್ಯಕ್ತಿಗಳೂ ಇದ್ದಾರೆ. 2021ರ ಜನಗಣತಿಯ ಪ್ರಕಾರ 60 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ 104 ದಶಲಕ್ಷಕ್ಕೂ ಹೆಚ್ಚು ಜನರಿದ್ದಾರೆ. (ಒಟ್ಟು ಜನಸಂಖ್ಯೆಯ ಸುಮಾರು 9.4%), ಈ ಸಂಖ್ಯೆಯು 2050ರ ವೇಳೆಗೆ ಗಣನೀಯವಾಗಿ ಒಟ್ಟು ಜನಸಂಖ್ಯೆಯ ಶೇ.19.6ರಷ್ಟನ್ನು ತಲುಪುವ ನಿರೀಕ್ಷೆ ಇದೆ. ಹಾಗಾಗಿ ವಿಚಾರಣ ಸಂಕಿರಣದಲ್ಲಿ ವೃದ್ಧರ ಮಾನಸಿಕ ಆರೋಗ್ಯ ಕಾಪಾಡುವ ಕುರಿತು ಅನೇಕ ವಿಚಾರಗಳ ಚರ್ಚೆ ನಡೆಯಿತು. ಅಗತ್ಯ ಇರುವ ಸರ್ಕಾರಿ ನೀತಿಗಳು, ಹೊಸ ಆಲೋಚನೆಗಳು, ನೀತಿಗಳು, ಸಹಾನುಭೂತಿಯ ಕ್ರಮಗಳ ಕುರಿತು ಸಂವಾದ ನಡೆಯಿತು.

ಈ ಕುರಿತು ಮಾತನಾಡಿದ ಖ್ಯಾತ ಕ್ರಿಕೆಟಿಗ ಪದ್ಮಶ್ರೀ ಡಾ. ಸೈಯದ್ ಎಂ.ಎಚ್. ಕಿರ್ಮಾನಿ ಅವರು, ನೀವು ಸೆಲ್ಫ್ ಮೇಡ್ ಆಗಿರಬಹುದು, ಆದರೆ ನಿಮ್ಮ ತಂದೆ ತಾಯಿಯ ನಿಸ್ವಾರ್ಥ ಪ್ರೀತಿ, ಬೆಂಬಲವಿಲ್ಲದೆ ಬೆಳೆದಿಲ್ಲ, ನನ್ನ ತಾರುಣ್ಯದಲ್ಲಿ ನಾನು ಸಾಕಷ್ಟು ಸಾಧನೆ ಮಾಡಿದ್ದೇನೆ. ಈಗ ಹಿರಿಯ ವಯಸ್ಸಿನ ಜೀವಗಳಿಗೆ ಒಂದು ಒಳ್ಳೆಯ ವ್ಯವಸ್ಥೆ ರೂಪಿಸುವುದು ಎಷ್ಟು ಮುಖ್ಯ ಎಂದು ಅರ್ಥ ಮಾಡಿಕೊಂಡಿದ್ದೇನೆ. ನಿಮ್ಮ ಪೋಷಕರು ನಿಮ್ಮ ಜೀವನದಲ್ಲಿ ಅವಶ್ಯವಾಗಿ ಬೇಕು.

ಅವರಿಗೆ ಕೃತಜ್ಞರಾಗಿರುವುದು ಮತ್ತು ಅವರು ಆರಾಮವಾಗಿ ಇರುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ.

ನಮ್ಮ ಹಿರಿಯರಿಗೆ ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ಬೆಂಬಲವನ್ನು ಒದಗಿಸಲು ನಾವು ಒಂದಾಗಬೇಕು ಮತ್ತು ಅದಕ್ಕೆ ಪೂರಕವಾದ ನೀತಿಗಳನ್ನು ರೂಪಿಸಬೇಕು. ಅವರಿಗೆ ಒಂಟಿತನ ಕಾಡುವಂತೆ ಮಾಡಬಾರದು. ಇಂಥದ್ದೊಂದು ಮಹತ್ವದ ಕಾರ್ಯವನ್ನು ಮಾಡುತ್ತಿರುವ ಕರಿಸ್ತಾ ಫೌಂಡೇಶನ್ ಗೆ ಅಭಿನಂದನೆ ಮತ್ತು ಕೃತಜ್ಞತೆ. ಇದೊಂದು ಮಾನವೀಯತೆಗೆ ಮಾಡುವ ದೊಡ್ಡ ಸೇವೆಯಾಗಿದೆ'' ಎಂದು ಹೇಳಿದರು.

ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀಮತಿ ಗೀತಾಂಜಲಿ ಕಿರ್ಲೋಸ್ಕರ್ ಅವರು, ''ಸಹಾನುಭೂತಿ ಅನ್ನುವುದು ಕೇವಲ ಪದವಲ್ಲ, ಅದು ನಾವು ನಮ್ಮ ಹಿರಿಯರಿಗೆ ತೋರಿಸಬೇಕಾದ ಪ್ರೀತಿಯ ಅಡಿಪಾಯ. ವೃದ್ಧರು ಅನ್ನುವುದರಿಂದ ಅವರಿಗೆ ವಯಸ್ಸಾಗಿದೆ ಎಂಬುದು ಮಾತ್ರ ಅರ್ಥವಲ್ಲ, ಅವರು ಕಥೆಗಳನ್ನು ಹೊಂದಿರುವ, ಭಾವನೆಗಳನ್ನು ಇಟ್ಟುಕೊಂಡಿರುವ ಮತ್ತು ಸೇವೆಯ ಅಗತ್ಯ ಇರುವ ಜೀವಗಳು ಎಂಬುದನ್ನು ನಾವು ಸಾಮಾನ್ಯವಾಗಿ ಮರೆತುಬಿಡುತ್ತೇವೆ.

ನೀತಿಗಳನ್ನು ಮಾಡಿದರೆ ಮಾತ್ರ ಸಾಕಾಗುವುದಿಲ್ಲ, ಹಿರಿಯ ಜೀವಗಳಿಗೆ ಅವರ ಮಾತುಗಳನ್ನು ಕೇಳಲ್ಪಡುವ, ಅವರನ್ನು ಗೌರವಿಸಲ್ಪಡುವ ವಾತಾವರಣವನ್ನು ಒದಗಿಸಬೇಕು. ಕುಟುಂಬದ ಬೆಂಬಲ, ಕಾರ್ಪೊರೇಟ್ ಜವಾಬ್ದಾರಿ ಕಾರ್ಯಕ್ರಮಗಳು ಮತ್ತು ಸರ್ಕಾರದ ನೀತಿಗಳ ಮೂಲಕ ಸಹಾನುಭೂತಿಯ ಜಗತ್ತನ್ನು ಸೃಷ್ಟಿಸಬೇಕು. ಎನ್‌ಎಸ್ ಇಪಿಡಬ್ಲ್ಯು 2024ನಂತಹ ಕಾರ್ಯಕ್ರಮದ ಮೂಲಕ ನಾವು ಸಹಾನುಭೂತಿ ಮತ್ತು ಕಾಳಜಿಯುಳ್ಳ ಸಮಾಜವನ್ನು ರೂಪಿಸುವ ಕುರಿತು ಸಂವಾದ ನಡೆಸಬೇಕು.

ಎಲ್ಲರೂ ಒಟ್ಟು ಸೇರಿ ನಾವು ವೃದ್ಧಾಪ್ಯವನ್ನು ಘನತೆ ಮತ್ತು ಗೌರವದಿಂದ ಸ್ವೀಕರಿಸುವ ಜಗತ್ತನ್ನು ರಚಿಸಬಹುದು'' ಎಂದು ಹೇಳಿದರು.

ವಿಚಾರ ಸಂಕಿರಣದಲ್ಲಿ ಡಿಮೆನ್ಶಿಯಾ ಅಲಯನ್ಸ್ ಇಂಡಿಯಾದ ಅಧ್ಯಕ್ಷರು, ನೈಟಿಂಗೇಲ್ಸ್ ಸೆಂಟರ್ ಫಾರ್ ಏಜಿಂಗ್ ನ ಮ್ಯಾನೇಜಿಂಗ್ ಟ್ರಸ್ಟಿ ಡಾ. ರಾಧಾ ಎಸ್. ಮೂರ್ತಿ, ಕೋವೈಕೇರ್ ರಿಟೈರ್ಮೆಂಟ್ ಹೋಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕರ್ನಲ್. ಅಚಲ್ ಶ್ರೀಧರನ್, ಪಬ್ಲಿಕ್ ಪಾಲಿಸಿ ಅನಾಲಿಸ್ಟ್ ಪ್ರೊ. ಅಜಿತ್ ಮಣಿ, ಶಿಕ್ಷಣ ತಜ್ಞೆ ಡಾ. ಮಂಜುಳಾ ರಾಮನ್, ಸಿನಿಮಾ ನಿರ್ದೇಶಕ-ಬರಹಗಾರ ಶ್ರೀ ಬಾಲಚಂದರ್ ಗಾಂಡೇಕರ್, ಮತ್ತು ಥಿಯೇಟರ್ ಫಾರ್ ಚೇಂಜ್ ನ ಸಂಸ್ಥಾಪಕಿ ಶ್ರೀಮತಿ ಸುಜಾತಾ ಬಾಲಕೃಷ್ಣ ಇದ್ದರು.

> **ನಿಮ್ಹಾನ್ಸ್ ನ ಸೆಂಟರ್ ಫಾರ್ ಕಾನ್ಶಿಯಸ್ ನೆಸ್ ನ ಸೀನಿಯರ್ ರಿಸರ್ಚ್ ಫೆಲೋ ಡಾ.ಸಾಕೇತ್ ಎಂ. ಧ್ಯಾನದ ಸಕಾರಾತ್ಮಕ ಪರಿಣಾಮಗಳ ಕುರಿತು ಮಾತನಾಡಿದರು. ಕರಿಸ್ತಾ ಫೌಂಡೇಶನ್‌ನ ಮ್ಯಾನೇಜಿಂಗ್ ಟ್ರಸ್ಟಿ ಅನಿಲ್ ಕುಮಾರ್ ಪಿ. ಅವರು, ಈ ಪ್ರಯಾಣದಲ್ಲಿ ನಮಗೆ ಬದಲಾವಣೆಗೆ ಕೈಜೋಡಿಸುವ ಮನಸ್ಥಿತಿಯ ಬದ್ಧತೆ ಮತ್ತು ಸಾಮಾಜಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಮತ್ತು ಸಂಸ್ಥೆಗಳ ಸಹಯೋಗದ ಅಗತ್ಯವಿದೆ. ಉತ್ತಮ ಭವಿಷ್ಯವನ್ನು ರೂಪಿಸಲು ಸಹಾಯ ಮಾಡಲು ಸಾವಿರಾರು ಕೈಗಳು ಒಟ್ಟಾಗಿ ಸೇರಬೇಕು ಹಿರಿಯರಿಗಾಗಿ ಸಚಿವಾಲಯ'ವನ್ನು ಸೃಷ್ಟಿಸಲು ಪ್ರಭಾವ ಬೀರಬೇಕು. ನಮ್ಮ ಹಿರಿಯ ನಾಗರಿಕರಿಗೆ ಉತ್ತಮವಾದ ಭಾರತವನ್ನು ರಚಿಸಲು, ಅವರ ಸಮಸ್ಯೆಯನ್ನು ಪರಿಹರಿಸಲು ಮತ್ತು ಅವರಿಗೆ ಸೂಕ್ತ ಪರಿಹಾರಗಳನ್ನು ಒದಗಿಸಲು ಇದು ಸೂಕ್ತ ಸಮಯವಾಗಿದೆ ಎಂದು ಹೇಳಿದರು.**


> **ಸಹ-ಸಂಸ್ಥಾಪಕ ಟ್ರಸ್ಟಿ ಆಗಿರುವ ಶಿಲ್ಪಿ ದಾಸ್ ಅವರು, ನಾನು ದೀರ್ಘಕಾಲ ಬದುಕುವುದಾದರೆ ಇನ್ನೊಂದು ದಶಕದವರೆಗೆ ಹಿರಿಯ ನಾಗರಿಕರ ಟ್ಯಾಗ್ ಇಲ್ಲದೆ ಬದುಕಬಹುದು. ಆದರೆ ಜೀವನವು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂದು ಯಾರಿಗೆ ಗೊತ್ತು? ನನಗೆ ಒಂದಂತೂ ಸ್ಪಷ್ಟವಿದೆ. ನಾನು ಅಳುವುದಕ್ಕೆ, ಕೊರಗುವುದಕ್ಕೆ, ದೂರುವುದಕ್ಕೆ, ಕೋಪಿಸಿಕೊಂಡಿರುವುದಕ್ಕೆ ಇಷ್ಟ ಪಡುವುದಿಲ್ಲ. ನಾನು ಯಾರೂ ಕದಿಯಲು ಸಾಧ್ಯವಾಗದ ಆನಂದಕರ ಸ್ಥಿತಿಯನ್ನು ಹೊಂದಬೇಕಾದರೆ ಇವತ್ತೇ ಅದಕ್ಕೆ ಪೂರಕವಾದ ಆಯ್ಕೆಗಳನ್ನು ಮಾಡಬೇಕು. ಈ ಪ್ರಯಾಣದಲ್ಲಿ ಹೊರಗಿನ ಸಹಾಯ ನನಗೆ ದೊರಕವುದೇ? ಯಾಕೆಂದರೆ ಇವತ್ತು ಸಾಮಾಜಿಕ ಸಹಾನುಭೂತಿ ಬಹಳ ಅಪರೂಪವಾಗಿದೆ'' ಎಂದು ಹೇಳಿದರು.**

---

# ಹೆಚ್.ಎಸ್.ಪ್ರತಿಮಾ ಹಾಸನ್‌ಗೆ

## ಶ್ರೀಮತಿ ಯಶೋದರಮ್ಮ ದಾಸಪ್ಪ ಪ್ರಶಸ್ತಿ ಪ್ರಧಾನ

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

ಇತ್ತೀಚಿಗೆ ಮೈಸೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯಿಂದ 13ನೇ ವರ್ಷದ ವಾರ್ಷಿಕೋತ್ಸವ ಸಂದರ್ಭದಲ್ಲಿ ಮಹಿಳಾ ಸಾಧಕೀಯರಿಗೆ ಶ್ರೀಮತಿ ಯಶೋಧರಮ್ಮ ದಾಸಪ್ಪ ಪ್ರಶಸ್ತಿಯನ್ನು ಹಾಸನ ನಗರದ ಬಹುಮುಖ ಪ್ರತಿಭೆ ಯಾದ ಸಾಹಿತಿ,ಶಿಕ್ಷಕಿ, ಸಮಾಜ ಸೇವಕಿ, ಸಂಸ್ಥಾಪಕ ಅಧ್ಯಕ್ಷರು ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನ'.ಜಿಲ್ಲೆ ,ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಸೆಮಿನಾರ್ ಗಳಲ್ಲಿ ಭಾಗವಹಿಸಿದ್ದು, ಹಾಗೂ ಪ್ರಶಸ್ತಿಯನ್ನು ಪಡೆದು ಗುರುತಿಸಿಕೊಂಡಿರುವ ಹಾಗೂ ಇತ್ತೀಚೆಗೆ 2024ನೇ ಯ ಸಾಲಿನ ಸ್ವತಂತ್ರೋತ್ಸವ ಪ್ರಶಸ್ತಿಯನ್ನು ಜಿಲ್ಲಾಡಳಿತದಿಂದ ಪಡೆದಿರುವ ಶ್ರೀಮತಿ ಹೆಚ್.ಎಸ್.ಪ್ರತಿಮಾ ಹಾಸನ್ ರವರನ್ನು ಇವರ ಸಾಹಿತ್ಯ,ಸಾಮಾಜಿಕ,ಸಾಂಸ್ಕೃತಿಕ,ಶೈಕ್ಷಣಿಕ ಕ್ಷೇತ್ರಗಳ ಸೇವೆಯನ್ನು ಕಂಡು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥಾಪಕ ಅಧ್ಯಕ್ಷರು ಶ್ರೀಮತಿ ಹೆಚ್.ಎಲ್. ಯಮುನಾ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಶಸ್ತಿಯನ್ನು ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಿರೂಪಣೆಯನ್ನು ಮಾಡಿ ಪ್ರಶಸ್ತಿಯನ್ನು ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ರವರು ಪಡೆದು ಕಾರ್ಯಕ್ರಮದ ಯಶಸ್ವಿಯಾಗಲು ಕಾರಣರಾದರು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಜೆಡಿಎಸ್ ಮುಖಂಡ ಎಚ್ ಕೆ ರಾಮು ರವರು,ಕ ಸಾ ಪ ದ ಜಿಲ್ಲಾಧ್ಯಕ್ಷರು ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷೆ ಹೆಚ್. ಎಲ್. ಯಮುನಾ ರವರು, ಗೌಡತಿಯರ ಸೇನೆ ರಾಜ್ಯಾಧ್ಯಕ್ಷೆ ರೇಣುಕಾ ರವರು ಇನ್ನೂ ಹಲವರು ಉಪಸ್ಥಿತರಿದ್ದರು.


---



ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

# ಮೌನವೇ ಆಧಾರ ಒಮ್ಮೊಮ್ಮೆ ಹೆಣ್ಣಿಗೆ

• **ಉದಯವಾಹಿನಿ, ವಿಶೇಷ**



ಹೆಣ್ಣಿನಲಿ ಮನಸಿಹುದು ಅರಿಯುತಲಿ
ನಡೆಯುತಿರಿ
ಕಣ್ಣವಳು ಬಾಳಿನಲ್ಲಿ ತಿಳಿಯುತಲಿಯೆ
ಸಣ್ಣತನ ತರವಲ್ಲ ಮಾಡದಿರಿ ಭೇದವನು
ಬಣ್ಣವದು ಬದುಕಲ್ಲ ಲಕ್ಷ್ಮಿದೇವಿ.....

ಮೇಲಿನ ಮುಕ್ತಕದಂತೆ ಬದುಕು ಬಹಳ ಸರಳವೇನಲ್ಲ ಹಾಗೆಂದು ಕಠಿಣವೂ ಅಲ್ಲ ಸರಳ ಕಠಿಣವಿದ್ದರು ಸಹ ಜೀವನದ ಬದುಕಿನ ತೇರನ್ನು ಎಳೆಯಲೇ ಬೇಕು ಆ ದಾರಿಯಲ್ಲಿ ಸಾಗಲೇ ಬೇಕು ಎಂಬುದು ಪ್ರತಿಯೊಬ್ಬರೂ ಅರಿತಿರುತ್ತಾರೆ. ಅಂತಹ ಜೀವನದಲ್ಲಿ ಹೆಣ್ಣಿನ ಬದುಕು ಬಹಳಷ್ಟು ಸೊರಗುತ್ತದೆ, ಬಹಳಷ್ಟು ಸಂತಸವನ್ನು ಪಡುತ್ತದೆ, ಬಹಳಷ್ಟು ಅನುಭವಗಳನ್ನು ಅನುಭವಿಸಿ ಕಲಿಯುತ್ತದೆ, ನೋವು ನಲಿವುಗಳ ಸಮಿಶ್ರಣವೇ ಜೀವನ ಅಂತಹ ಜೀವನದಲ್ಲಿ ಹೆಣ್ಣಿನ ಬದುಕು ಬಹಳಷ್ಟು ಪಾತ್ರದಲ್ಲಿ ನಿರ್ವಹಣೆ ಮಾಡುತ್ತಾ ಬದುಕನ್ನು ಸಮರದಂತೆ ನಡೆಸುವವಳು ತನ್ನ ಪಾತ್ರವನ್ನು ಬಹಳ ಸೊಗಸಾಗಿ ಎಂತಹ ಕಷ್ಟಗಳು ಬಂದರೂ ತೋರಿಸದಂತೆ ನಿರ್ವಹಿಸಿ ಯಶಸ್ವಿಯಾಗುವವಳೇ ಹೆಣ್ಣು.

. ಬದುಕನ್ನು ನಿರ್ವಹಿಸುವಾಗ ಬಹಳಷ್ಟು ಅಡೆತಡೆಗಳು ಬರುವುದು ಸಹಜವೇ ಅಂತಹ ಅಡೆತಡೆಗಳಲ್ಲಿ ಕೆಲವು ಮಾತುಗಳನ್ನು ಕೇಳುವುದು ಬೇಕೆಂದರೂ ಮಾತುಗಳನ್ನು ಕೇಳಲೇಬೇಕು, ಬೇಡವೆಂದರೂ ಮಾತುಗಳು ಅನಿವಾರ್ಯವಾಗಿ ಬಿಡುತ್ತದೆ. ಒಟ್ಟಾರೆ ಬದುಕಿನಲ್ಲಿ ಚರ್ಚೆಗಳನ್ನು ಮಾಡುವುದಕ್ಕಿಂತ ಮೌನವಾಗಿರುವುದು ಕೆಲವೊಮ್ಮೆ ದೊಡ್ಡ ದೊಡ್ಡ ಅಹಿತಕರ ಘಟನೆಗಳನ್ನು ತಡೆಯಲು ಸಹಕಾರವಾಗುತ್ತದೆ. ಜೀವನದಲ್ಲಿ ಸಾಧನೆಯನ್ನು ಹೆಣ್ಣುಮಕ್ಕಳು ಪ್ರತಿಯೊಂದು ಕುಟುಂಬದಲ್ಲೂ ಮಾಡಿರುತ್ತಾರೆ. ಬೇಕೆಂದರೂ ಕೆಲವೊಮ್ಮೆ ತ್ಯಾಗಗಳು ಅನಿವಾರ್ಯವಾಗಿ ಬಿಡುತ್ತದೆ. ಮೌನವಂತು ಬಹಳ ಮುಖ್ಯ ಕೆಲ ಸಮಯಕ್ಕೆ ಅವಶ್ಯಕತೆ ಇರುತ್ತದೆ. ವಾದಕ್ಕೆ ಪ್ರತಿ ವಾದವನ್ನು ಮಾಡುವುದಕ್ಕಿಂತ ಮೌನಕ್ಕೆ ಸರಿದುಬಿಟ್ಟರೆ ಎಷ್ಟು ದೊಡ್ಡ ದೊಡ್ಡ ಅಹಿತಕರ ಘಟನೆಗಳಿಗೆ, ಮನಸ್ತಾಪಗಳಿಗೆ ತೆರೆ ಎಳೆಯಬಹುದು.

ಬದುಕು ಬಲು ಭಾರವಾದಾಗ
ನೋವು ಅನಿವಾರ್ಯವಾದಾಗ
ಆಸೆ ಪಟ್ಟದ್ದು ಸಿಗದಿದ್ದಾಗ
ಮಾತುಗಳಿಗೆ ಮಾತು ಕೊಡದಿದ್ದಾಗ
ಜೀವನವೇ ಬೇಸರವಾದಾಗ
ಬದುಕು ಕೊನೆಯಾಗುತ್ತದೆ

ಇದ್ದರು ಸತ್ತಂತೆ ಬದುಕುವ ಬದಲು, ಮಾತನಾಡಿ ನಿಷ್ಠೂರವಾಗುವ ಬದಲು, ಮೌನದ ಮೊರೆ ಹೋಗುವುದೇ ಒಳಿತು. ಯಾವುದೇ ರೀತಿಯ ಬೇದ ಭಾವವನ್ನು ಮೌನ ಯಾರೊಂದಿಗೂ ಮಾಡದು.ಬದುಕಿನಲ್ಲಿ ಜೀವನ ನಿರ್ವಹಿಸುತ್ತಿರುವುದಕ್ಕೆ ಮೌನದ ಆಸರೆ ಮುಖ್ಯ.

**ಮುಂದುವರೆಯುವುದು....**

---

# ವಿಶ್ವವಿದ್ಯಾನಿಲಯದಲ್ಲಿ ಗಾಂಧಿ ಜಯಂತಿ ಆಚರಣೆ

## ಯುದ್ಧದ ಸನ್ನಿವೇಶದಲ್ಲಿ ಅಹಿಂಸಾ ತತ್ವ ಅತ್ಯಂತ ಪ್ರಸ್ತುತ

• **ಉದಯವಾಹಿನಿ ಬೆಂಗಳೂರು**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ಅಂಗವಾಗಿ ಬಿಸಿಯು ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕುಲಪತಿ ಪ್ರೊ.ಲಿಂಗರಾಜ ಗಾಂಧಿಯವರು ಪ್ರಸಕ್ತ ಅಂತಾರಾಷ್ಟ್ರೀಯ ಸನ್ನಿವೇಶದಲ್ಲಿ ಗಾಂಧೀಜಿಯವರ ಅಹಿಂಸಾ ತತ್ವ ಮತ್ತು ಆದರ್ಶಗಳು ಅತ್ಯಂತ ಪ್ರಸ್ತುತವಾಗಿವೆ ಎಂದು ಪ್ರತಿಪಾದಿಸಿದರು.

ಸದ್ಯ ವಿವಿಧ ರಾಷ್ಟ್ರಗಳ ನಡುವೆ ಭುಗಿಲೆದ್ದಿರುವ ಸಂಘರ್ಷ ಯುದ್ಧದ ಕಾರ್ಮೋಡಗಳನ್ನು ಸೃಷ್ಟಿಸಿ ವಿಶ್ವಶಾಂತಿಗೆ ಅಪಾರ ಆತಂಕ ತಂದೊಡ್ಡಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು. ಇಪ್ಪತ್ತನೆಯ ಶತಮಾನದ ಶಾಂತಿದೂತನೆಂಬ ಖ್ಯಾತಿಗೆ ಪಾತ್ರರಾದ ಮಹಾತ್ಮ ಗಾಂಧೀಜಿಯವರು ಜನಾಂಗೀಯ ದ್ವೇಷ ಮತ್ತು ಹಿಂಸೆ ಕ್ರೌರ್ಯಗಳ ವಿರುದ್ಧ ಅವಿರತ ಹೋರಾಟ ನಡೆಸಿದರೆಂದು ಅವರು ವಿಶ್ಲೇಷಿಸಿದರು.


**ವಿಶ್ವಶಾಂತಿಗೆ ಅಪಾರ ಆತಂಕ**
ಉದಯವಾಹಿನಿ ಚಿತ್ರ

ಭಾರತ ದೇಶದ ದಾಸ್ಯ ವಿಮೋಚನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಗಾಂಧೀಜಿಯವರು ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಮತ್ತು ಶೋಷಣೆಯ ವಿರುದ್ಧ ಸೆಣಸಾಡಿ ಸಾಮರಸ್ಯ ಸಹಬಾಳ್ವೆಯ ಸಂದೇಶ ಸಾರಿದರೆಂದು ಪ್ರೊ.ಲಿಂಗರಾಜ ಗಾಂಧಿ ವಿವರಿಸಿದರು.

ಕುಲಸಚಿವರಾದ ಟಿ. ಜವರೇಗೌಡ, ಡಾ.ಸಿ.ಎಸ್. ಆನಂದ ಕುಮಾರ್, ಸಿಂಡಿಕೇಟ್ ಸದಸ್ಯರಾದ ಡಾ.ಕೆ.ಪಿ.ಪಾಟೀಲ್, ಡಾ.ಫ್ರಾನ್ಸಿಸ್, ಸಂಚಾಲಕರಾದ ಪ್ರೊ. ಕೆ. ಶಿವಶಂಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಶ್ವವಿದ್ಯಾನಿಲಯದ ಆಶಯಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಂಡಿತು. ಕನ್ನಡ ವಿಭಾಗದ ಡಾ.ಗೋಪಿ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭಕ್ಕೆ ಮುನ್ನ ಸಾಮೂಹಿಕ ಶ್ರಮದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕುಲಪತಿ ಪ್ರೊ.ಲಿಂಗರಾಜ ಗಾಂಧಿಯವರ ನೇತೃತ್ವದಲ್ಲಿ ವಿಶ್ವ ವಿದ್ಯಾಲನಿಲಯದ ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಸೆಂಟ್ರಲ್ ಕಾಲೇಜ್ ಜ್ಞಾನಜ್ಯೋತಿ ಕ್ಯಾಂಪಸ್ ಆವರಣವನ್ನು ಸ್ವಚ್ಛಗೊಳಿಸಿದರು.

---

# ಲವ್ ಜಿಹಾದ್ ತಡೆಗಟ್ಟಲು, ಹಬ್ಬದ ಪಾವಿತ್ರ್ಯತೆ ಕಾಪಾಡಲು ಕರೆ

• **ಉದಯವಾಹಿನಿ ಬೆಂಗಳೂರು**

ನವರಾತ್ರಿಯು ಶ್ರೀ ಆದಿಶಕ್ತಿಯ ಉಪಾಸನೆ, ಮಾಂಗಲ್ಯ ಮತ್ತು ಪವಿತ್ರತೆಯ ಹಬ್ಬವಾಗಿದೆ; ಆದರೆ ದೇಶಾದ್ಯಂತ ಮಹಿಳೆಯರ ಮೇಲಿನ ಅತ್ಯಾಚಾರ, ಲಕ್ಷಗಟ್ಟಲೆ ಮಹಿಳೆಯರ ನಾಪತ್ತೆ, ಹಿಂದೂ ಹೆಣ್ಣುಮಕ್ಕಳನ್ನು 'ಲವ್ ಜಿಹಾದ್' ಮೂಲಕ ಗುರಿ ಮಾಡುವುದು ಹೀಗೆ ಹಲವು ರೀತಿಯ ದೌರ್ಜನ್ಯಗಳು ದೊಡ್ಡ ಮಟ್ಟದಲ್ಲಿ ಬಯಲಾಗುತ್ತಿವೆ. ಆದ್ದರಿಂದ ನವರಾತ್ರಿ ಹಬ್ಬದ ಸಂದರ್ಭದಲ್ಲಿ ಲವ್ ಜಿಹಾದ್‌ಗಳಿಂದ ಮಹಿಳೆಯರ ಸುರಕ್ಷತೆ, ಹಬ್ಬದ ಪಾವಿತ್ರ್ಯತೆ ಕಾಪಾಡುವುದು ಅಗತ್ಯವಾಗಿದೆ. ಆದ್ದರಿಂದ ಮೂರ್ತಿಪೂಜೆಯನ್ನು ಒಪ್ಪದವರಿಗೆ ನವರಾತ್ರಿಯಲ್ಲಿ ದೇವಿಯ ಮೂರ್ತಿಯ ಮುಂದೆ ಗರಬಾ ಆಡಲು ಬಿಡಬಾರದು. ಗರಬಾ ಹಿಂದೂ ಧಾರ್ಮಿಕ ಹಬ್ಬವಾಗಿದೆ. ಹಿಂದೂ ದೇವರಲ್ಲಿ ನಂಬಿಕೆ ಇರುವವರು ಮಾತ್ರ ಅಲ್ಲಿಗೆ ಬರಬೇಕು. ಮೂರ್ತಿಪೂಜೆಯಲ್ಲಿ ಶ್ರದ್ಧೆ ಇಲ್ಲದವರು ಗಾರಬಾ ಪ್ರವೇಶಿಸಲು ಪ್ರಯತ್ನಿಸುವವರಿಂದ 'ಲವ್ ಜಿಹಾದ್' ಅಪಾಯವುಂಟಾಗುವ ಸಾಧ್ಯತೆಯಿದೆ. ಆದ್ದರಿಂದ ನವರಾತ್ರಿಯ ಸಂದರ್ಭದಲ್ಲಿ ಗರಬಾ ಆಯೋಜಿಸುವ ಎಲ್ಲಾ ಸಂಘಟಕರು ಲವ್ ಜಿಹಾದ್ ತಡೆಗಟ್ಟಿ ಹಬ್ಬದ ಪಾವಿತ್ರ್ಯತೆ ಕಾಪಾಡುವಂತೆ ಹಿಂದೂ ಜನಜಾಗೃತಿ ಸಮಿತಿ ಕರೆ ನೀಡಿದೆ.


ಉದಯವಾಹಿನಿ ಚಿತ್ರ

ಈ ನಿಟ್ಟಿನಲ್ಲಿ ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಗಳ ಪೊಲೀಸರು ಮಹಿಳೆಯರ ಸುರಕ್ಷತೆಗಾಗಿ ಪ್ರತಿಯೊಬ್ಬರ ಆಧಾರ್ ಕಾರ್ಡ್ ನೋಡಿ ಪ್ರವೇಶಕ್ಕೆ ಅವಕಾಶ ನೀಡಲು ನಿರ್ಧರಿಸಿರುವುದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ; ಆದರೆ ಈ ನಿಯಮವನ್ನು ಕೆಲವು ರಾಜ್ಯಗಳು ಅಥವಾ ಜಿಲ್ಲೆಗಳಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿ ಜಾರಿಗೆ ತರಬೇಕು. ಇಂದು ದೇಶಕ್ಕೆ ಅಕ್ರಮವಾಗಿ ನುಸುಳಿರುವ ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಈ ನುಸುಳುಕೋರರು ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಭದ್ರತಾ ಸಂಸ್ಥೆಗಳು ಪತ್ತೆ ಹಚ್ಚಿವೆ. ಇದು ತುಂಬಾ ಗಂಭೀರವಾಗಿದೆ ಮತ್ತು ನವರಾತ್ರಿ ಹಬ್ಬದ ಸಮಯದಲ್ಲಿ ಕೆಲವು ರೀತಿಯ ದಾಳಿಯನ್ನು ನಡೆಸಲು ಪ್ರಯತ್ನಿಸಬಹುದು. ಆದ್ದರಿಂದ ಗಾರಬಾ ಆಯೋಜಕರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು.

> **ನವರಾತ್ರಿಯೆಂದರೆ ಒಂಬತ್ತು ದಿನ ದೇವಿಯನ್ನು ಭಕ್ತಿಪೂರ್ವಕವಾಗಿ ಆರಾಧಿಸುವ ವ್ರತವಾಗಿದೆ. ಅದರ ಪಾವಿತ್ರ್ಯತೆ ಕಾಪಾಡಿಕೊಳ್ಳುವುದು ಅಷ್ಟೇ ಆವಶ್ಯಕ. ಪ್ರಸ್ತುತ, ನವರಾತ್ರಿಯ ಸಮಯದಲ್ಲಿ, ಚಲನಚಿತ್ರಗಳ ಅಶ್ಲೀಲ ಹಾಡುಗಳನ್ನು ನುಡಿಸುವುದು, ಅದಕ್ಕೆ ನೃತ್ಯ ಮಾಡುವುದು, ಮಹಿಳೆಯರಿಗೆ ಕಿರುಕುಳ ನೀಡುವುದು, ತುಂಡು ಬಟ್ಟೆಗಳನ್ನು ಧರಿಸಿ ಗರಬಾದಲ್ಲಿ ಭಾಗವಹಿಸುವುದು ಇತ್ಯಾದಿಗಳು ನಡೆಯುತ್ತವೆ. ಇದು ಮಹಿಳೆಯರ ಸುರಕ್ಷತೆಗೆ ಅಪಾಯವನ್ನುಂಟು ಮಾಡುತ್ತದೆ, ಆದ್ದರಿಂದ ನಾವು ಅದನ್ನು ತಪ್ಪಿಸಬೇಕು. ಹಬ್ಬಗಳನ್ನು ಮಾರುಕಟ್ಟೆಯನ್ನಾಗದಂತೆ ಕಾಯ್ದುಕೊಳ್ಳಲು ಪ್ರಯತ್ನಿಸಬೇಕು ಎಂದೂ ಸಮಿತಿ ಹೇಳಿದೆ.**

ನವರಾತ್ರಿಯಲ್ಲಿ ಗರಬಾದಲ್ಲಿ ಭಾಗವಹಿಸಲು ಬಯಸುವ ಹಿಂದೂಯೇತರರು ಮೊದಲು ಶ್ರದ್ಧೆ ಮತ್ತು ಆಚರಣೆಯೊಂದಿಗೆ ಹಿಂದೂ ಧರ್ಮ ಸ್ವೀಕರಿಸಬೇಕು. ಹಿಂದೂ ದೇವರ ಪೂಜೆ ಮಾಡಬೇಕು. ತಿಲಕವನ್ನು ಹಚ್ಚಿದ ನಂತರ ಗರ್ಬೋತ್ಸವದಲ್ಲಿ ಪಾಲ್ಗೊಳ್ಳಬೇಕು.

ಗಣೇಶೋತ್ಸವ, ರಾಮನವಮಿ ಇತ್ಯಾದಿ ಮೆರವಣಿಗೆಗಳು ನಡೆಯುವಾಗ ಆಕಸ್ಮಿಕವಾಗಿ ಗುಲಾಲ್ ಮೈಮೇಲೆ ಬಿತ್ತೆಂದು, ಅಥವಾ ಧ್ವನಿವರ್ಧಕಗಳನ್ನು ಹಾಕಿದ್ದರಿಂದ ಗಲಭೆ ಸೃಷ್ಟಿಸುವವರು ನವರಾತ್ರಿ ಸಂಭ್ರಮದಲ್ಲಿ ಹೇಗೆ ಸಂತೋಷದಿಂದ ಪಾಲ್ಗೊಳ್ಳುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಹಿಂದೂಯೇತರರು ಯಾವ ಉದ್ದೇಶಕ್ಕಾಗಿ ಗರಬಾ ಪ್ರವೇಶಿಸಲು ಪ್ರಯತ್ನಿಸುತ್ತಾರೆ ಎಂಬುದನ್ನೂ ಗಮನಿಸಬೇಕಿದೆ.

# ಗಾಂಧಿಜೀ ದೇವಮಾನವರು; ಅಪ್ಪಾಜಿ ನಾಡಗೌಡ

## ಮಹಾತ್ಮ ಗಾಂಧಿಜೀ ಜಯಂತಿ ; ಕಾಲ್ನಡಿಗೆ ಮೂಲಕ ಗಾಂಧಿ ಸಂದೇಶ

• ಉದಯವಾಹಿನಿ ಮುದ್ದೇಬಿಹಾಳ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನಮ್ಮ ಭಾರತ ದೇಶಕ್ಕೆ ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ನೀಡಿದರು ಬ್ರಿಟಿಷರ ದಾಸ್ಯದಿಂದ ದೇಶವನ್ನು ಮುಕ್ತಗೊಳಿಸಿದವರು ಇವರನ್ನು ದೇವಮಾನವರೆಂದು ಕರೆಯಬೇಕೆಂದು ಶಾಸಕ ಕರ್ನಾಟಕ ಸಾಬೂನು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್ ನಾಡಗೌಡ ಅಪ್ಪಾಜಿ ಹೇಳಿದರು ಅವರು ಪಟ್ಟಣದ ನೇತಾಜಿಯಲ್ಲಿ ತಾಲ್ಲೂಕ ಆಡಳಿತದಿಂದ ಹಮ್ಮಿಕೊಂಡ ಮಹಾತ್ಮ ಗಾಂಧೀಜೀ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತೋತ್ಸವ ಉದ್ದೇಶಿಸಿ ಮಾತನಾಡಿದರು

ಸ್ವಚ್ಛಗ್ರಾಮ, ಮಹಿಳಾ ಸಮಾನಾತೆ ಕುರಿತು ಧ್ವನಿ ಎತ್ತಿದ ಬಾಪೂಜೀ ಅಸ್ಪೃಶ್ಯತೆ ವಿರುದ್ಧ ಹೋರಾಟ ಮಾಡಿ ಸಮಾನತೆ ಸಾರಿದವರು ಮಲಹೋರುವ ಅನಿಷ್ಟ ಪದ್ಧತಿ ಗಳ ವಿರುದ್ಧ ಕಠಿಣ ನಿಲುವು ತಾಳಿದ್ದರು ಎಂದ ಶಾಸಕರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿ 100 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ರಾಜ್ಯದೆಲ್ಲಡೆ ಕಾಲ್ನಡಿಗೆ ಮೂಲಕ ಗಾಂಧಿಜೀಯವರ ಸಂದೇಶ ಪಸರಿಸುವ ಕೆಲಸವನ್ನು ರಾಜ್ಯ ಕಾಂಗ್ರೇಸ್ ಸರ್ಕಾರ ಮಾಡ್ತಿದೆ ಎಂದರು

ತಹಶಿಲ್ದಾರ ಬಲರಾಮ ಕಟ್ಟಿಮನಿ, ಬಿಇಒ ಬಿ ಎಸ್ ಸಾವಳಗಿ ಮಾತನಾಡಿದರು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜೀ ಅವರ ಜಯಂತಿ ಕುರಿತು


ಉದಯವಾಹಿನಿ ಚಿತ್ರ

ಮಹಾತ್ಮ ಗಾಂಧಿಜೀ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತೋತ್ಸವ


### ಗಾಂಧೀ ನಡಿಗೆ

ರಾಷ್ಟ್ರಪಿತ ಮಹಾತ್ಮಾ ಗಾಂಧೀ ಜಯಂತಿ ಹಾಗೂ ಬೆಳಗಾವಿಯಲ್ಲಿ ನಡೆದ ಸ್ವಾತಂತ್ರ ಸಂಗ್ರಾಮ ಸಮಾವೇಷದ 100ನೇ ವರ್ಷಾಚರಣೆ ಅಂಗವಾಗಿ ಮುದ್ದೇಬಿಹಾಳ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಗಾಂಧೀ ನಡಿಗೆ ಪಾದಯಾತ್ರೆಯನ್ನು ಅಂಬೇಡ್ಕರ್ ವೃತ್ತದಿಂದ ಪಟ್ಟಣದಲ್ಲಿ ಮಾಡಲಾಯಿತು ಇದರಲ್ಲಿ ಶಾಸಕರು ಸೇರಿದಂತೆ ಪಕ್ಷದ ಮುಖಂಡರು ಪುರಸಭೆ ಸದಸ್ಯರುಗಳು ಭಾಗವಹಿಸಿ ಗಾಂಧಿ ಸಂದೇಶ ಸಾರುವ ಬಿತ್ತಿ ಚಿತ್ರಗಳನ್ನು ಹಿಡಿದು ಸಾಗಿದರು

ನೇತಾಜಿ ಗಲ್ಲಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಗಾಂಧಿಜೀ ಹಾಗೂ ಲಾಲಬಹದ್ದೂರ ಶಾಸ್ತ್ರೀ ಜಯಂತಿ ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ಬ್ಯಾನರ್ ಹಾಕಿರಲಿಲ್ಲ ಮಾಧ್ಯಮಗಳು ಈ ಕುರಿತು ಗಮನವನ್ನು ಸಳೆದಾಗ ಶಾಸಕರು ಕಾರ್ಯಕ್ರಮಕ್ಕೆ ಬರುವುದರೊಳಗೆ ತಹಶಿಲ್ದಾರ ಕಚೇರಿಯಿಂದ ಮೆರವಣಿಗೆಯಲ್ಲಿ ತರಲಾಗಿದ್ದ ಗಾಂಧಿಜೀ ಶಾಸ್ತ್ರೀಜೀ ಅವರ ಭಾವಚಿತ್ರದ ಬ್ಯಾನರ್ ಕಟೌಟ್ ವೇದಿಕೆಯ ಹಿಂಭಾಗದಲ್ಲಿಟ್ಟು ಮುಜಗರದಿಂದ ತಪ್ಪಿಸಿಕೊಂಡರು

ವಿಶೇಷ ಉಪನ್ಯಾಸವನ್ನು ಶಿಕ್ಷಣ ಸಂಯೋಜಕಿ ಶ್ರೀಮತಿ ಪಿ ಎ ಬಾಳೆಬಾಯಿ ನೀಡಿದರು ಬಿಎಸ್ ಸೆಂಟ್ರಲ್ ವಿದ್ಯಾರ್ಥಿ ಅಮೋಘ ಚಲವಾದಿ ಗಾಂಧಿಜೀ ಅವರ ಕುರಿತು ಭಾಷಣ ಮಾಡಿದನು ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಉಪಾಧ್ಯಕ್ಷೆ ಪ್ರೀತಿ ದೇಗಿನಾಳ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ತಾಪ ಇಒ ಮಸಳಿ, ಪುರಸಭೆ ಮುಖ್ಯಾಧಿಕಾರಿ ಮಲ್ಲಿಕಾರ್ಜುನ ಬಿರಾದಾರ, ಪ್ರತಿಭಾ ಅಂಗಡಗೇರಿ, ಭಾರತಿ ಪಾಟೀಲ್, ಗೋಪಿ ಮಡಿವಾಳರ ವೈ ಹೆಚ್ ವಿಜಯಕರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಕಾಂಗ್ರೇಸ್ ಮುಖಂಡರು ವಿದ್ಯಾರ್ಥಿಗಳು ಭಾಗವಹಿಸಿದ್ದರು

# ಗ್ರಾ.ಪಂ. ಸದಸ್ಯರು. ಅಧಿಕಾರಿಗಳ ದಿ.4 ರಂದು ಬೆಂಗಳೂರು ಚಲೋ


ಉದಯವಾಹಿನಿ ಚಿತ್ರ

• ಉದಯವಾಹಿನಿ ಸಿಂಧನೂರು

ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಒಕ್ಕೂಟದಿಂದ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ದಿ.04ರಂದು ಬೆಂಗಳೂರು ಚಲೋ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ. ಅದರಿಂದ ಅಧ್ಯಕ್ಷ ಸದಸ್ಯರು ಹಾಗೂ ಪಿಡಿಒಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅ ನಿರ್ದಿಷ್ಟ ಧರಣಿಯನ್ನು ಯಶಸ್ವಿಗೊಳಿಸಬೇಕೆಂದು ಒಕ್ಕೂಟದ ಅಧ್ಯಕ್ಷರಾದ ಮಹಾಂತೇಶ ಹಿರೇಗೌಡ್ರು ಮನವಿ ಮಾಡಿದರು ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಮ್ಮ ಬೇಡಿಕೆ ಈಡೇರಿಕೆಗಾಗಿ ಆರ್ ಡಿ ಪಿ ಆರ್ ಕುಟುಂಬದೊಂದಿಗೆ ಬೆಂಗಳೂರು ಚಲೋ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು. ನಂತರ ಮಾತನಾಡಿದ ಕಾರ್ಯದರ್ಶಿ ರವಿಗೌಡ ಅವರು ಈ ನಮ್ಮ ಅ ನಿರ್ಧಿಷ್ಟ ಹೋರಾಟದಲ್ಲಿ ಅಧ್ಯಕ್ಷರು ಮತ್ತು ಸದಸ್ಯರಿಗೂ ನಕ್ಷೆ ಯೋಜನೆ ನೀಡುವುದು. ಶಿಷ್ಟಾಚಾರ. ಆರೋಗ್ಯ ಸೌಲಭ್ಯಗಳನ್ನು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒದಗಿಸಬೇಕೆಂದರು . ಅಭಿವೃದ್ಧಿ ಅಧಿಕಾರಿಗಳು ಸಂಘದ ಅಧ್ಯಕ್ಷ ಬಸವರಾಜ ಸೂಡಿ ಅವರು ಮಾತನಾಡಿ ನಮ್ಮ ಪಿಡಿಒಗಳಿಗೆ ಸಂಬಂಧಿಸಿದ ನಮಗೆ ಈಗಿರುವ ಸಿ ಗ್ರೇಡ್ ಹುದ್ದೆಗಳು ಇದ್ದನ್ನು ಬಿ ಗ್ರೇಡ್ ಮೇಲ್ದರ್ಜೆಗೆ ಹುದ್ದೆಗೆ ಸೇರಿಸಬೇಕು ಎಂದು ಒತ್ತಾಯ ಮಾಡಿದರು. ಮಾಡಿಶಿರವಾರ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಜು. ಉದ್ಬಾಳ ಶ್ರೀಧರ ಗೌಡ ಅಮರೇಗೌಡ ರಾಗಲಪರ್ವಿ ಶ್ರೀನಿವಾಸ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು

# ಜಿಲ್ಲಾ ಆಯುಷ್ ಇಲಾಖೆಯಿಂದ 155ನೇ ಗಾಂಧಿ ಜಯಂತಿ ಆಚರಣೆ

• ಉದಯವಾಹಿನಿ ಚಿತ್ರದುರ್ಗ

ಜಗತ್ತಿನಲ್ಲಿ ಶಾಂತಿ, ಅಹಿಂಸೆಯ ಬಗ್ಗೆ ಮಾತನಾಡುವಾಗ ಮೊದಲು ನೆನಪಾಗುವುದೇ ರಾಷ್ಟ್ರ ಪಿತ ಮಹಾತ್ಮ ಗಾಂಧಿ. ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಅಹಿಂಸೆಯನ್ನು ಪ್ರತಿಪಾದಿಸುತ್ತ ತಮ್ಮ ಜೀವನವನ್ನು ರಾಷ್ಟ್ರಕ್ಕಾಗಿ ಮುಡಿಪಾಗಿಟ್ಟ ಮಹಾತ್ಮ ನಮ್ಮ ಪೂಜ್ಯ ಗಾಂಧಿ ಎಂದು ಚಿತ್ರದುರ್ಗ ಜಿಲ್ಲಾ ಆಯುಷ್ ಅಧಿಕಾರಿ ಡಾ|| ಚಂದ್ರಕಾಂತ್ ನಾಗಸಮುದ್ರ ಅಭಿಪ್ರಾಯ ಪಟ್ಟಿದ್ದಾರೆ.

ಅಕ್ಟೋಬರ್ 2ರ ಬುಧವಾರ ರಾಷ್ಟ್ರಪಿತ ಮಹಾತ್ಮ ಗಾಂಧಿ ಯವರ 155ನೇ ಜನ್ಮದಿನದ ಅಂಗವಾಗಿ ಜಿಲ್ಲಾ ಆಯುಷ್ ಇಲಾಖೆಯ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ದೇಶಕ್ಕಾಗಿ ಹೋರಾಟ ನಡೆಸಿದರೂ ಅವರ ಮೂಲತತ್ವವು ಅಹಿಂಸೆಯನ್ನು ಉತ್ತೇಜಿಸುವುದಾಗಿತ್ತು.

ಗಾಂಧಿ ಅವರು ರಾಜಕಾರಣಿ, ಸಾಮಾಜಿಕ ಕಾರ್ಯಕರ್ತ ಮತ್ತು ವಕೀಲರು ಕೂಡ ಆಗಿ ತನ್ನ ತತ್ವ ಸಿದ್ದಾಂತಗಳಿಂದಲೇ


ಉದಯವಾಹಿನಿ ಚಿತ್ರ

ದೇಶ ವಿದೇಶಗಳಲ್ಲಿ ಚಿರಪರಿಚಿತರಾಗಿದ್ದರು.

ಸ್ವಾತಂತ್ರ್ಯಕ್ಕಾಗಿ ಹೋರಾಟದ ನೇತೃತ್ವ ವಹಿಸಿದ್ದ ಗಾಂಧೀಜಿ ಯವರ ಹೋರಾಟದ ಹಾದಿಯಲ್ಲಿ ಅವರ ಸಿದ್ಧಾಂತಗಳು ಮತ್ತು ಹೋರಾಟಗಳು 1947 ರಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ದೊಡ್ಡ ಮಟ್ಟದಲ್ಲಿ ತಿರುವು ನೀಡಿತು. ಹೀಗಾಗಿ ಮಹಾತ್ಮಾ ಗಾಂಧೀಜಿಯವರು ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದೆ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯ ವೈದ್ಯಾಧಿಕಾರಿ ಗಳಾದ ಡಾ. ನಾರದಮುನಿ, ಡಾ. ಶಿವಕುಮಾರ್, ಡಾ. ಉಮೇಶ್ ರೆಡ್ಡಿ, ಸಿಬ್ಬಂದಿಗಳಾದ ಅಶೋಕ್, ಶ್ರೀಮತಿ ಫರ್ಜಾನ, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಅವಹೇಳನಕಾರಿ ಪದ ಬಳಕೆ ಐಪಿಎಸ್ ಅಧಿಕಾರಿ ಅಮಾನತ್ತು

• ಉದಯವಾಹಿನಿ,ಚಿಂಚೋಳಿ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಎಡಿಜಿಪಿ ಐಪಿಎಸ್ ಅಧಿಕಾರಿಯೊಬ್ಬರು ಅವಹೇಳನಕಾರಿ ಪದ ಬಳಕೆ ಮಾಡಿದ್ದು ಇಂಥಹ ಅಧಿಕಾರಿಗೆ ಅಮಾನತ್ತು ಮಾಡಬೇಕು ಎಂದು ಜೆಡಿಎಸ್ ಅಧ್ಯಕ್ಷ ರವಿಶಂಕರರಡ್ಡಿ ಮುತ್ತಂಗಿ ಆಗ್ರಹಿಸಿದರು.

ಪಟ್ಟಣದ ತಹಶೀಲ್ ಕಛೇರಿ ಎದುರು ಜೆಡಿಎಸ್ ಪಕ್ಷದ ತಾಲ್ಲೂಕಾ ಘಟಕದಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಅವಹೇಳನಕಾರಿ ಶಬ್ದ ಬಳಕೆ ಮಾಡಿದ ಐಪಿಎಸ್ ಅಧಿಕಾರಿಗೆ ಅಮಾನತು ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಘನವೆತ್ತ ರಾಜ್ಯಪಾಲರಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು, ಕಾಂಗ್ರೇಸ್ ಸರ್ಕಾರದ ಪರವಾಗಿ


ಉದಯವಾಹಿನಿ ಚಿತ್ರ

ವರ್ತಿಸುತ್ತಿರುವ ಐಪಿಎಸ್ ಅಧಿಕಾರಿಯೋಬ್ಬ ಕೇಂದ್ರ ಸಚಿವ ಕುಮಾರಸ್ವಾಮಿಯವರಿಗೆ ಅವಹೇಳನಕಾರಿ ಪದ ಬಳಕೆ ಮಾಡಿರುವುದು ಖಂಡನೀಯವಾಗಿದೆ.

ಇಂಥಹ ಪದ ಬಳಕೆ ಮಾಡುತ್ತಿರುವ ಒಬ್ಬ ಐಪಿಎಸ್ ಅಧಿಕಾರಿಯ ಸಂಸ್ಕೃತಿ ಹಿನ್ನಲೆ ಎತ್ತಿ ತೋರಿಸುತ್ತದೆ,ಹಲವಾರು ವಿಷಯಗಳಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಾ ಉದ್ಧಟತನ ಮೇರೆಯುತ್ತಿರುವ ಐಪಿಎಸ್ ಅಧಿಕಾರಿಯನ್ನು ತಕ್ಷಣವೇ ಸೇವೆಯಿಂದ ಅಮಾನತು ಮಾಡಬೇಕು.

ಅಷ್ಟೆಅಲ್ಲದೆ ಕರ್ನಾಟಕದಲ್ಲಿ ಅವರ ಸೇವೆಯಿಂದ ಮುಕ್ತಗೊಳಿಸಿ ಕೇಂದ್ರ ಸರ್ಕಾರ ಇವರನ್ನು ವಾಪಸ್ಸು ಕರೆಯಿಸಿಕೊಳ್ಳುವಂತೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

**ಪ್ರತಿಭಟನೆಯಲ್ಲಿ:** ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಷ್ಣುಕಾಂತ ಮೂಲಗೆ,ಪುರಸಭೆ ಸದಸ್ಯ ನಾಗೇಂದ್ರಪ್ಪಾ ಗುರಂಪಳ್ಳಿ,ಬಸವರಾಜ ಸಿರಸಿ,ಹಾಗೂ ಸೈಯದ್ ನಿಯಾದ್ಅಲಿ,ಹಣಮಂತ ಪೂಜಾರಿ,ಹಣಮಂತರಡ್ಡಿ ಬಕ್ಕಾ,ನೀಲಕಂಠ ಗರಗಪಳ್ಳಿ,ಮಂಜೂರ ಅಹೇಮದ್,ಎಸ್ಕೆ ಮೋಖ್ತಾರ,ಶೇಕರಡ್ಡಿ ಪಾಟೀಲ, ಅವಿನಾಶರಡ್ಡಿ ,ತಾಹೇರ ಪಟೇಲ,ತಾಹೇಬ ಅಲಿ,ರವಿ ಮಾಳಗಿ,ಸಿದ್ದಯಸ್ವಾಮಿ ಕಪೂರ,ಮಾಣಿಕ ಗಂಗನಪಳ್ಳಿ,ಅನೇಕರಿದ್ದರು.

# ಮಹಾತ್ಮಾ ಗಾಂಧೀಜಿ ಜಯಂತಿ..ಪುರಸಭೆ ಜನಪ್ರತಿನಿಧಿಗಳು ಗೈರು..!

• ಉದಯವಾಹಿನಿ ಕೆಂಭಾವಿ

ಪಟ್ಟಣದ ಪುರಸಭೆಯಲ್ಲಿ ರಾಷ್ಟ್ರಪೀತಾ ಗಾಂಧೀಜಿ ಜಯಂತಿ ಹಮ್ಮಿಕೊಳ್ಳಲಾಗಿತ್ತು ಆದ್ರೆ, ಈ ಕಾರ್ಯಕ್ರಮಕ್ಕೆ ಪುರಸಭೆಯ ಸದ್ಯಸರು ಹಾಗೂ ಪಟ್ಟಣದ ಜನಪ್ರತಿನಿಧಿಗಳು ಗೈರು ಹಾಜರಿ ಕಂಡು ಬಂದಿತ್ತು .

ಪುರಸಭೆ ಕಾರ್ಯಾಲಯದಲ್ಲಿ ನಡೆಯುವ ಯಾವುದೇ ಸಭೆಗಳಿಗೆ ಮುಂಚೂಣಿಯಲ್ಲಿ ಭಾಗವಹಿಸಬೇಕಾದ ಸದ್ಯಸರು ಮಾತ್ರ ಗಾಂಧೀಜಿ ಜಯಂತಿ ಕಾರ್ಯಕ್ರಮಕ್ಕೆ ನಿರಾಸಕ್ತಿ ತೋರಿಸಿದ್ದು ಮಾತ್ರ ವಿಪರ್ಯಾಸ, ದೇಶದ ಮಹಾನ್ ವ್ಯಕ್ತಿಯ ಜನ್ಮ ದಿನ ವಾದರೂ ಅವ್ರ ಜಯಂತಿ ಕಾರ್ಯಕ್ರಮಕ್ಕೆ ಪಾಲ್ಗೊಳ್ಳದೆ ಇರು ವುದು ಗಾಂಧಿಜಿ ಅನುಯಾಯಿಗಳಿಗೆ ನಿರಾಸೆ ಉಂಟುಮಾಡಿ ಅಸಮಾಧಾನ ವ್ಯಕ್ತಪಡಿಸಿದರು. ಕೇವಲ ಬೆರಳೆಣಿಕೆಯಷ್ಟು ಸದ್ಯಸರು ಮಾತ್ರ ಭಾಗವಹಿಸಿದರು ಇನ್ನೂ ಉಳಿದ ಪುರಸಭೆ ಸದ್ಯಸರು ಕಾರ್ಯಕ್ರಮದಿಂದ ದೂರ ಉಳಿದರು. ಪುರಸಭೆ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿ



ಉದಯವಾಹಿನಿ ಚಿತ್ರ

ಗಳು ಹೊರತುಪಡಿಸಿ ಪುರಸಭೆ ಜನಪ್ರತಿನಿಧಿಗಳು ಹಾಗೂ ಸಂಘ, ಸಂಸ್ಥೆಯ ಮುಖಂಡರು ಭಾಗವಹಿಸಿರಲಿಲ್ಲ ಇನ್ನೂ ಪುರಸಭೆಯಿಂದಲೂ ಕೂಡ ಮಾಹತ್ಮಾ ಗಾಂಧೀಜಿಯವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕಾಗಿತ್ತು ಅದು ಕೂಡ ನಡೆಯಲಿಲ್ಲ ಕೇವಲ ಆಚರಣೆ ಮಾಡಬೇಕೆಂಬ

ಒಂದು ದಿನ ಮುಂಚಿತವಾಗಿ ಪುರಸಭೆಯ ಎಲ್ಲಾ ಸದ್ಯಸರಿಗೆ ಆಮಂತ್ರಣ ಪತ್ರಿಕೆ ಕಳುಹಿಸಲಾಗಿತ್ತು, ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಪ್ರತಿಜ್ಞಾವಿಧಿ ಬೋಧನೆ ಕಾರ್ಯಕ್ರಮ ಏರ್ಪಡಿಸುವಂತೆ ಆದೇಶವಾಗಿತ್ತು, ಅದರ ಅಂಗವಾಗಿಯೂ ಕೂಡ ಬೆಳ್ಳಿಗೆ ಎಲ್ಲಾ ಸದ್ಯಸರಿಗೆ ವಾಟ್ಸಪ್ ಮೂಲಕ ಸಂದೇಶ ಕಳುಹಿಸಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ತಿಳಿಸಲಾಗಿತ್ತು.

ಮೊಹ್ಮದ್ ಯೂಸುಫ್ (ಮುಖ್ಯಾಧಿಕಾರಿಗಳು ಪುರಸಭೆ ಕೆಂಭಾವಿ )

ಸರ್ಕಾರ ನಿಯಮವಳಿ ಅನುಸರಿಸಿದ್ದು ಕಂಡು ಬಂತು ಪಟ್ಟಣದ ಇನ್ನೂ ಹೆಚ್ಚಿನ ಕಾರ್ಯಕ್ರಮ ಆಯೋಜಿಸುವ ಮೂಲಕ ಮಹಾತ್ಮಾ ಗಾಂಧಿಜಿಯವರ ನಡೆದು ಬಂದ ಹಾದಿ ನೆನಪಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿತ್ತು ನಾಗರೀಕರ ಆಸೆ ಈ ಭಾರಿ ಹೀಡೆರದೆ ಕೇವಲ ಪೂಜೆ ಮಾತ್ರ ಕಾರ್ಯಕ್ರಮ ಸೀಮಿತಗೊಳಿಸಿ ಜಯಂತಿ ಆಚರಣೆ ಮಾಡಲಾಯಿತು.



ರಾಷ್ಟಪಿತಾಮಹ ಎಂದು ಮಹಾತ್ಮಾ ಗಾಂಧೀಜಿ ಅವರನ್ನು ಕರೆಯುತ್ತಾರೆ, ಇಂತಹ ಮಹಾನ್ ವ್ಯಕ್ತಿಯ ಜನ್ಮದಿನ ಇಂತಹ ಮಹತ್ವದ ಕಾರ್ಯಕ್ರಮದಲ್ಲಿ ಪುರಸಭೆ ಸದ್ಯಸರು ಗೈರು ಹಾಜರಾಗುವ ಮೂಲಕ ಜನರಿಂದ ದೂರವಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ, ಇದನ್ನು SDPI ಖಂಡಿಸುತ್ತದೆ.

ಮಹಿಬೂಬ್ ಒಂಟಿ (ಎಸ್. ಡಿ. ಪಿ. ಐ ಕೆಂಭಾವಿ ಅಧ್ಯಕ್ಷರು )

# ದೇವಸ್ಥಾನದಲ್ಲಿ 9ನೇ ವರ್ಷದ ಶರನ್ನವರಾತ್ರಿ ವೈಭವದ ಉತ್ಸವ

• ಉದಯವಾಹಿನಿ ಬಳ್ಳಾರಿ

ನಗರದ ಹದ್ದಿನ ಗುಂಡು ರಸ್ತೆಯಲ್ಲಿರುವ ದುರ್ಗಾ ಕಾಲೋನಿಯ ಶ್ರೀ ಸಣ್ಣದುರ್ಗಮ್ಮ ದೇವಸ್ಥಾನದಲ್ಲಿ ವಿಜಯದಶಮಿ ಪ್ರಯುಕ್ತ 9ನೇ ವರ್ಷದ ಶರನ್ ನವರಾತ್ರಿ ವೈಭವದ ಉತ್ಸವಗಳನ್ನು 9 ದಿನಗಳ ಕಾಲ ನಡೆಸಲಾಗುವುದು ಎಂದು ದೇವಸ್ಥಾನದ ಸಮಿತಿಯ ಅಧ್ಯಕ್ಷರಾದ ಮೀನಳ್ಳಿ ತಾಯಣ್ಣ ತಿಳಿಸಿದರು.

ಅವರು ಇಂದು ಹದ್ದಿನ ಗುಂಡು ರಸ್ತೆಯಲ್ಲಿರುವ ಶ್ರೀ ಸಣ್ಣದುರ್ಗಮ್ಮ ದೇವಸ್ಥಾನದಲ್ಲಿ ಪತ್ರಿಕಾ ಘೋಷ್ಠಿಯನ್ನು ಕರೆದು ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಸಹ ಸಣ್ಣದುರ್ಗಮ್ಮ ದೇವಸ್ಥಾನದಲ್ಲಿ 9 ದಿನಗಳ ಕಾಲ ದುರ್ಗಾದೇವಿಗೆ ವಿಶೇಷವಾದ ಪೂಜೆಗಳನ್ನು ನೆರವೇರಿಸುವ ಮೂಲಕ ನವರಾತ್ರಿ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ, ನವರಾತ್ರಿಯ ಪ್ರಥಮ ದಿನವಾದ ಗುರುವಾರದಂದು ಶ್ರೀ ಬಾಲ ತ್ರಿಪುರ ಸುಂದರಿ ದೇವಿ ಅಲಂಕಾರವನ್ನು ಮಾಡಲಾಗುವುದು, ಎರಡನೇ ದಿನ ಶ್ರೀ ಗಾಯತ್ರಿ ದೇವಿ ಅಲಂಕಾರ, ಶ್ರೀ ಲಲಿತಾದೇವಿ ಅಲಂಕಾರ, ಶ್ರೀ


ಉದಯವಾಹಿನಿ ಚಿತ್ರ

ಅನ್ನಪೂರ್ಣೇಶ್ವರಿ ದೇವಿ ಅಲಂಕಾರ, ಶ್ರೀ ಅರ್ಧನಾರೀಶ್ವರ ದೇವಿ ಅಲಂಕಾರ, ಶ್ರೀ ಸರಸ್ವತಿ ದೇವಿ ಅಲಂಕಾರ, ಶ್ರೀ ದುರ್ಗಾದೇವಿ ಅಲಂಕಾರ, ಶ್ರೀ ಮೈಶಾಸುರ ಮರ್ದಿನಿ ದೇವಿ ಅಲಂಕಾರ, ಅಮ್ಮನವರ ನಿಜರೂಪ ದೇವಿ ಅಲಂಕಾರವನ್ನು ಮಾಡಲಾಗುವುದು, ಜೊತೆಗೆ 1008 ಮುತ್ತೈದೆಯರಿಗೆ ಉಚಿತವಾಗಿ ಉ ಡಿತುಂಬ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ರಾಯಣ್ಣ ತಿಳಿಸಿದರು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಚಿಸುವವರು ಮೊದಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ಈ ವಿಜ್ರಂಭಣೆಯಿಂದ ಜರುಗಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ತಾವುಗಳು ಹೊಸ

ಪ್ರತಿ ದಿನ ಸಂಜೆ, ಭರತನಾಟ್ಯ ಜನಪದ ಗೀತ ಗಾಯನ ಮಿಮಿಕ್ರಿ ಭಜನೆ ಭಕ್ತಿ ಗೀತೆಗಳು ಹಾಸ್ಯ ನಾಟಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು ಮತ್ತು ಈ ಮಧ್ಯೆ ಚಂಡಿಕಾಯಾಗ ಶ್ರೀ ಶೈಲ ಬ್ರಮರಾಂಬಿಕ ಮಲ್ಲಿಕಾರ್ಜುನ ಸ್ವಾಮಿ ಕಲ್ಯಾಣೋತ್ಸವ ಜರಗಿಸಲಾಗುವುದು ಎಂದು ಅವರು ತಿಳಿಸಿದರು.

ಕುಟುಂಬ ಸಮೇತರಾಗಿ ಆಗಮಿಸಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕೆಂದು ಸಮಿತಿಯ ಅಧ್ಯಕ್ಷ ಮೈನಹಳ್ಳಿ ತಾಯಣ್ಣ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸತ್ಯನಾರಾಯಣ ಹನುಮಂತಪ್ಪ ರಾಧಮ್ಮ ಬಸವರಾಜ್ ಸಂತೋಷ್ ಸ್ವಾಮಿ ತಿಪ್ಪಣ್ಣ ರಮೇಶ್ ಕೃಷ್ಣ ರಾಮ ಇರಿ ಸ್ವಾಮಿ ಬಾಬು ಪ್ರಕಾಶ್, ಕಿರಣ್ ಕುಮಾರ್ ಸೇರಿದಂತೆ ಸಮಿತಿಯ ಇತರ ಭಕ್ತಾದಿಗಳು ಇದ್ದರು.


# ಅಮೃತ್ 2.0 ಯೋಜನೆಗೆ ಚಾಲನೆ

• ಉದಯವಾಹಿನಿ ಜೇವರ್ಗಿ

ಪಟ್ಟಣಕ್ಕೆ ಭೀಮಾ ನದಿ ಮೂಲದಿಂದ ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗಾಗಿ ಕರ್ನಾಟಕ ಘನ ಸರಕಾರವು ರೂ 52. ಕೋಟಿ 95 ಲಕ್ಷ ಅಂದಾಜಿಗೆ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಪಟ್ಟಣದ ಪುರಸಭೆ ಆವರಣದಲ್ಲಿ 52 ಕೋಟಿ ಅನುದಾನದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಹಾಗೂ ನೀರು ಸಂಪರ್ಕ ಕಾರ್ಯಕ್ರಮಕ್ಕೆ ಪ್ರಧಾನ ಮಂತ್ರಿಗಳು ಚಾಳನೆ ನೀಡಿದರು.

ಜೇವರ್ಗಿ ಪಟ್ಟಣದಲ್ಲಿ ಪ್ರಸ್ತುತ ದಿನಮಾನದಲ್ಲಿ 3 ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದ್ದು ಇದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿದೆ ಎಂಬುವುದರ ಸಲುವಾಗಿ ಪಟ್ಟಣದ 52


ಉದಯವಾಹಿನಿ ಚಿತ್ರ

ಕೋಟಿ ಅನುದಾನದಲ್ಲಿ ಐ ಬಿ ಆವರಣದಲ್ಲಿ, ಶಹಾಪೂರ ರಸ್ತೆ ಕ್ರೀಡಾಂಗಣದ ಹತ್ತಿರ, ವಿಜಯಪೂರ ರಸ್ತೆಯ ಬದಿಯಲ್ಲಿ 10 ಲಕ್ಷ ಲೀಟರ್ ಸಾಮರ್ಥದ ಹಾಗೂ ಬುಗ್ಗಿ ಬಡಾವಣೆಯಲ್ಲಿ 5 ಲಕ್ಷ ಲೀಟರ್ ಸಾಮರ್ಥದ ಆರ್ ಸಿ ಸಿ ಮೇಲ್ಪಟ್ಟ ಜಲ ಸಂಗ್ರಾಹ ಗಾರ ನಿರ್ಮಿಸಲಾಗುವುದು. ಅದೇರೀತಿ 74 ಕಿ. ಮೀ. ಕೊಳವೆ ಮಾರ್ಗ ಸೇರಿದಂತೆ ಅನೇಕ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

# ಕಾಂಗ್ರೇಸ್ ಸಮಿತಿಯ ಬೆಳಗಾವಿ ಅಧಿವೇಶನದ ಶತಮಾನೋತ್ಸವ ಸಂಭ್ರಮ

## ಮಹಾತ್ಮಾ ಗಾಂಧೀಜೀ ವಿಚಾರ ಧಾರೆಗಳು ತತ್ವಗಳು ಲಾಲ್ ಬಹದ್ದೂರ್ ಶಾಸ್ತ್ರಿಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ

• ಉದಯವಾಹಿನಿ,ಚಿಂಚೋಳಿ

ಮಹಾತ್ಮಾ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಆದರ್ಶ ತತ್ವಸಿದ್ಧಾಂತ ವಿಚಾರ ಧಾರೆಗಳು ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಬಗ್ಗೆ ಜನರಲ್ಲಿ ಜಾಗೃತಿ ಅರಿವು ಮೂಡಿಸುವ ಕೆಲಸ ಮಾಡಬೇಕು ಮತ್ತು ಯುವಕರು ಹಿರಿಯರು ಇಂಥಹ ನಾಯಕರ ಬಗ್ಗೆ ಸಮಗ್ರ ಅಧ್ಯಯನ ಮಾಡಿ ಸರಿ ತಪ್ಪುವೆಂಬ ಮಾಹಿತಿ ತಿಳಿದುಕೊಳ್ಳಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ಹೇಳಿದರು.

ಪಟ್ಟಣದ ಮಹಾತ್ಮಾ ಗಾಂಧೀಜಿ ವೃತ್ತದಲ್ಲಿ ಕಾಂಗ್ರೇಸ್ ಪಕ್ಷದ ವತಿಯಿಂದ ಹಮ್ಮಿಕೊಂಡ ಮಹಾತ್ಮಾ ಗಾಂಧೀಜಿ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೇಸ್ ಸಮಿತಿಯ ಬೆಳಗಾವಿ ಅಧಿವೇಶನದ ಶತಮಾನೋತ್ಸವ ಸಂಭ್ರಮ ಹಾಗೂ ಗಾಂಧಿ ಭಾರತ ಅಂಗವಾಗಿ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ ಅಂಗವಾಗಿ ಬ್ಲಾಕ್ ಕಾಂಗ್ರೇಸ್ ಸಮಿತಿ ವತಿಯಿಂದ ಚಿಂಚೋಳಿ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಿಂದ ಚಂದಾಪೂರದ ಮಹಾತ್ಮಾ ಗಾಂಧೀಜಿ ವೃತ್ತದವರೆಗೆ ಪಾದಯಾತ್ರೆ, ಗಾಂಧಿ ನಡಿಗೆ ಮೂಲಕ ಆಗಮಿಸಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,ಮಹಾತ್ಮಾ ಗಾಂಧೀಜಿ ವಿಚಾರ ಧಾರೆಗಳು ಮತ್ತು ಗೋಡ್ಸೆ ನಡುವಿನ ವಿಚಾರ ಧಾರೆಗಳು ದೇಶದಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ ಅದಕಾರಣ ಗೋಡ್ಸೆ ವಿಚಾರಧಾರೆಗಳಿಗೆ ತಕ್ಕ ಉತ್ತರ ಕೊಡಲು ನಾವೆಲ್ಲರೂ ಗಾಂಧೀಜಿ ವಿಚಾರ ಧಾರೆಗಳು ಅಂಬೇಡ್ಕರ್ ಸಂವಿಧಾನದ ಶಕ್ತಿ ವಿಚಾರ ಧಾರೆಗಳು ಸಾರ್ವಜನಿಕರಿಗೆ ಯುವಕರಿಗೆ ಮನವರಿಕೆ ಅರಿವು ಮೂಡಿಸಬೇಕು.ಮಹಾತ್ಮಾ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ 79,000ಕಿಮೀ ಕಾಲ್ನಡಿಗೆ ನಡೆದಿದ್ದರು,2338 ದಿನ ಜೈಲುವಾಸದಲ್ಲಿದರು,21 ದಿನ ಉಪ್ಪಿನ ಸತ್ಯಾಗ್ರಹ,18 ದಿನ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ ಇಂದು ದೇಶ ಅಂಬೇಡ್ಕರ್ ರವರ ಸಂವಿಧಾನದ ಮೇಲೆ ಮತ್ತು ಮಹಾತ್ಮಾ ಗಾಂಧೀಜಿಯವರ ಸಿದ್ಧಾಂತ ಮೇಲೆ ದೇಶ ನಡೆಯುತ್ತಿದೆ.

ಪುರಸಭೆ ಅಧ್ಯಕ್ಷ ಆನಂದ ಟೈಗರ್,ಕಾಂಗ್ರೇಸ್ ಅಧ್ಯಕ್ಷ ಬಸವರಾಜ ಮಾಲಿ,ಕಾಂಗ್ರೇಸ್ ವಕ್ತಾರ ಶರಣುಪಾಟೀಲ,ನಿವೃತ್ತ ನ್ಯಾಯಾಧೀಶರಾದ ಜಿ.ಗೋಖಲೆ ಮಾತನಾಡಿದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಲಕ್ಷ್ಮಣ ಆವುಂಟಿ,ಮಹೇಮೂದ್ ಪಟೇಲ,ದೇವೀಂದ್ರಪ್ಪಾ,ಸುಲ್ತಾನಬೇಗಂ ಖಲೀಲ್ ಪಟೇಲ,ಗುಂಡಪ್ಪ ಗೋಖಲೆ,ರಾಮಶೇಟ್ಟಿ ಪವ್ವಾರ,ಗಣಪತರಾವ,ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷ ನರಸಮ್ಮಾ ಆವುಂಟಿ,ವಿಜಯಕುಮಾರ ಘಾಟಗೆ,ಸಂತೋಷ ಗುತ್ತೇದಾರ,ಅನ್ವರ ಖತೀಬ್,ಮತೀನ ಸೌದಾಗಾರ,ಶೇಖ್ ಫರೀದ್,ಸಂತೋಷ ಮಾಳಪ್ಪನೋರ,ಅಹೇಮದ್ ಬಾಗಬಾನ್ ,ಪ್ರಭುಲಿಂಗ ಲೇವಡಿ,ಈರಣ್ಣ ಹೊಸಮನಿ,ಮಲ್ಲಿಕಾರ್ಜುನ ಬೂಶೆಟ್ಟಿ,ಅಂಕೀತಾ,ನಾಗವೇಣಿ,ನಾಗೇಶ ಗುಣಾಜೀ,ಅನೀಲ ಜಮಾದಾರ,ಡಾ.ತುಕ್ಕರಾಮ ಪವ್ವಾರ,ಮಲ್ಲಿಕಾರ್ಜುನ ಕೋಟಪಳ್ಳಿ,ಡಾ.ರೇವಣಸಿದ್ದಪ್ಪ,ಜನಾರ್ಧನ,ಅನೇಕರಿದ್ದರು.

ಇದೆ ತಿಂಗಳಿಂದತಾಲ್ಲೂಕಾ ಕಾಂಗ್ರೇಸ್ ಪಕ್ಷದ ವತಿಯಿಂದತಾಲ್ಲೂಕಿನಲ್ಲಿ ಪ್ರತಿ ತಿಂಗಳು ಒಂದುದಿನ ಗ್ರಾಮವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡು ತಾಲ್ಲೂಕಿನ ಅಭಿವೃದ್ಧಿಗೆ ಮತ್ತು ಗಾಂಧೀಜಿ ತತ್ವಸಿದ್ಧಾಂತ ಮತ್ತು ಅಂಬೇಡ್ಕರ್ ಸಂವಿಧಾನ ಕುರಿತು ಅರಿವು ಮೂಡಿಸುವುದು ಮತ್ತು ಚರ್ಚ ಕೂಟ,ಭಾಷಣ ಸ್ವರ್ಧೆ,ವಿಚಾರ ಸಂಕಿರಣ,ಪ್ರಬಂಧ ಸ್ವರ್ಧೆ,ಕಾನೂನು ಅರಿವು,ಉಚಿತ ಆರೋಗ್ಯ ತಪಾಸಣೆ,ಹೀಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದೇಶದ ಮತ್ತುತಾಲ್ಲೂಕಿನ ಅಭಿವೃದ್ಧಿಗೆ ಕೆಲಸ ಮಾಡಲಾಗುವುದು ಎಂದರು.

ಅಂಬೇಡ್ಕರ್ ವೃತ್ತದಿಂದ ಮಹಾತ್ಮಾ ಗಾಂಧೀಜಿ ವೃತ್ತದವರೆಗೆ 03ಕಿಮೀ ಕಾಲ್ನಡಿಗೆ ಮೂಲಕ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಕ್ಕಾಗಿ ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ರವರಿಗೆ ಮತ್ತು ಪುರಸಭೆ ಅಧ್ಯಕ್ಷ ಆನಂದ ಟೈಗರ್,ಉಪಾಧ್ಯಕ್ಷ ಸುಲ್ತಾನಬೇಗಂ ಖಲೀಲ್ ಪಟೇಲ ಅವರಿಗೆ ಈರಣ್ಣ ಹೊಸಮನಿ ಸನ್ಮಾನಿಸಿ ಗೌರವಿಸಲಾಯಿತು.

# ಮಿನಿ ನ್ಯೂಸ್

## ಅಕ್ರಮವಾಗಿ ಸಾಗಿಸುತ್ತಿದ್ದ 49 ಲಕ್ಷ ರೂ. ಮೌಲ್ಯದ ಮದ್ಯ ಜಪ್ತಿ

• ಉದಯವಾಹಿನಿ ಬೆಳಗಾವಿ

ಗೋವಾದಿಂದ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಧಿಸುತ್ತಿದ್ದ 49 ಲಕ್ಷ ರೂಪಾಯಿ ಮೌಲ್ಯದ ಮದ್ಯವನ್ನು ಖಾನಾಪುರತಾಲ್ಲೂಕಿನ ಕಣಕುಂಬಿ ಚೆಕ್ಪೋಸ್ಟ್ ಬಳಿ ಅಬಕಾರಿ ಇಲಾಖೆ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಪಣಜಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಮಧ್ಯರಾತ್ರಿ ವಾಹನ ತಪಾಸಣೆ ನಡೆಸುವ ವೇಳೆ ಕಂಟೇನರ್ ಚಾಲಕ ಅರಣ್ಯದಲ್ಲಿ ಪರಾರಿಯಾಗಿದ್ದಾನೆ. ಸಂಶಯಗೊಂಡು ವಾಹನ ಪರಿಶೀಲಿಸಿದಾಗ ಕಂಟೇನರ್ ಒಳಗೆ ಇನ್ನೊಂದು ಕಂಪಾರ್ಟ್ಮೆಂಟ್ ಇರುವುದು ಪತ್ತೆಯಾಗಿದ್ದು, ಅದರಲ್ಲಿ ಮದ್ಯದ ಬಾಟಲಿಗಳನ್ನು ಇಟ್ಟು ಸಾಗಾಣೆ ಮಾಡಲಾಗುತ್ತಿತ್ತು. 49 ಲಕ್ಷ ರೂ. ಮೌಲ್ಯದ 3060 ಮದ್ಯದ ಬಾಟಲಿ, 35 ಲಕ್ಷ ಮೌಲ್ಯದ ವಾಹನ ಜಪ್ತಿ ಮಾಡಲಾಗಿದೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಸಮಯದಲ್ಲಿ ಹಂಚಿಕೆ ಮಾಡಲು ಮದ್ಯ ಸಾಗಿಸಲಾಗುತ್ತಿತ್ತೆ ಎನ್ನುವುದರ ಕುರಿತಾಗಿ ತನಿಖೆ ನಡೆಸಲಾಗಿದೆ.

## 3 ವರ್ಷದ ಮಗುವಿನ ಮೇಲೆ ಹುಚ್ಚುನಾಯಿ ದಾಳಿ; ಮಗು ಸ್ಥಿತಿ ಗಂಭೀರ

• ಉದಯವಾಹಿನಿ ಬಾಗಲಕೋಟೆ

ಮೂರು ವರ್ಷದ ಮಗುವಿನ ಮೇಲೆ ಹುಚ್ಚು ನಾಯಿ ದಾಳಿ ನಡೆಸಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಇಳಕಲ್ ಶಾಲೆಯ ಹಿಂಭಾಗದಲ್ಲಿ ನಡೆದಿದೆ. ಗಂಗಾಧರ ಗಂಭೀರವಾಗಿ ಗಾಯಗೊಂಡಿರುವ ಮೂರು ವರ್ಷದ ಮಗು. ಹುಚ್ಚುನಾಯಿ ದಾಳಿಯಿಂದ ಮಗುವಿನ ತುಟಿ, ಕೆನ್ನೆ, ಬಲಗಣ್ಣು, ಕಿವಿಗಳಿಗೆ ಗಂಭೀರ ಗಾಯಗಳಾಗಿವೆ. ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇಳಕಲ್ ಭಾಗದಲ್ಲಿ ಹುಚ್ಚುನಾಯಿ ಹಾವಳಿ ಹೆಚ್ಚುತ್ತಿದ್ದರೂ ನಗರಸಭೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.


## ಶಾಸಕ ಬಸನಗೌಡ ಪಾಟೀಲ ಯತ್ನಾಳ ಪಕ್ಷದಿಂದ ಉಚ್ಚಾಟಿಸಲು ಒತ್ತಾಯ

• ಉದಯವಾಹಿನಿ ದಾವಣಗೆರೆ

ರಾಜ್ಯ ಸರ್ಕಾರ ಪತನಗೊಳಿಸಲು ?1,000 ಕೋಟಿಯನ್ನು ನಾಯಕರೊಬ್ಬರು ತೆಗೆದಿಟ್ಟಿದ್ದಾರೆ ಎಂಬ ಆರೋಪ ಎಸಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಬಿಜೆಪಿಯ ಕೆಲ ನಾಯಕರಿಂದ ಒತ್ತಾಯ ಕೇಳಬಂದಿದೆ. ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಪಕ್ಷದ ಪ್ರಮುಖರ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಿ ವರಿಷ್ಠರಿಗೆ ದೂರು ನೀಡಲು ಮುಂದಾಗಿದ್ದಾರೆ. ಪಕ್ಷಕ್ಕೆ ಮುಜುಗರವುಂಟು ಮಾಡುತ್ತಿರುವವರಿಗೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಅವರು, ಸಿದ್ದರಾಮಯ್ಯ ವಿರುದ್ಧ ಬಿಜೆಪಿ ನಡೆಸುತ್ತಿರುವ ಹೋರಾಟದ ದಿಕ್ಕುತಪ್ಪಿಸಲು ಯತ್ನಾಳ ಪ್ರಯತ್ನಿಸುತ್ತಿದ್ದಾರೆ. ಮುಖ್ಯಮಂತ್ರಿ ಪರವಾಗಿ ವಕಾಲತ್ತು ವಹಿಸಿ ಕಾಂಗ್ರೇಸ್ ಏಜೆಂಟ್ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಈ ಬಗ್ಗೆ ಕ್ಷಮೆಕೋರಬೇಕೆಂದು ಒತ್ತಾಯಿಸಿದರು.

## ಚಂದಾಪೂರದ ತಹಶೀಲ್ ವರೆಗೆ ವಿಭಾಜಕ ನಿರ್ಮಿಸಲು ಆಗ್ರಹ

• ಉದಯವಾಹಿನಿ,ಚಿಂಚೋಳಿ



ಅಪಘಾತಗಳು ತಡೆಗಟ್ಟಲು ಪಟ್ಟಣದ ಪದ್ಮಾ ಕಾಲೇಜಿನಿಂದ ಚಂದಾಪೂರದ ತಹಸೀಲ್ ಕಛೇರಿವರೆಗೆ ರಸ್ತೆ ಮಧ್ಯೆ ವಿಭಾಜಕ (ಡಿವೈಡರ್) ನಿರ್ಮಿಸಬೇಕು ಎಂದು ಸಮಾಜ ಸೇವಕ ಶರಣಪ್ಪಾ ಮಾಳಗಿ ಒತ್ತಾಯಿಸಿದರು. ಪಟ್ಟಣದಲ್ಲಿ ಅನೇಕ ಅಪಘಾತಗಳು ಆಗುತ್ತಿವೆ ಆದರೆ ಜನಪ್ರತಿನಿಧಿಗಳು ಪಿಡಬ್ಲ್ಯೂಡಿ ಅಧಿಕಾರಿಗಳು ಮಾತ್ರ ಮೌನಕ್ಕೆ ಶರಣಾಗಿದ್ದಾರೆ. ಪದ್ಮಾ ಕಾಲೇಜಿನಿಂದ ತಹಶೀಲ್ ಕಛೇರಿವರೆಗೆ ರಸ್ತೆ ನಿರ್ಮಾಣ ಮಾಡಲು ಹಾಗೂ ರಸ್ತೆ ಮಧ್ಯ ವಿಭಾಜಕಗಳು ನಿರ್ಮಾಣ ಮಾಡಲು ಸರ್ಕಾರದಿಂದ ಅನುದಾನ ಬಿಡುಗಡೆ ಆದರೂ ಕೂಡ ಪಿಡಬ್ಲ್ಯೂಡಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮೌನವಹಿಸಿ ಕೆಲಸ ಮಾಡದೆ ರಸ್ತೆಗಳಲ್ಲಿ ತೆಗ್ಗುಗುಂಡಿಗಳು ಬಿದ್ದಿವೆ ಆದರೆ ತಾತ್ಕಾಲಿಕ ದುರಸ್ತಿ ಕಾರ್ಯಕೈಗೊಳ್ಳುತ್ತಿಲ್ಲಾ,ರಸ್ತೆ ಮಧ್ಯೆ ವಿಭಾಜಕ ಇಲ್ಲದೆ ಇರುವುದರಿಂದ ಅನೇಕ ಅಪಘಾತಗಳು ಆಗುತ್ತಿವೆ ಅಪಘಾತಗಳು ತಡೆಗಟ್ಟಲು ಶೀಘ್ರದಲ್ಲೇ ರಸ್ತೆ ವಿಭಾಜಕ ನಿರ್ಮಿಸಿ ಅಪಘಾತ ತಡೆಯಬೇಕು. ಶಾಸಕರು ಪಿಡಬ್ಲ್ಯೂಡಿ ಅಧಿಕಾರಿಗಳು ಸಾರ್ವಜನಿಕರ ಹಿತ ಕಾಪಾಡಲು ರಸ್ತೆ ಮಧ್ಯ ವಿಭಾಜಕ ನಿರ್ಮಿಸಿ ಅವರ ಜೀವ ಕಾಪಾಡಬೇಕು ಹಾಗೂ ವಿಭಾಜಕ ನಿರ್ಮಿಸಿದರೆ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಹಿರಿಯರಿಗೆ ಮಕ್ಕಳಿಗೆ ರಸ್ತೆ ದಾಟಾಲು ಅನುಕೂಲವಾಗುತ್ತದೆ. ಒಂದು ವೇಳೆ ವಿಭಾಜಕ ನಿರ್ಮಿಸದೆ ಇದ್ದರೆ ಜನಪ್ರತಿನಿಧಿಗಳ ಮತ್ತು ಪಿಡಬ್ಲ್ಯೂಡಿ ಅಧಿಕಾರಿಗಳ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಪ್ರಕಟನೆಯಲ್ಲಿ ಆಗ್ರಹಿಸಿದರು.

## ಕರ್ತವ್ಯದ ವೇಳೆಯಲ್ಲೇ ಪೊಲೀಸ್ ಪೇದೆ ಹೃದಯಾಘಾತದಿಂದ ನಿಧನ

• ಉದಯವಾಹಿನಿ ಬೀದರ್

ದಿನೇ ದಿನೇ ಹೃದಯಾಘಾತದಂತ ಪ್ರಕರಣಗಳು ಹೆಚ್ಚಾಗುತ್ತಿವೆ. ಬೀದರ್‌ನಲ್ಲಿ ಕರ್ತವ್ಯ ನಿರತಂತ ಸಂದರ್ಭದಲ್ಲೇ ಪೊಲೀಸ್ ಪೇದೆಯೊಬ್ಬ ಹೃದಯಾಘಾತಕ್ಕೆ ಒಳಗಾಗಿ, ಚಿಕಿತ್ಸೆ ಫಲಿಸದೇ ಸಾವನ್ನಪ್ಪಿರುವಂತ ಘಟನೆ ನಡೆದಿದೆ. ಬೀದರ್ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಐದು ವರ್ಷದಿಂದ ಚಂದ್ರಶೇಖರ್(28) ಕರ್ತವ್ಯ ನಿರ್ವಹಿಸುತ್ತಿದ್ದರು. ಗಾಂಧಿ ಜಯಂತಿಯ ಅಂಗವಾಗಿ ಕರ್ತವ್ಯ ನಿರತಂತ ವೇಳೆಯಲ್ಲಿ ದಿಢೀರ್ ಹೃದಯಾಘಾತ ಸಂಭವಿಸಿದೆ. ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಆದರೇ ಚಿಕಿತ್ಸೆ ಫಲಿಸದೇ 28 ವರ್ಷದ ಪೊಲೀಸ್ ಪೇದೆ ಚಂದ್ರಶೇಖರ್ ಸಾವನ್ನಪ್ಪಿದ್ದಾರೆ.

ಅಂದಹಾಗೇ ಮೃತ ಪೊಲೀಸ್ ಪೇದೆ ಚಂದ್ರಶೇಖರ್ ರಾಯಚೂರು ಮೂಲದವರು. ಕಳೆದ 5 ವರ್ಷದ ಹಿಂದೆ ಪೊಲೀಸ್ ಪೇದೆಯಾಗಿ ಬೀದರ್ ಗೆ ನೇಮಕಗೊಂಡು, ಸೇವೆ ಸಲ್ಲಿಸುತ್ತಿದ್ದರು. ತಂದೆ-ತಾಯಿ ಕುಟುಂಬದವರೆಲ್ಲಾ ರಾಯಚೂರಲ್ಲಿ ಬಿಡ್ಡು, ಒಬ್ಬರೇ ಬೀದರ್ ನಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದರು. ಇಂತಹ ಅವರು ದಿಢೀರ್ ಹೃದಯಾಘಾತಕ್ಕೆ ಒಳಗಾಗಿ ನಿಧನರಾಗಿದ್ದಾರೆ.



# ಗಾಂಧಿ ಜಯಂತಿ
## ರಾಜ್‌ಘಾಟ್‌ನಲ್ಲಿ ಪ್ರಧಾನಿ ಮೋದಿ ಸೇರಿ
# ಗಣ್ಯರಿಂದ ಪುಷ್ಪ ನಮನ

**ನವದೆಹಲಿ:** ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜನ್ಮದಿನದ ನಿಮಿತ್ತ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ರಾಜ್‌ಘಾಟ್‌ನಲ್ಲಿರುವ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿದ್ದಾರೆ. ನವದೆಹಲಿಯ ರಾಜ್‌ಘಾಟ್‌ನಲ್ಲಿರುವ ಮಹತ್ಮಾ ಗಾಂಧಿ ಸಮಾಧಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಇದೇ ವೇಳೆ ರಾಜ್ ಘಾಟ್‌ನಲ್ಲಿ ಕಾಂಗ್ರೇಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಇತರ ಮುಖಂಡರು ಪುಷ್ಪ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದ ಮೋದಿಯವರು, ಪೂಜ್ಯ ಬಾಪು ಅವರ ಜನ್ಮದಿನದಂದು ಎಲ್ಲಾ ದೇಶವಾಸಿಗಳ ಪರವಾಗಿ ನಮನಗಳನ್ನು ಸಲ್ಲಿಸುತ್ತಿದ್ದೇನೆ. ಸತ್ಯ, ಸಾಮರಸ್ಯ ಮತ್ತು ಸಮಾನತೆಯ ಆಧಾರದ ಮೇಲೆ ಅವರ ಜೀವನ ಮತ್ತು ಆದರ್ಶಗಳು ಯಾವಾಗಲೂ ದೇಶವಾಸಿಗಳಿಗೆ ಸ್ಫೂರ್ತಿಯಾಗಿ ಉಳಿಯುತ್ತವೆ ಎಂದು ಹೇಳಿದ್ದರು.

ಮತ್ತೊಂದು ಪೋಸ್ಟ್‌ನಲ್ಲಿ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ನೆನೆದು, ದೇಶದ ಸೈನಿಕರು, ರೈತರು ಮತ್ತು ಸ್ವಾಭಿಮಾನಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನದಂದು ಗೌರವಪೂರ್ವಕ ನಮನಗಳು ಎಂದು ತಿಳಿಸಿದ್ದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ದೆಹಲಿ ಸಿಎಂ ಆತಿಶಿಸೇರಿದಂತೆ ಹಲವು ಗಣ್ಯರು ರಾಜ್‌ಘಾಟ್‌ನಲ್ಲಿರುವ ಗಾಂಧೀಜಿ ಅವರ ಸಮಾಧಿಗೆ ನಮನ ಸಲ್ಲಿಸಿದರು.

## ಡೋಬ್ರಿ ಮಹಾರಾಜ ಸ್ಮಾರಕಕ್ಕೆ ಮೋದಿ ಭೇಟಿ; ಗೌರವ ನಮನ,

**ಪೋಲೆಂಡ್ ರಾಜಧಾನಿ ವಾರ್ಸಾ ಪ್ರವಾಸದಲ್ಲಿರುವ ಪ್ರಧಾನಮಂತ್ರಿ ಮೋದಿ ಅವರು ವಾರ್ಸಾದಲ್ಲಿರುವ ಡೋಬ್ರಿ ಮಹಾರಾಜ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಸೂಚಿಸಿದರು. ವಾರ್ಸಾದ ಗುಡ್ ಮಹಾರಾಜರ ಚೌಕದಲ್ಲಿರುವ ಈ ಸ್ಮಾರಕವು, ಆಧುನಿಕ ಗುಜರಾತ್‌ನ ಜಾಮ್‌ನಗರದ ನವನಗರದ ದಿಗ್ವಿಜಯಸಿಂಹ ರಂಜಿತ್ ಸಿಂಹ ಜಡೇಜಾ ಅವರ ಬಗ್ಗೆ ಪೋಲೆಂಡ್ ಸರ್ಕಾರ ಮತ್ತು ಅಲ್ಲಿನ ಜನರು ಹೊಂದಿರುವ ಅಪಾರ ಗೌರವ ಮತ್ತು ಕೃತಜ್ಞತೆಯನ್ನು ಸಾರುವ ಸ್ಮರಣಾರ್ಥವಾಗಿದೆ.**



**ವಿಶ್ವದ ಎರಡನೆಯ ಮಹಾಯುದ್ಧದ ಸಮಯದಲ್ಲಿ, ಜಾಮ್ ಸಾಹೇಬ್ ಅವರು ಸಾವಿರಾರು ಅನಾಥ ಮಕ್ಕಳಿಗೆ ಆಶ್ರಯ ನೀಡಿದ್ದರು. ಇಂದು ಪೋಲೆಂಡ್‌ನಲ್ಲಿ ಡೋಬ್ರಿ ಅಂದರೆ ಉತ್ತಮ ಮಹಾರಾಜ ಎಂದು ಅವರನ್ನು ಜನರು ನೆನಪಿಸಿಕೊಳ್ಳುತ್ತಾರೆ.**

**ಅವರ ಉದಾರತೆಯ ಆಳವಾದ ಪ್ರಭಾವವು ಪೋಲೆಂಡ್ ಜನಮಾನಸದಲ್ಲಿ ಉಳಿದಿದೆ. ಸ್ಮಾರಕದ ಬಳಿ, ಪ್ರಧಾನಿ ಮೋದಿಯವರು ಜಾಮ್ ಸಾಹೇಬ್ ಅವರಿಂದ ಆಶ್ರಯ ಪಡೆದ ಪೋಲೆಂಡ್ ಜನರ ವಂಶಸ್ಥರನ್ನು ಭೇಟಿ ಮಾಡಿದರು.**

**ಸ್ಮಾರಕಕ್ಕೆ ಪ್ರಧಾನಮಂತ್ರಿಯವರ ಭೇಟಿಯು ಭಾರತ ಮತ್ತು ಪೋಲೆಂಡ್ ನಡುವಿನ ವಿಶೇಷ ಐತಿಹಾಸಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ, ಇದು ಉಭಯ ದೇಶಗಳ ಜನರಿಂದ ಪಾಲಿಸಿ ಪೋಷಿಸಲ್ಪಟ್ಟಿದೆ.**



## ಕೊಲ್ಹಾಪುರ ಸ್ಮಾರಕಕ್ಕೆ ನಮನ

**ವಾರ್ಸಾದ ಕೊಲ್ಹಾಪುರ ಸ್ಮಾರಕಕ್ಕೆ ಪ್ರಧಾನಿ ಮೋದಿ ಬಳಿಕ ನಮನ ಸಲ್ಲಿಸಿದರು. ಈ ಸ್ಮಾರಕವು ಕೊಲ್ಹಾಪುರದ ಶ್ರೇಷ್ಠ ರಾಜಮನೆತನಕ್ಕೆ ಗೌರವವಾಗಿದೆ. ಎರಡನೆಯ ಮಹಾಯುದ್ಧದ ಭೀಕರತೆಯಿಂದಾಗಿ ಸ್ಥಳಾಂತರಗೊಂಡ ಪೋಲೆಂಡ್ ಮಹಿಳೆಯರು ಮತ್ತು ಮಕ್ಕಳಿಗೆ ಆಶ್ರಯ ನೀಡುವಲ್ಲಿ ಈ ರಾಜಮನೆತನವು ಮುಂಚೂಣಿಯಲ್ಲಿತ್ತು. ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳಿಂದ ಪ್ರೇರಿತರಾದ ಕೊಲ್ಹಾಪುರದ ಮಹಾನ್ ರಾಜಮನೆತನವು ಎಲ್ಲಾಕ್ಕಿಂತ ಹೆಚ್ಚಾಗಿ ಮಾನವೀಯತೆಯನ್ನು ಇರಿಸಿ ಪೋಲೆಂಡ್ ಮಹಿಳೆಯರು ಮತ್ತು ಮಕ್ಕಳಿಗೆ ಘನತೆಯ ಜೀವನವನ್ನು ನೀಡಿದೆ ಎಂದು ಹೇಳಲಾಗುತ್ತಿದೆ.**

## ಆದರ್ಶ ನಮಗೆ ಯಾವಾಗಲೂ ಸ್ಫೂರ್ತಿ

ಭಾರತದ ಸ್ವಾತಂತ್ರ್ಯ ಚಳವಳಿಯ ಅಪ್ರತಿಮ ಹೋರಾಟಗಾರ ಮಹಾತ್ಮ ಗಾಂಧಿ ಅವರ ಜನ್ಮದಿನ. ಈ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ರಾಜ್‌ಘಾಟ್‌ನಲ್ಲಿ ಇರುವ ಮಹಾತ್ಮಾ ಗಾಂಧಿ ಅವರ ಸ್ಮಾರಕಕ್ಕೆ ತೆರಳಿ ಗೌರವ ಸಲ್ಲಿಸಿದರು.

ಮುನ್ನ ತಮ್ಮ ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ ನರೇಂದ್ರ ಮೋದಿ, ಪೂಜ್ಯ ಬಾಪು ಅವರ ಜನ್ಮದಿನದಂದು ಎಲ್ಲಾ ದೇಶವಾಸಿಗಳ ಪರವಾಗಿ ನಮನಗಳನ್ನು ಸಲ್ಲಿಸುತ್ತಿದ್ದೇನೆ. ಸತ್ಯ, ಸಾಮರಸ್ಯ ಮತ್ತು ಸಮಾನತೆಯ ಆಧಾರದ ಮೇಲೆ ಅವರ ಜೀವನ ಮತ್ತು ಆದರ್ಶಗಳು ಯಾವಾಗಲೂ ದೇಶದ ಜನರಿಗೆ ಸ್ಫೂರ್ತಿಯಾಗಿ ಉಳಿಯುತ್ತವೆ ಎಂದು ಹೇಳಿದ್ದಾರೆ. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವೂ ಆಗಿದ್ದು, ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಸೈನಿಕರು, ರೈತರು ಮತ್ತು ದೇಶದ ಸ್ವಾಭಿಮಾನಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನದಂದು ಗೌರವಪೂರ್ವಕ ನಮನಗಳು ಎಂದು ಟ್ವೀಟ್ ಮಾಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ರಾಜ್‌ಘಾಟ್‌ನಲ್ಲಿ ಇರುವ ಮಹಾತ್ಮಾ ಗಾಂಧಿ ಅವರ ಸ್ಮಾರಕಕ್ಕೆ ತೆರಳಿ ಗೌರವ ಸಲ್ಲಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇತರ ಕಾಂಗ್ರೇಸ್ ನಾಯಕರು ಸಾಥ್ ನೀಡಿದರು. ಇನ್ನು, ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ದೆಹಲಿ ಸಿಎಂ ಆತಿಶಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ, ಸೇರಿದಂತೆ ಹಲವು ಗಣ್ಯರು ರಾಜ್‌ಘಾಟ್‌ನಲ್ಲಿರುವ ಗಾಂಧೀಜಿ ಅವರ ಸಮಾಧಿಗೆ ನಮನ ಸಲ್ಲಿಸಿದರು. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಈ ವಿಶೇಷ ಸಂದರ್ಭದಲ್ಲಿ ಮಹಾತ್ಮ ಗಾಂಧಿಯನ್ನು ಸ್ಮರಿಸಿ ಟ್ವೀಟ್ ಮಾಡಿದ್ದಾರೆ. ಇಡೀ ಜಗತ್ತನ್ನು ಶಾಂತಿ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸಲು ಪ್ರೇರೇಪಿಸಿದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಜೀವನವು ಆದರ್ಶಪ್ರಾಯವಾಗಿದೆ. ಸ್ವತಃ ಸ್ವದೇಶಿ ವಿಚಾರಗಳು ಗಾಂಧಿ ಜಯಂತಿಯಂದು ಮಹಾತ್ಮಾ ಗಾಂಧಿ ಅವರಿಗೆ ಶ್ರದ್ಧಾಂಜಲಿಗಳನ್ನು ನೀಡುತ್ತಲೇ ಇರುತ್ತವೆ ಎಂದು ಹೇಳಿದ್ದಾರೆ.ಇನ್ನು, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವಿಟ್ಟರ್‌ನಲ್ಲಿ ಬರೆದುಕೊಂಡಿದ್ದು, ಬಾಪು ಅವರ ಜನ್ಮದಿನದಂದು ಅವರಿಗೆ ಹೃತ್ಪೂರ್ವಕ ನಮನಗಳು. ಬಾಪು ಅವರ ಸಂಪೂರ್ಣ ಜೀವನ, ವ್ಯಕ್ತಿತ್ವ, ಆಲೋಚನೆಗಳು ಮತ್ತು ಅವರ ಹೋರಾಟವು ಭಾರತ ಮಾತ್ರವಲ್ಲದೆ ಇಡೀ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೆ ಸ್ಫೂರ್ತಿಯ ಮೂಲವಾಗಿದೆ. ತಲೆಮಾರುಗಳು ಅವರಿಂದ ಸ್ಫೂರ್ತಿ ಪಡೆಯುವುದನ್ನು ಮುಂದುವರಿಸುತ್ತವೆ ಎಂದು ಹೇಳಿದ್ದಾರೆ.

# ವೈದ್ಯರ ಮುಷ್ಕರ ಬಂಗಾಳ ತಲ್ಲಣ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ವೈದ್ಯರು ಮುಷ್ಕರ ಮುಂದುವರೆಸಿರುವುದರಿಂದ ಆರೋಗ್ಯ ಸೇವೆಗಳ ಮೇಲೆ ಭಾರಿ ದುಷ್ಪರಿಣಾಮ ಬೀರಿದೆ.

ಆಗಸ್ಟ್ 9ರಂದು ಆರ್‌ಜಿಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ತಮ್ಮ ಸಹೋದ್ಯೋಗಿಯ ಶವ ಪತ್ತೆಯಾದ ನಂತರ ಕಿರಿಯ ವೈದ್ಯರು ಕೆಲಸವನ್ನು ನಿಲ್ಲಿಸಿದರು.

42 ದಿನಗಳ ನಂತರ ಸೆಪ್ಟೆಂಬರ್ 21ರಂದು ಭಾಗಶಃ ಕೆಲಸಕ್ಕೆ ಮರಳಿದರು, ಹೆಚ್ಚಿನದನ್ನು ಪರಿಹರಿಸುವುದಾಗಿ ಸರ್ಕಾರ ಭರವಸೆ ನೀಡಿದ ನಂತರ ಅಗತ್ಯ ಸೇವೆಗಳನ್ನು ಪುನರಾರಂಭಿಸಿದ್ದರು. ಆದರೆ, ಸರ್ಕಾರ ನೀಡಿದ ಭರವಸೆ ಈಡೇರಿಸಿಲ್ಲ ಎಂದು ಆರೋಪಿಸಿ ವೈದ್ಯರು ಮಂಗಳವಾರದಿಂದಲೇ ಕೆಲಸ ಸ್ಥಗಿತಗೊಳಿಸಿ ಮತ್ತೆ ಪ್ರತಿಭಟನೆಗೆ ಮುಂದಾಗಿದ್ದಾರೆ. ಹಿರಿಯ ವೈದ್ಯರ ಒಂದು ವಿಭಾಗವು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವುದರಿಂದ ಸಂಪೂರ್ಣ ಕದನ ವಿರಾಮದ ಕೆಲಸವನ್ನು ಮರುಪರಿಶೀಲಿಸುವ ಸಾಧ್ಯತೆಯಿದೆ. ನಾವು ಸಹ ಮುಂದಿನ ಮಾರ್ಗವನ್ನು ನಿರ್ಧರಿಸಲು ಎಲ್ಲಾ ಮಧ್ಯಸ್ಥಗಾರರ ಜೊತೆ ಸಭೆಗಳನ್ನು ನಡೆಸುತ್ತೇವೆ. ಪರಿಸ್ಥಿತಿ ನಮನ್ನು ಒತ್ತಾಯಿಸದ ಹೊರತು ಕೆಲಸದಿಂದ ದೂರ ಉಳಿಯಲು ಬಯಸುವುದಿಲ್ಲ




ಎಂದು ಪ್ರತಿಭಟನಾನಿರತ ಕಿರಿಯ ವೈದ್ಯರಲ್ಲಿ ಒಬ್ಬರಾದ ಸುಭೇಂದು ಮಲ್ಲಿಕ್ ಪಿಟಿಐಗೆ ತಿಳಿಸಿದರು. ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಸಿಬಿಐ ತನಿಖೆಯ ವೇಗದ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದರು. ಸಿಬಿಐಯ ತನಿಖೆ ನಿರಾಶಾದಾಯಕವಾಗಿ ನಿಧಾನವಾಗಿದೆ. ವಿಳಂಬದಿಂದಾಗಿ ಅಪರಾಧಿಗಳು ಮುಕ್ತರಾಗುವ ಅನೇಕ ಪ್ರಕರಣಗಳನ್ನು ನಾವು ನೋಡಿದ್ದೇವೆ. ನಮಗೆ ನಿರಾಶೆಯಾಗಿದೆ ಎಂದು ಕಿರಿಯ ವೈದ್ಯರು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮತ ವೈದ್ಯರಿಗೆ ಶೀಘ್ರ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸುವುದರ ಜೊತೆಗೆ ಧರಣಿ ನಿರತ ವೈದ್ಯಾಧಿಕಾರಿಗಳು ಕುಂದುಕೊರತೆಗಳ ವಿಸ್ತಾರವಾದ ಪಟ್ಟಿಯನ್ನು ನೀಡಿದ್ದಾರೆ.

# ಹೆಲಿಕಾಪ್ಟರ್ ಪತನ, ಮೂವರ ಸಾವು

**ಪುಣೆ:** ಖಾಸಗಿ ಹೆಲಿಕಾಪ್ಟರ್ ಪತನಗೊಂಡು ಇಬ್ಬರು ಪೈಲಟ್‌ಗಳು ಸೇರಿ ಮೂವರು ಸಾವನ್ನಪ್ಪಿರುವ ಘಟನೆ ಬವ್‌ಧಾನ್ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿ ಸಂಭವಿಸಿದೆ. ಹೆಲಿಕಾಪ್ಟರ್ ಪತನಗೊಂಡು ಕೂಡಲೆ ಬೆಂಕಿ ಹೊತ್ತಿಕೊಂಡು ದಟ್ಟ ಹೊಗೆ ಆವರಿಸಿದೆ. ಬೆಳಗ್ಗೆ 6.45ಕ್ಕೆ ಈ ಘಟನೆ ನಡೆದಿದೆ ಎಂದು ಪಿಂಪ್ರಿ ಚಿಂಚ್ವಾಡ್ ಪೊಲೀಸರು ತಿಳಿಸಿದ್ದಾರೆ.

ಪೂಣೆ ಬಳಿಯ ಆಕ್ಸ್‌ಫರ್ಡ್ ಗಾಲ್ಫ್ ಕೋರ್ಸ್‌ನಲ್ಲಿರುವ ಹೆಲಿಪ್ಯಾಡ್‌ನಿಂದ ಹೆಲಿಕಾಪ್ಟರ್ ಟೇಕ್ ಆಫ್‌ಆಗಿ ಮುಂಬೈನ ಜುಹುಗೆ ತೆರಳುವಾಗ ಬವ್‌ಧಾನ್ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿ ಏಕಾಏಕಿ ನಿಯಂತ್ರಣ ಕಳೆದುಕೊಂಡು ಕೆಳಗೆ ಇಳಿದು ನೆಲಕ್ಕೆ ಅಪ್ಪಳಿಸಿದೆ ಎಂದು ಹಿಂಜೆವಾಡಿ ಪೊಲೀಸ್ ಠಾಣೆಯ ಹಿರಿಯ ಇನ್ಸ್‌ಪೆಕ್ಟರ್ ಕನ್ಹಯ್ಯಾ ಥೋರಟ್ ಹೇಳಿದ್ದಾರೆ.

ಹೆಲಿಕಾಪ್ಟರ್‌ಅನ್ನು ಪೈಲಟ್‌ಗಳಾದ ಪರಮ್ ಜಿತ್‌ಸಿಂಗ್ ಮತ್ತು ಜಿಕೆ ಪಿಳ್ಳೈ ಚಾಲನೆ ಮಾಡುತ್ತಿದ್ದರು ಮತ್ತು ಅವರೊಂದಿಗೆ ಇಂಜಿನಿಯರ್ ಪ್ರಿತಮ್ ಭಾರದ್ವಾಜ್ ಇದ್ದರು ಎಂದು ಗೊತ್ತಾಗಿದೆ. ಅಗ್ನಿಶಾಮಕ




ದಳದ ವಾಹನಗಳೊಂದಿಗೆ ಪೊಲೀಸ್ ತಂಡಗಳು ಸ್ಥಳಕ್ಕೆ ತಲುಪಿ ಪರಿಹಾರ ಕಾರ್ಯಾಚರಣೆ ನಡೆಸಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಹೆಲಿಕಾಪ್ಟಾರ್ ದೆಹಲಿ ಮೂಲದ ಖಾಸಗಿ ವಿಮಾನಯಾನ ಸಂಸ್ಥೆ ಹೆರಿಟೇಜ್ ಏವಿಯೇಷನ್‌ಗೆ ಸೇರಿದೆ ಮತ್ತು ವಿಟಿ ಇವಿವಿ ನೋಂದಣಿ ಸಂಖ್ಯೆಯನ್ನು ಹೊಂದಿತ್ತು ಎಂದು ತಿಳಿದುಬಂದಿದ್ದು, ಹೆಲಿಕಾಪ್ಟರ್ ಅನ್ನು ನ್ಯಾಷನಲಿಸ್ಟ್ ಕಾಂಗ್ರೇಸ್ ಪಾರ್ಟಿ (ಎನ್‌ಸಿಪಿ)ಬಕ್ ಮಾಡಿತ್ತು ಎನ್‌ಸಿಪಿ ಮುಖ್ಯಸ್ಥ ಸುನೀಲ್ ತಟ್ಕರೆ ಅವರು ಹೆಲಿಕಾಪ್ಟರ್‌ನಲ್ಲಿ ರಾಯಗಢಕ್ಕೆ ಭೇಟಿ ಮಾಡಬೇಕಿತ್ತು, ಆದರೆ ಪ್ರಯಾಣ ಸಮಯ ಬದಾಲಾಗಿತ್ತು.

# ಗಾಂಧೀಜಿ ಸ್ವಚ್ಛತೆ ಕರೆ, ಮೋದಿ ಆಂದೋಲನ


**ನವದೆಹಲಿ:** ರಾಷ್ಟ್ರಪಿತ ಮಹಾತ ಗಾಂಧಿಯವರು ನೀಡಿದ ಸ್ವಚ್ಛತೆಯ ಕರೆಯನ್ನು ಕಳೆದ ಒಂದು ದಶಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಾಮೂಹಿಕ ಆಂದೋಲನ ವಾಗಿ ಪರಿವರ್ತಿಸಿದ್ದಾರೆ ಎಂದು ಕೇಂದ್ರ ಸಚಿವ ಮತ್ತು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಹೇಳಿದ್ದಾರೆ. ನಡ್ಡಾ ಅವರು ಪಕ್ಷದ ರಾಜ್ಯಾಧ್ಯಕ್ಷ ವೀರೇಂದ್ರ ಸಚ್‌ದೇವ ಮತ್ತು ಸಂಸದ ಬನ್ಸುರಿ ಸ್ವರಾಜ್ ಸೇರಿದಂತೆ ದೆಹಲಿ ಘಟಕದ ನಾಯಕರೊಂದಿಗೆ ರಾಷ್ಟ್ರ ರಾಜಧಾನಿಯ ಲೋಧಿ ಕಾಲೋನಿಯಲ್ಲಿ ಸ್ವಚ್ಛತಾ ಅಭಿಯಾನಟ್‌ದಲ್ಲಿ ಭಾಗವಹಿಸಿದರು.

ಬಿಜೆಪಿಯ ಸೇವಾ ಪಖ್ವಾರಾ (ಸೇವೆಯ ಹದಿನೈದು ದಿನಗಳು) ಸೆ.17 ರಂದು ಪ್ರಾರಂಭವಾಯಿತು ಮತ್ತು ಗಾಂಧಿ ಜಯಂತಿಯಂದು ಸ್ವಚ್ಛತಾ ಅಭಿಯಾನದೊಂದಿಗೆ ಮುಕ್ತಾಯಗೊಳ್ಳುತ್ತದೆ ಎಂದು ನಡ್ಡಾ ಸುದ್ದಿಗಾರರಿಗೆ ತಿಳಿಸಿದರು.

ಮೋದಿ ಅವರು ಪ್ರಧಾನಿಯಾದ ನಂತರ ಸ್ವಚ್ಛತೆಯನ್ನು ಅಳವಡಿಸಿಕೊಂಡರು ಮತ್ತು ಅದು ಸಾಮೂಹಿಕ ಆಂದೋಲನವಾಯಿತು. ಸ್ವಚ್ಛತೆಯ ಕರೆಯನ್ನು ದೇಶದ ಪಿತಾಮಹ ಮಹಾತ ಗಾಂಧೀಜಿ ನೀಡಿದ್ದರು ಎಂದು ನಮಗೆ ತಿಳಿದಿದೆ ಆದರೆ



ಪ್ರಧಾನಿ ಮೋದಿ ಅದನ್ನು ಸಾಮೂಹಿಕ ಆಂದೋಲನವನ್ನಾಗಿ ಬದಲಾಯಿಸಿದ್ದಾರೆ ಎಂದು ಅವರು ಹೇಳಿದರು. ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಮತ್ತು ಕಸ ಹಾಕುವುದನ್ನು ತಪ್ಪಿಸಲು ಮತ್ತು ಸ್ವಚ್ಛತೆಯ ಕಡೆಗೆ ಸಮಾಜವನ್ನು ಉತ್ತೇಜಿಸಲು ಜನರಲ್ಲಿ ಜಾಗತಿ ಮೂಡಿಸುವ ಈ ಸಾಮೂಹಿಕ ಆಂದೋಲನವು ಮೋದಿಯವರ ನಾಯಕತ್ವದಲ್ಲಿ ಕಳೆದ 10 ವರ್ಷಗಳಿಂದ ಮುಂದುವರೆದಿದೆ ಎಂದು ನಡ್ಡಾ ಹೇಳಿದರು. ಭವಿಷ್ಯದಲ್ಲಿ ಈ ಆಂದೋಲನವನ್ನು ವೇಗಗೊಳಿಸಲು ಬಿಜೆಪಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ಪ್ರತಿಪಾದಿಸಿದ ಅವರು, ಸ್ವಚ್ಛತೆ ಒಂದು ದಿನದ ವಿಷಯವಲ್ಲ ಮತ್ತು ಅದನ್ನು ವರ್ಷವಿಡೀ ಪ್ರತಿದಿನ ಕಾಪಾಡಿಕೊಳ್ಳಬೇಕು ಎಂದು ಹೇಳಿದರು. ಸಾಧ್ಯವಾದಾಗಲೆಲ್ಲಾ ಪ್ರಚಾರದಲ್ಲಿ ಪಾಲ್ಗೊಳ್ಳುವಂತೆ ನಡ್ಡಾ ದೇಶದ ಜನತೆಗೆ ಮತ್ತು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ಬಿಜೆಪಿ ಪ್ರತಿ ವರ್ಷ ಸೇವಾ ಪಖ್ವಾರ ಆಚರಿಸುತ್ತದೆ, ಗಾಂಧಿ ಜಯಂತಿಯಂದು ಸ್ವಚ್ಛತಾ ಅಭಿಯಾನದಲ್ಲಿ ಜನರನ್ನು ತೊಡಗಿಸುತ್ತದೆ ಎಂದು ಅವರು ಹೇಳಿದರು.



ಕಸ ಹಾಕುವುದನ್ನು ತಪ್ಪಿಸಲು ಮತ್ತು ಸ್ವಚ್ಛತೆಯ ಕಡೆಗೆ ಸಮಾಜವನ್ನು ಉತ್ತೇಜಿಸಲು ಜನರಲ್ಲಿ ಜಾಗತಿ

# ಮೋದಿ ಚಿಂತನೆ, ಸಮಾನತೆಗೆ ಹಾನಿ



**ಮುಂಬೈ:** ಪ್ರಧಾನಿ ಮೋದಿ ಅವರು ಸಮಾಜಕ್ಕೆ ಅಪಾಯಕಾರಿ ಮತ್ತು ಅವರ ಮನಸ್ಸಿನಲ್ಲಿರುವ ಚಿಂತನೆ ''ಸಮಾನತೆಗೆ ಹಾನಿಕಾರಕ'' ಎನ್ ಸಿಪಿ ಮುಖ್ಯಸ್ಥ ಶರದ್ ಪವಾರ್ ವಾಗ್ದಾಳಿ ನಡೆಸಿದ್ದಾರೆ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನೀಡಿದ ಸಂವಿಧಾನಕ್ಕೆ ಬೆದರಿಕೆ ಹಾಕಲು ಪ್ರಯತ್ನಿಸುತ್ತಿದ್ದಾರೆ, ಬಿಜೆಪಿಯ ನಾಯಕರು ತಮ್ಮ ಪಕ್ಷವು 400 ಸ್ಥಾನಗಳನ್ನು ಪಡೆದರೆ ಸಂವಿಧಾನವನ್ನು ಬದಲಾಯಿಸುತ್ತದೆ ಎಂದು ಹೇಳಿದ್ದರು ಅದಕ್ಕೆ ದೇಶದ ಜನರು ಪಾಠ ಕಲಿಸಿದ್ದಾರೆ ಎಂದಿದ್ದಾರೆ.


ಸುದ್ದಿಗಾರೊಂದಿಗೆ ಮಾತನಾಡಿದ ಅವರು ಕೋರೆಗಾಂವ್ ಭೀಮಾ ಪ್ರಕರಣದ ಕುರಿತು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದು ಕೋಮುವಾದಿಗಳು ಇತಿಹಾಸವನ್ನು ಅಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. ಕೋರೆಗಾಂವ್ ಭೀಮಾ ಇತಿಹಾಸ ಅಳಿಸಲು ಕೆಲವು ಕೋಮುವಾದಿಗಳು ಪ್ರಯತ್ನಿಸುತ್ತಿದ್ದಾರೆ. ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿರುವ ಕೋರೆಗಾಂವ್ ಭೀಮಾ ಜನರು ಮಾಡಿದ ತ್ಯಾಗ, ಆದರೆ ಕೆಲವು ಕೋಮುವಾದಿಗಳು ಅದನ್ನು ಅಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

1818ರ ಕೋರೆಗಾಂವ್ ಭೀಮಾ ಯುದ್ಧದ ಸ್ಮರಣಾರ್ಥ ಪುಣೆಯಲ್ಲಿ 2017ರ ಡಿಸೆಂಬರ್ 31 ರಂದು ಆಯೋಜಿಸಲಾದ ಎಲ್ಗರ್ ಪರಿಷತ್ ಸಮಾವೇಶದ ಒಂದು ದಿನದ ನಂತರ ಹಿಂಸಾಚಾರ ಭುಗಿಲೆದ್ದ ನಂತರ ಎಲ್ಗರ್ ಪರಿಷತ್ತಿನ ಹಲವಾರು ಸದಸ್ಯರು ಮತ್ತು ಇತರ ದಲಿತ ಕಾರ್ಯಕರ್ತರನ್ನು ಬಂಧಿಸಿದ್ದ ಕ್ರಮದ ಬಗ್ಗೆ ಈ ಹೇಳಿಕೆ ನೀಡಿದ್ದಾರೆ.

# ಚೀನಾದ ಸೂಪರ್ ಮಾರ್ಕೆಟ್ ನಲ್ಲಿ ದುಷ್ಕರ್ಮಿಯಿಂದ ದಾಳಿ, ಮೂವರು ಸಾವು, 15 ಮಂದಿ ಗಾಯ

**ಶಾಂಘೈ:** ಚೀನಾದ ಅತಿ ದೊಡ್ಡ ನಗರ ಶಾಂಘೈನಲ್ಲಿರುವ ಸೂಪರ್ ಮಾರ್ಕೆಟ್‌ನಲ್ಲಿ ಚಾಕು ಹಿಡಿದ ದುಷ್ಕರ್ಮಿಯೊಬ್ಬ ದಾಳಿ ನಡೆಸಿದ ಪರಿಣಾಮ ಮೂವರು ಸಾವನ್ನಪ್ಪಿ ಸುಮಾರು 15 ಮಂದಿ ಗಾಯಗೊಂಡಿದ್ದಾರೆ. ಚೀನಾದ 75ನೇ ರಾಷ್ಟ್ರೀಯ ದಿನಾಚರಣೆಯ ಮುನ್ನಾದಿನದಂದು, ಈ ಘಟನೆ ಸಂಭವಿಸಿದೆ. ಕಳೆದ ರಾತ್ರಿ 9.47 ಕ್ಕೆ (ಸ್ಥಳೀಯ ಕಾಲಮಾನ) ಘಟನೆ ನಡೆದಿದ್ದು ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿದರು ಆತಂಕದ ವಾತಾವರಣವನ್ನು ತಿಳಿಗೊಳಿಸಿದ್ದಾರೆ ಎಂದು ಸರ್ಕಾರಿ ಸುದ್ದಿ ಸಂಸ್ಥೆ ಕ್ಸಿನ್ಹುವಾ ವರದಿ ಮಾಡಿದೆ.

ದಾಳಿಕೋರನನ್ನು ಲಿಂಬ 37 ವರ್ಷದ ವ್ಯಕ್ತಿಯಾಗಿದ್ದು ಪೊಲೀಸರು ಆತನನ್ನು ಬಂಧಿಸಿದ್ದಾರೆ. ಆರೋಪಿ ಚಾಕು ಹಿಡಿದ ಸೂಪರ್ ಮಾರ್ಕೆಟ್‌ನಲ್ಲಿ ಸುತ್ತಾಡುತ್ತಿರುವ ಫೋಟೋಗಳನ್ನು ಸಾಮಾಜಿಕ ಮಾಧ್ಯಮಗದಲ್ಲಿ ಹರಿದಾಡಿದೆ. ಸುಮಾರು ಹದಿನೆಂಟು ಜನರಿಗೆ ಆತ ಚಾಕುವಿನಿಂದ ಇರಿದಿದ್ದು ಅದರಲ್ಲಿ ಮೂವರು ಮೃತಪಟ್ಟಿದ್ದಾರೆ.ಇತರರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ




ದಾಖಲಿಸಲಾಗಿದೆ ಎಂದು ಕ್ಸಿನ್ಹುವಾ ವರದಿ ತಿಳಿಸಿದೆ. ಶಾಂಘೈ ಪೊಲೀಸರ ಹೇಳಿಕೆಯ ಪ್ರಕಾರ, ಲಿನ್ ವೈಯಕ್ತಿಕ ಹಣಕಾಸಿನ ವಿವಾದಗಳಿಂದ ಕೋಪಗೊಂಡು ಶಾಂಘೈಗೆ ಬಂದು ಈ ಕೃತ್ಯ ನಡೆಸಿದಾನೆ ಆದರೆ ಈತನ ಮೂಲ ಸ್ಥಳವನ್ನು ಪೊಲೀಸರು ಬಹಿರಂಗಪಡಿಸಿಲ್ಲ. ಇಂದು 75ನೇ ರಾಷ್ಟ್ರೀಯ ದಿನವನ್ನು ವಾರವಿಡೀ ರಜೆಯೊಂದಿಗೆ ಆಚರಿಸಲು ಚೀನಾ ಸಜ್ಜಾಗುತ್ತಿರುವಾಗ ನಿನ್ನೆ ರಾತ್ರಿ ದಾಳಿ ನಡೆದಿದೆ.

# ಜೈಶಂಕರ್–ಬ್ಲಿಂಕೆನ್ ಮಹತ್ವದ ಮಾತುಕತೆ

**ವಾಷಿಂಗ್ಟನ್:** ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರನ್ನು ವಾಷಿಂಗ್ಟನ್ ಡಿಸಿಯಲ್ಲಿ ಭೇಟಿಯಾದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಪ್ರಾದೇಶಿಕ ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಚರ್ಚಿಸಿದರು.

ಉಭಯ ರಾಷ್ಟ್ರಗಳು ಒಟ್ಟಾಗಿ, ಪ್ರಾದೇಶಿಕ ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು ಯುಎಸ್‌ಮತ್ತು ಭಾರತವು ಕಾರ್ಯನಿರ್ವಹಿಸುತ್ತಿವೆ. ವಿದೇಶಾಂಗ ವ್ಯವಹಾರಗಳ ಸಚಿವ ಡಾ ಎಸ್ ಜೈಶಂಕರ್ ಮತ್ತು ನಾನು ಹವಾಮಾನ ಬಿಕ್ಕಟ್ಟು ಮತ್ತು ಪ್ರಾದೇಶಿಕ ಭದ್ರತೆ ಮತ್ತು ಸಮದ್ಧಿಯನ್ನು ಉತ್ತೇಜಿಸುವ ಮಾರ್ಗಗಳ ಕುರಿತು ನಮ ನಿರಂತರ ಸಹಕಾರವನ್ನು ಚರ್ಚಿಸಲು ಭೇಟಿಯಾದೆವು ಎಂದು ಬ್ಲಿಂಕೆನ್ ಹೇಳಿದ್ದಾರೆ. ಏತನಧ್ಯೆ, ಜೈಶಂಕರ್ ಅವರು ವಾಷಿಂಗ್ಟನ್ ಡಿಸಿಯಲ್ಲಿ ಬ್ಲಿಂಕನ್ ಅವರೊಂದಿಗೆ ಮಾತುಕತೆ ನಡೆಸಲು ಸಂತೋಷವಾಗಿದೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾದೆ ಎಂದು ಹೇಳಿಕೊಂಡಿದ್ದಾರೆ. ಯುಎಸ್ ಸ್ಟೇಟ್ ಡಿಪಾರ್ಟ್‌ಮೆಂಟ್ ವಕ್ತಾರ ವ್ಯಾಥ್ಯೂ ಮಿಲ್ಲರ್ ಪ್ರಕಾರ, ಜೈಶಂಕರ್ ಮತ್ತು ಬ್ಲಿಂಕೆನ್ ಅವರು ದ್ವಿಪಕ್ಷೀಯ ಸಂಬಂಧಗಳನ್ನು ಗಾಢವಾಗಿಸಲು, ಪ್ರಾದೇಶಿಕ ಮತ್ತು ಜಾಗತಿಕ ಸವಾಲುಗಳ ಮೇಲೆ ನಿಕಟವಾಗಿ ಸಮನ್ವಯಗೊಳಿಸಲು ಮತ್ತು ನಿರ್ಣಾಯಕ ಮತ್ತು ಉದಯೋನುಖ ತಂತ್ರಜ್ಞಾನಗಳ ಮೇಲೆ ಸಹಕಾರವನ್ನು ಮುಂದುವರಿಸಲು ಯುನೈಟೆಡ್ ಸ್ಟೇಟ್ಸ್ ಮತ್ತು ಭಾರತದ ನಿರಂತರ ಬದ್ಧತೆಯನ್ನು ಚರ್ಚಿಸಿದ್ದಾರೆ.



## ಕ್ವಾಡ್ ನಾಯಕರ ಶೃಂಗಸಭೆ

**ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಅವರೊಂದಿಗಿನ ದ್ವಿಪಕ್ಷೀಯ ಸಭೆಯನ್ನು ಉಲ್ಲೇಖಿಸಿ ಸಚಿವರು ಈ ಹೇಳಿಕೆ ನೀಡಿದ್ದಾರೆ. ಸೆಪ್ಟೆಂಬರ್ 21ರಂದು ದ್ವಿಪಕ್ಷೀಯ ಸಭೆಗಾಗಿ ಅಮೆರಿಕ ಅಧ್ಯಕ್ಷರು ಮೋದಿಯನ್ನು ಡೆಲವೇರ್ ನಿವಾಸದಲ್ಲಿ ಆತಿಥ್ಯವಹಿಸಿದರು. ನಂತರ ಡೆಲವೇರ್‌ನ ವಿಲಿಂಗ್ಟನ್‌ನಲ್ಲಿ ನಡೆದ ಕ್ವಾಡ್ ನಾಯಕರ ಶಂಗಸಭೆಯಲ್ಲಿ ಆಸ್ಟ್ರೇಲಿಯಾ ಮತ್ತು ಜಪಾನ್‌ನ ನಾಯಕರು ಅವರೊಂದಿಗೂ ಮಾತುಕತೆ ನಡೆಸಿದ್ದರು.**

## ಮಿನಿ ನ್ಯೂಸ್

### ರಾಜಸ್ಥಾನದಲ್ಲಿ ರೈಲು ನಿಲ್ದಾಣ ಹಲವಾರು ಗಳನ್ನು ಸ್ಫೋಟಿಸುವ ಬೆದರಿಕೆ

**ಜೈಪುರ:** ರಾಜಸ್ಥಾನದ ಹಲವಾರು ರೈಲು ನಿಲ್ದಾಣಗಳು ಮತ್ತು ಇತರ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವ ಬೆದರಿಕೆ ಕರೆಗಳು ಬಂದಿವೆ. ರೈಲು ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬಾಂಬ್ ಸ್ಫೋಟಗಳ ಬೆದರಿಕೆ ಪತ್ರವು ಹನುಮಾನ್‌ಗಢ್ ರೈಲು ನಿಲ್ದಾಣಕ್ಕೆ ಬಂದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಂಗಾನಗರ, ಹನುಮಾನ್‌ಗಢ, ಜೋಧ್‌ಪುರ, ಬಿಕಾನೇರ್, ಕೋಟಾ, ಬುಂಡಿ, ಉದಯಪುರ, ಜೈಪುರದ ರೈಲ್ವೆ ನಿಲ್ದಾಣ ಮತ್ತಿತರ ಸ್ಥಳಗಳನ್ನು ಅಕ್ಟೊಬರ್‌ನಲ್ಲಿ ಬಾಂಬ್ ಸ್ಫೋಟಿಸಲಾಗುವುದು ಎಂದು ಜೈಷ್–ಎ–ಮೊಹಮದ್ ಹೆಸರಿನಲ್ಲಿ ಬೆದರಿಕೆ ಪತ್ರ ಬರೆಯಲಾದೆ. ಜೈಶ್–ಎ–ಮೊಹಮದ್ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಯಾಗಿದೆ.

ಸರ್ಕಾರಿ ರೈಲ್ವೆ ಪೊಲೀಸ್ (ಜಿಆರ್‌ಪಿ), ಸ್ಥಳೀಯ ಪೊಲೀಸರು, ಬಿಎಸ್‌ಎಫ್ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಜಿಆರ್‌ಪಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ರ ಕಳುಹಿಸಿದವರ ಪತ್ತೆಗಾಗಿ ತನಿಖೆ ನಡೆಸಲಾಗುತ್ತಿದೆ.

### ಅತ್ಯಾಚಾರ ಆರೋಪಿ ರಾಮ್ ರಹೀಮ್‌ಗೆ ಮತ್ತೆ ಪೆರೋಲ್

**ಚಂಡೀಗಢ:** ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಮತ್ತು ಅತ್ಯಾಚಾರ ಆರೋಪಿ ಗುರ್ಮೀತ್ ರಾಮ್ ರಹೀಮ್ ಸಿಂಗ್ ಅವರು 20 ದಿನಗಳ ಪೆರೋಲ್ ಮಂಜೂರು ಮಾಡಿದ ನಂತರ ಹರಿಯಾಣದ ರೋಹ್ಟಕ್‌ನಲ್ಲಿರುವ ಸುನಾರಿಯಾ ಜೈಲಿನಿಂದ ಹೊರ ಬಂದಿದ್ದಾರೆ.

ಅವರ ತಾತ್ಕಾಲಿಕ ಬಿಡುಗಡೆ ಅವಧಿಯಲ್ಲಿ ಸಿಂಗ್ ಉತ್ತರ ಪ್ರದೇಶದ ಬಾಗ್‌ಪತ್‌ನ ಬರ್ನಾವಾದಲ್ಲಿರುವ ಡೇರಾ ಆಶ್ರಮದಲ್ಲಿ ಉಳಿಯಲಿದ್ದಾರೆ. ಪೆರೋಲ್ ಮೇಲೆ ಬಿಡುಗಡೆಯಾದ ಬಳಿಕ ಬೆಳಗ್ಗೆ ಅವರು ಬಿಗಿ ಭದ್ರತೆಯಲ್ಲಿ ಜೈಲಿನಿಂದ ಹೊರಬಂದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹರಿಯಾಣ ಸರ್ಕಾರವು ಸಿಂಗ್ ಅವರಿಗೆ 20 ದಿನಗಳ ಪೆರೋಲ್ ನೀಡಿದ್ದು, ಚುನಾವಣಾ ಸಂಬಂಧಿತ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ, ಭಾಷಣ ಮಾಡುವುದನ್ನು ಮತ್ತು ಅವಧಿಯಲ್ಲಿ ರಾಜ್ಯದಲ್ಲಿ ಉಳಿಯುವುದನ್ನು ನಿರ್ಬಂಧಿಸಿದೆ.

2017ರಲ್ಲಿ ತನ್ನ ಇಬ್ಬರು ಶಿಷ್ಯರ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ಸಿಂಗ್ 20 ವರ್ಷಗಳ ಶಿಕ್ಷೆ ಅನುಭವಿಸುತ್ತಿದ್ದಾರೆ. 16 ವರ್ಷಗಳ ಹಿಂದೆ ಪತ್ರಕರ್ತನ ಹತ್ಯೆಗೆ 2019ರಲ್ಲಿ ಡೇರಾ ಮುಖ್ಯಸ್ಥ ಮತ್ತು ಇತರ ಮೂವರಿಗೆ ಶಿಕ್ಷೆ ವಿಧಿಸಲಾಯಿತು. ಅಕ್ಟೋಬರ್ 5 ರಂದು ನಡೆಯಲಿರುವ ಹರಿಯಾಣ ವಿಧಾನಸಭಾ ಚುನಾವಣೆಗೆ ಮುನ್ನ ಅವರು 20 ದಿನಗಳ ಪೆರೋಲ್ ಕೋರಿದ್ದರು. ಪೆರೋಲ್ ಷರತ್ತುಗಳ ಪ್ರಕಾರ, ಪಂಥದ ಮುಖ್ಯಸ್ಥರು ಯಾವುದೇ ಚುನಾವಣಾ–ಸಂಬಂಧಿತ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ ಅಥವಾ ಸಾರ್ವಜನಿಕ ಭಾಷಣಗಳನ್ನು ಮಾಡುವುದಿಲ್ಲ.

### ಜಪಾನ್ ಪ್ರಧಾನಿ –ಫ್ಯೂಮಿಯೊ ಕಿಶಿಡಾ ರಾಜೀನಾಮೆ

**ಟೋಕಿಯೊ:** ಜಪಾನ್ನ ಪ್ರಧಾನಿ –ಫ್ಯೂಮಿಯೊ ಕಿಶಿಡಾ ಅವರು ತಮ್ಮ ಸಂಪುಟದೊಂದಿಗೆ ರಾಜೀನಾಮೆ ನೀಡಿದ್ದಾರೆ. ಕ್ಯಾಬಿನೆಟ್ ಸಭೆ ನಡೆಸಿದ ಕಿಶಿದಾ ಅವರು ಚರ್ಚೆ ನಡೆಸಿ ನಂತರ ಸಂಪುಟ ಸಚಿವರೊಂದಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಮುಖ್ಯ ಕ್ಯಾಬಿನೆಟ್ ಕಾರ್ಯದರ್ಶಿ ಯೋಶಿಮಾಸಾ ಹಯಾಶಿ ಘೋಷಿಸಿದ್ದಾರೆ. ಉತ್ತರಾಧಿಕಾರಿ ಶಿಗೆರು ಇಶಿಬಾ ಅವರು ಅಧಿಕಾರ ವಹಿಸಿಕೊಳ್ಳಲು ದಾರಿ ಮಾಡಿಕೊಟ್ಟದ್ದಾರೆ.

ಈಗಾಗಲೆ ಲಿಬರಲ್ ಡೆಮಾಕ್ರಟಿಕ್ ಪಕ್ಷದ ನಾಯಕಿಯಾಗಿ ಇಶಿಬಾ ಆಯ್ಕೆಯಾಗಿದ್ದು ಸಂಸತ್ತಿನ ಮತದಾನದ ನಂತರ ದೇಸದ ಮೊದಲ ಮಹಿಳಾ ಪ್ರಧಾನಿ ಎಂಬ ಹೆಗ್ಗಳಿಕೆ ಪಾತ್ರವಾಗಲಿದ್ದಾರೆ.

ತಮ್ಮ ಅಧಿಕಾರಾವಧಿ ಮೂರು ವರ್ಷ ಕೊನೆಗೊಳ್ಳುವ ಮೊದಲೇ ತಮ್ಮ ರಾಜೀನಾಮೆಯನ್ನು ಒಂದು ತಿಂಗಳ ಹಿಂದೆಯೇ ಘೋಷಿಸಿದರು. 2021ರಲ್ಲಿ ಕಿಶಿದಾ ಅಧಿಕಾರ ವಹಿಸಿಕೊಂಡಿದ್ದರು ಆದರೆ ಅವರ ಆಡಳಿತದಲ್ಲಿ ಹವವಾರುಹಗರಣಗಳು ಕೇಳಿಬಂದ ಹಿನ್ನಲೆಯಲ್ಲಿ ಅವರನ್ನು ಪ್ರಧಾನಿ ಪಟ್ಟದಿಂದ ಕಿಳಗಿಳಿಸಲು ಲಿಬರಲ್ ಪಕ್ಷವು ನಿರ್ಧರಿಸಿತ್ತು,ಹೊಸ ನಾಯಕಿಯನ್ನು ಪರಿಚಯಿಸಿದೆ.

ಇಶಿಬಾ ಅವರು ಔಪಚಾರಿಕವಾಗಿ ಪ್ರಧಾನಿ ಸ್ಥಾನಕ್ಕೆ ಆಯ್ಕೆಯಾದ ನಂತರ ಅ.27 ರಂದು ಸಂಸತ್ತಿನ ಬಹುಮತ ಸಾಭೀತಿಗೆ ಅಧಿವೇಶನ ಕರೆಯಲು ಯೋಜಿಸಿದ್ದಾರೆ ಮತ್ತು ನಂತರ ತಮ್ಮ ಹೊಸ ಕ್ಯಾಬಿನೆಟ್ ಸಚಿವರನ್ನು ಘೋಷಿಸುತ್ತಾರೆ. ಹೊಸ ಆಡಳಿತವು ಸಾಧ್ಯವಾದಷ್ಟು ಬೇಗ ದೇಶದ ಜನರ ತೀರ್ಪು ಪಡೆಯುವುದು ಮುಖ್ಯ ಎಂದು ನಾನು ನಂಬುತ್ತೇನೆ ಎಂದು ಇಶಿಬಾ ಹೇಳಿದರು. ಕಳೆದ 1986 ರಲ್ಲಿ ಸಂಸತ್ತಿಗೆ ಮೊದಲ ಬಾರಿಗೆ ಚುನಾಯಿತರಾದ ಇಶಿಬಾ ಅವರು ರಕ್ಷಣಾ ಸಚಿವರಾಗಿ, ಕೃಷಿ ಸಚಿವರಾಗಿ ಮತ್ತು ಇತರ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಅಡಿಯಲ್ಲಿ ಲಿಬರಲ್ ಡೆಮಾಕ್ರಟಿಕ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ ರಾಜಕೀಯದಲ್ಲಿ ಅನುಭವ ಹೊಂದಿದ್ದಾರೆ.

### ಥೈಲ್ಯಾಂಡ್‌ನಲ್ಲಿ ಶಾಲಾ ಬಸ್‌ಗೆ ಬೆಂಕಿ, 25 ವಿದ್ಯಾರ್ಥಿಗಳು ಸಾವು

**ಥೈಲ್ಯಾಂಡ್:** 44 ಮಕ್ಕಳನ್ನು ಹೊತ್ತೊಯ್ಯುತ್ತಿದ್ದ ಶಾಲಾ ಬಸ್ ಬೆಂಕಿಯಿಂದ ಹೊತ್ತಿ ಉರಿದಿದ್ದು ಪರಿಣಾಮ 25 ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ. ರಕ್ಷಣಾ ಸಿಬ್ಬಂದಿ ಬೆಂಕಿಯನ್ನು ನಂದಿಸಲು ಪ್ರಯತ್ನಿ ಸುತ್ತಿರುವಾಗ ಹೆಚ್ಚಿನ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ.

ಬೆಂಕಿಯ ಕಾರಣ ಇದುವರೆಗೆ ತಿಳಿದಿಲ್ಲ. ಸ್ಥಳೀಯ ಕಾಲಮಾನ ಮಧ್ಯಾಹ್ನ 12.30ರ ಸುಮಾರಿಗೆ ಥೈಲ್ಯಾಂಡ್‌ನ ರಂಗ್‌ಸಿಟ್ ಶಾಪಿಂಗ್ ಮಾಲ್ ಬಳಿಯ ಫಾಹೋನ್ ಯೋಥಿನ್ ರಸ್ತೆಯಲ್ಲಿ ಅವಡ ಸಂಭವಿಸಿದೆ. ಲಾನ್ ಸಕ್ ಜಿಲ್ಲೆಯ ವಾಟ್ ಖಾವೊಪ್ರಾಯ ಸಂಘರಮ್‌ನಿಂದ ಆಯೋಜಿಸಲಾದ ಶೈಕ್ಷಣಿಕ ಪ್ರವಾಸದಲ್ಲಿ ಆರು ಶಿಕ್ಷಕರು ಸಹ ಭಾಗವಹಿಸಿದ್ದರು.

ಅವರ ಬಗ್ಗೆ ಮಾಹಿತಿ ಇದುವರೆಗೂ ಲಭ್ಯವಾಗಿಲ್ಲ. ಗೃಹ ಸಚಿವ ಅನುತಿನ್ ಚರಣ್ವಿರಾಕುಲ್ ಅವರು ಘಟನಾ ಸ್ಥಳದಲ್ಲಿ ತನಿಖೆಯನ್ನು ಪೂರ್ಣಗೊಳಿಸದ ಕಾರಣ ಸಾವಿನ ಸಂಖ್ಯೆಯನ್ನು ಅಧಿಕಾರಿಗಳು ಇನ್ನೂ ಖಚಿತಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಆದರೆ ಬದುಕುಳಿದವರ ಸಂಖ್ಯೆಯನ್ನು ಆಧರಿಸಿ, 25 ಜನರು ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿರುವ ವಿಡಿಯೋದಲ್ಲಿ ಇಡೀ ಬಸ್ ಬೆಂಕಿಗೆ ಆಹುತಿಯಾಗಿರುವುದು ಕಂಡು ಬಂದಿದೆ. ರಸ್ತೆಯಲ್ಲಿ ನಿಲ್ಲಿಸಿದ ಬಸ್ಸಿನ ಹೊರಗೆ ಕಪ್ಪು ಹೊಗೆಯು ಕಾಣಿಸಿಕೊಂಡಿತ್ತು, ಸದ್ಯ ವಿದ್ಯಾರ್ಥಿಗಳ ವಯಸ್ಸು ತಿಳಿದುಬಂದಿಲ್ಲ.



# ನವೆಂಬರ್‌ನಲ್ಲಿ ಆರಾಮ್ ಅರವಿಂದ ಸ್ವಾಮಿ ಸಿನಿಮಾ ಬಿಡುಗಡೆ


ಆರಾಮ್ ಅರವಿಂದ ಸ್ವಾಮಿ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ನವೆಂಬರ್‌ನಲ್ಲಿ ಚಿತ್ರ ತೆರೆಕಾಣಲಿದೆ. ಅಭಿಷೇಕ್ ಶೆಟ್ಟಿ ಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿದ್ದಾರೆ. ನವೆಂಬರ್22 ರಂದು ಸಿನಿಮಾ ತೆರೆದೆ ಬರಲಿದೆ ಎಂದು, ಚಿತ್ರತಂಡ ತಿಳಿಸಿದೆ. ಅನೀಶ್‌ಗೆ ಮಿಲನಾ ನಾಗರಾಜ್ ಹಾಗೂ ಹೃತಿಕ ಶ್ರೀನಿವಾಸ್ ಜೋಡಿಯಾಗಿದ್ದು, ಚಿತ್ರದಲ್ಲಿ ಹೃತಿಕಾ ಶ್ರೀನಿವಾಸ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರಕ್ಕೆ ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಸಂಗೀತ ನೀಡಿದ್ದು, 'ಅಕಿರ' ಸಿನಿಮಾ ನಿರ್ಮಿಸಿದ್ದ ಶ್ರೀಕಾಂತ್ ಪ್ರಸನ್ನ, ಗುಳ್ಟು ಸಿನಿಮಾ ನಿರ್ಮಾಪಕ ಪ್ರಶಾಂತ್ ರೆಡ್ಡಿ ಸೇರಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ವೈವಿಬಿ ಶಿವಸಾಗರ್ ಅವರ ಛಾಯಾಗ್ರಹಣ, ಉಮೇಶ್ ಆರ್.ಬಿ ಸಂಕಲನ ಈ ಸಿನಿಮಾಗಿದೆ.

# ಕಾಂತಾರ ಸಿನಿಮಾಗೆ 2 ವರ್ಷಗಳ ಸಂಭ್ರಮ: ಕುತೂಹಲ ಹೆಚ್ಚಿಸಿದ ಪ್ರೀಕ್ವೆಲ್



ರಿಷಬ್ ಶೆಟ್ಟಿ ಕಾಂತಾರ ಚಿತ್ರವು ಕನ್ನಡ ಪ್ರೇಕ್ಷಕರನ್ನು ಮೋಡಿಮಾಡಿದ್ದು ಮಾತ್ರವಲ್ಲದೆ ಬಹು ಭಾಷೆಗಳಲ್ಲಿ ಸಿನಿಮಾ ಪ್ರಿಯರನ್ನು ರಂಜಿಸುವುದರ ಜೊತೆಗೆ ಬ್ಲಾಕ್ ಬಸ್ಟರ್ ಸಿನಿಮಾವಾಗಿ ಹೊರಹೊಮ್ಮಿದೆ. ಕೇವಲ 16 ಕೋಟಿಗಳ ಸಾಧಾರಣ ಬಜೆಟ್‌ನಲ್ಲಿ ತಯಾರಾದ ಚಿತ್ರವು ಬಾಕ್ಸ್ ಆಫೀಸ್‌ನಲ್ಲಿ 460 ಕೋಟಿ ಕಲೆಕ್ಷನ್ ಮಾಡಿದೆ. ಕಾಂತಾರ ಸಿನಿಮಾ ಬಿಡುಗಡೆಯಾಗಿ ಸೆಪ್ಟೆಂಬರ್ 30 ರಂದು ತನ್ನ ಎರಡನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ, ಇದೇ ವೇಳೆ ಹೊಂಬಾಳೆ ಫಿಲಂಸ್ ನಿರ್ಮಾಪಕ ವಿಜಯ್ ಕಿರಗಂದೂರು ಈ ಅಸಾಮಾನ್ಯ ಪ್ರಯಾಣದ ಬಗ್ಗೆ ಹಂಚಿಕೊಂಡಿದ್ದಾರೆ. ನಮ್ಮ ಹೃದಯಕ್ಕೆ ಹತ್ತಿರವಾದ ವಿಶೇಷ ಚಲನಚಿತ್ರ. ಅದನ್ನು ದೈವಿಕ ವಿದ್ಯಮಾನವಾಗಿ ಪರಿವರ್ತಿಸಿದ ಅದ್ಭುತ ಪ್ರೇಕ್ಷಕರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು ಎಂದಿದ್ದಾರೆ. ಚಿತ್ರದ ಯಶಸ್ಸನ್ನು ಅಂಕಿಅಂಶಗಳು ಮಾತ್ರವಲ್ಲದೆ ಅದು ಪಡೆದ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯಲ್ಲಿ ಅಳೆಯಲಾಗುತ್ತದೆ, ಪ್ರಶಸ್ತಿಗಳು ಅದರ ಸಾಧನೆಗಳಿಗೆ ಕಿರೀಟವನ್ನು ನೀಡುತ್ತದೆ. ಕಾಂತಾರ ಸಿನಿಮಾಗೆ ಪುರಸ್ಕಾರಗಳ ಮಹಾಪೂರವೇ ಹರಿದುಬರುತ್ತಿದ್ದು, ಅಕ್ಟೋಬರ್ 8ರಂದು ರಾಷ್ಟ್ರ ಪ್ರಶಸ್ತಿ ಸ್ವೀಕರಿಸಲು ತಂಡ ಸಜ್ಜಾಗಿದೆ. ಆದರೆ ಉತ್ಸಾಹ ಅಲ್ಲಿಗೆ ಮುಗಿಯುವುದಿಲ್ಲ. ಈ ಮಹಾಕಾವ್ಯದ ಮುಂದಿನ ಅಧ್ಯಾಯದ ತಯಾರಿಕೆಯಲ್ಲಿ ಅರ್ಧದಾರಿಯಲ್ಲೇ ಇದ್ದೇವೆ ಎಂದು ಹಂಚಿಕೊಳ್ಳಲು ನಿರ್ಮಾಣ ಸಂಸ್ಥೆ ಥ್ರಿಲ್ ಆಗಿದೆ. ಈ ದಂತಕತೆಯ ಮುಂದಿನ ಅಧ್ಯಾಯವನ್ನು ಪ್ರಾರಂಭಿಸಲು ನಾವು ಉತ್ಸುಕರಾಗಿದ್ದೇವೆ, ಕಾಂತಾರ ಅಧ್ಯಾಯ 1 ಶೀಘ್ರದಲ್ಲೇ ನಿಮ್ಮೆಲ್ಲರ ಮುಂದೆ ತರುತ್ತೇವೆ ಎಂದಿದ್ದಾರೆ. ಕಾಂತಾರ ಚಿತ್ರವನ್ನು ನಿರ್ದೇಶಿಸಿದ, ಸಹ-ಕಥೆಗಾರ ಮತ್ತು ನಟಿಸಿದ ರಿಷಬ್ ಶೆಟ್ಟಿ ಪ್ರಸ್ತುತ ಚಿತ್ರದ ಪೂರ್ವಭಾಗದ ಮೇಲೆ ಕೇಂದ್ರೀಕರಿಸಿದ್ದಾರೆ.

# ಪ್ರಾಪ್ತಿ ಸಿನಿಮಾ: ವರ್ತಮಾನಕ್ಕೆ ಹಿಡಿದ ಕನ್ನಡಿ



ಬಣ್ಣದ ಲೋಕ ಎಂಥವರನ್ನು ಸೆಳೆಯುತ್ತದೆ ಎಂಬುದಕ್ಕೆ ಡಾ.ಎಸ್.ಮಹೇಶ್ ಬಾಬು ಸಾಕ್ಷಿಯಾಗುತ್ತಾರೆ. ಇವರ ಕುರಿತು ಹೇಳುವುದಾದರೆ, ಊಟಿ ಮೂಲದವರಾಗಿದ್ದು ಚಿಕ್ಕಂದಿನಿಂದಲೇ ಸಿನಿಮಾದ ಮೇಲೆ ಆಸಕ್ತಿ ಒಲಿದಿದೆ. ಮುಂದೆ ಉನ್ನತ ಶಿಕ್ಷಣ ಮುಗಿಸಿ, ಸದ್ಯ ಬೆಂಗಳೂರಿನಲ್ಲಿ ರೆಕಾರ್ಡಿಂಗ್ ಸ್ಟುಡಿಯೋ, ಸಂಸ್ಥೆ ನಡೆಸುತ್ತಿದ್ದು, ವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿಂದೆ ಬಡಗ ಜಾತಿಯ ಬಗ್ಗೆ ಚಿತ್ರ ಮಾಡಿದ್ದರು. ಗ್ಯಾಪ್ ನಂತರ ಈಗ ಪ್ರಾಪ್ತಿ ಸಿನಿಮಾಕ್ಕೆ ಕಥೆ,ಚಿತ್ರಕಥೆ,ಸಂಭಾಷಣೆ,ಸಂಗೀತ, ಸಂಕಲನ, ನಿರ್ದೇಶನ ಜತೆಗೆ ಸಿಸಿ ಕ್ರಿಯೇಶನ್ಸ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ವಿಧಿ ನಿಗದಿಯಾಗಿದೆ ಎಂಬ ಅಡಿಬರಹವಿದೆ.

ಸೆನ್ಸಾರ್‌ನವರು ಪ್ರಶಂಸೆ ವ್ಯಕ್ತಪಡಿಸಿ ಯುಎ ಪ್ರಮಾಣ ಪತ್ರ ನೀಡಿದ್ದಾರೆ. ಪ್ರಚಾರದ ಮೊದಲ ಹಂತವಾಗಿ ಟ್ರೇಲರ್, ಮೂರು ಹಾಡುಗಳ ಬಿಡುಗಡೆ ಸಮಾರಂಭ ರೇಣುಕಾಂಬ ಸ್ಟುಡಿಯೋದಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಮಾತನಾಡಿ ತುಣುಕುಗಳು ಕುತೂಹಲ ಮೂಡಿಸುತ್ತದೆ. ತಮಿಳು ಭಾಷೆಯವರಾಗಿದ್ದರೂ ಕನ್ನಡದ ಮೇಲಿನ ಅಭಿಮಾನದಿಂದ ಬಂಡವಾಳ ಹೂಡಿದ್ದಾರೆ.

ನಿರ್ಮಾಪಕರು ಎಲ್ಲಿಂದ ಬಂದರು ಅಂತ ಮುಖ್ಯವಾಗಿರುವುದಿಲ್ಲ. ಯಾವ ಭಾಷೆಯ ಚಿತ್ರ ಮಾಡಿದ್ದಾರೆಂದು ನೋಡಬೇಕು. ಇಂತಹವರ ಅವಶ್ಯಕತೆ ಉದ್ಯಮಕ್ಕೆ ಬೇಕಾಗಿದೆ ಎಂದರು. ಇದೇ ಸಂದರ್ಭದಲ್ಲಿ ವಿಕ್ಟರಿವಾಸು, ಆಡುಗೋಡಿ ಶ್ರೀನಿವಾಸ್ ಉಪಸ್ಥಿತರಿದ್ದರು. ನಿರ್ದೇಶಕರು ಹೇಳುವಂತೆ ಈಗಿನ ಕಾಲಮಾನದಲ್ಲಿ ನಡೆಯುತ್ತಿರುವ ಮೂರು ಅಂಶಗಳನ್ನು ಬಳಸಿಕೊಂಡು, ಸಂದೇಶದ ಮೂಲಕ ತೋರಿಸುವ ಪ್ರಯತ್ನ ಮಾಡಲಾಗಿದೆ. ಮೊದಲನೆಯದಾಗಿ ಹೆಚ್ಚುವರಿ ವೈವಾಹಿಕ ಸಂಬಂಧಗಳು ಇದರಿಂದ ಪತಿ-ಪತ್ನಿ ನಡುವೆ ಬಿರುಕು ಬಂದು ವಿಚ್ಛೇದನಕ್ಕೆ ಅರ್ಜಿ ಹಾಕುತ್ತಿದ್ದಾರೆ. ಎರಡನೆಯದು ಆಕರ್ಷಣೆ ಇಂತಹುದು ಹೆಚ್ಚಾಗಿ ಸಣ್ಣ ಹುಡುಗರು, ಹುಡುಗಿಯರಲ್ಲಿ ಕಂಡು ಬರುತ್ತದೆ. ಇವರುಗಳು ದೊಡ್ಡವರ ಮೇಲೆ ಆಸೆ ಪಡುವುದು. ಇದಕ್ಕೆ ಪೋಷಕರು, ಸ್ನೇಹಿತರು ಕಾರಣರಾಗಿರುವುದಿಲ್ಲ. ಮಾನಸಿಕವಾಗಿ ಕುಗ್ಗುತ್ತಾರೆ. ಕೊನೆಯದಾಗಿ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವುದು. ಅಂದರೆ ನೃತ್ಯ ಅದರಲ್ಲೂ ಭರತನಾಟ್ಯ ವಿಶ್ವದಲ್ಲೆಡೆ ಪ್ರಚಲಿತವಾಗಿದೆ. ಇವೆಲ್ಲವು ಸ್ಟೆಸ್ಪೆನ್ಸ್, ಥ್ರಿಲ್ಲರ್ ಹಾಗೂ ತಿರುವುಗಳೊಂದಿಗೆ ಸಾಗುತ್ತದೆ. ಪ್ರಸಕ್ತ ತಲೆಮಾರಿನವರು ಇದರಿಂದ ಬದಲಾವಣೆ ಆಗಬೇಕು ಎಂಬುದು ಸನ್ನಿವೇಶಗಳ ಮೂಲಕ ಬರುತ್ತದೆಂದು ಹೇಳಿದರು.

# ಶೂಟಿಂಗ್ ಮುಕ್ತಾಯ: ಶೀಘ್ರವೇ ಸಿನಿಮಾ ಬಿಡುಗಡೆಗೆ ಸಿದ್ಧತೆ



ರೋಹಿತ್ ಕೀರ್ತಿ ನಿರ್ದೇಶನದ ಮತ್ತು ಪಿಬಿ ಪ್ರೇಮನಾಥ್ ನಿರ್ಮಾಣದ ಪಾರು ಪಾರ್ವತಿ ಚಿತ್ರದ ಶೂಟಿಂಗ್ ಮುಕ್ತಾಯಗೊಂಡಿದೆ. ಈ ಚಿತ್ರದಲ್ಲಿ ಬಿಗ್ ಬಾಸ್ ಸ್ಪರ್ಧಿ ದೀಪಿಕಾ ದಾಸ್, ಪೂನಂ ನಾಯಕ್ ಮತ್ತು ಫವಾಜ್ ಅಶ್ರಫ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗುತ್ತಿದ್ದು, ಶೀಘ್ರದಲ್ಲಿಯೇ ಬಿಡುಗಡೆಯಾಗುವ ನಿರೀಕ್ಷೆ ಇದೆ. ಇತ್ತೀಚೆಗೆ ಈ ಚಿತ್ರದ ಮೊದಲ ಪೋಸ್ಟರ್ ಬಹಳ ವಿಭಿನ್ನವಾಗಿ ಅನಾವರಣಗೊಂಡಿದೆ.ಈ ಪೋಸ್ಟರ್‌ಗೆ ಇನ್ಫಿನಿಟಿ ರೋಡ್ ಎಂಬ ಹೆಸರಿಡಲಾಗಿದೆ. ಟ್ರಾವೆಲ್, ಅಡ್ವೆಂಚರ್ ಡ್ರಾಮಾ ಕಥಾಹಂದರ ಹೊಂದಿರುವ ಈ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಅನ್ನು ಪ್ರಕೃತಿಯ ಮಡಿಲಲ್ಲೇ ಬಿಡುಗಡೆ ಮಾಡಿರುವುದು ವಿಶೇಷ. ಥಾರ್ ಬೆಂಗಳೂರು ಸಂಸ್ಥೆಯ ಸಹಯೋಗದೊಂದಿಗೆ ಇತ್ತೀಚೆಗೆ ಈ ಪೋಸ್ಟರ್ ಬಿಡುಗಡೆ ಸಮಾರಂಭ ನಡೆಯಿತು. ಪ್ರಕೃತಿ ಸಂರಕ್ಷಣೆಯ ಸಂದೇಶ ನೀಡಲು ಗಿಡ ನೆಡುವುದರ ಮೂಲಕ ಸಮಾರಂಭವನ್ನು ಇನ್ನಷ್ಟು ಅರ್ಥಪೂರ್ಣವಾಗಿ ನಡೆಸಿದರು.

# ತುಂಡುಡುಗೆ ಬಿಟ್ಟು ಸೀರೆಯಲ್ಲಿಯೇ ಕಾಣಿಸ್ಕೊಳ್ತಿದ್ದಾರೆ ನಿವೇದಿತಾ ಗೌಡ ಕೊನೆಗೂ ಬುದ್ಧಿ ಬಂತಾ?



ಬಿಗ್ ಬಾಸ್ ಮೂಲಕ ಕನ್ನಡ ಕಿರುತೆರೆಗೆ ಪರಿಚಿತರಾಗಿ, ತಮ್ಮ ಮದುವೆ, ಡಿವೋರ್ಸ್ ವಿಚಾರದಿಂದಲೇ ಸುದ್ದಿಯಲ್ಲಿರುವ ಸುದ್ದಿಯಲ್ಲಿರುವ ನಿವೇದಿತಾ ಗೌಡ, ಫೇಮಸ್ ಆಗಿರೋದು ತಮ್ಮ ರೀಲ್ಸ್ ವಿಡಿಯೋ ಮೂಲಕ. ಮಿನಿ ಡ್ರೆಸ್ ಧರಿಸಿ, ಹೆಜ್ಜೆ ಹಾಕ್ತಿದ್ರೆ, ನೆಟ್ಟಿಗರು ಮಾತ್ರ ಕೆಟ್ಟದಾಗಿ ಕಾಮೆಂಟ್ ಮಾಡೋದ್ರಲ್ಲೇ ಬ್ಯುಸಿಯಾಗಿರ್ತಾರೆ. ತಮ್ಮ ಟಿಕ್ ಟಾಕ್ ವಿಡಿಯೋಗಳಿಂದಲೇ ಫೇಮಸ್ ಆಗಿದ್ದ ನಿವೇದಿತಾ ಗೌಡ, ನಂತರ ಬಿಗ್ ಬಾಸ್ ಗೆ ಆಯ್ಕೆಯಾದ್ರು, ಅದರ ನಂತರ ಕನ್ನಡ ಕಿರುತೆರೆ ಪ್ರೇಕ್ಷಕರ ನಡುವೆ ನಿವೇದಿತಾ ಜನಪ್ರಿಯತೆ ಪಡೆದರು.

ಇದಾದ ನಂತರ ಗಿಚ್ಚಿ ಗಿಲಿಗಿಲಿ ಕಾರ್ಯಕ್ರಮದಲ್ಲೂ ಗೌಡ ಕಾಣಿಸಿಕೊಂಡರು. ಇತ್ತೀಚೆಗೆ ನಿವೇದಿತಾ ಗೌಡ ಫೇಮಸ್ ಆಗಿರೋದು ಗಂಡ ಚಂದನ್ ಗೌಡ ಜೊತೆಗಿನ ಡಿವೋರ್ಸ್ ವಿಷ್ಯದಿಂದ. ಬಿಗ್ ಬಾಸ್ ನಲ್ಲಿ ಜೊತೆಯಾಗಿದ್ದ ಈ ಜೋಡಿ, ನಂತ್ರ ಪ್ರೀತಿ ಮದ್ವೆಯಾದ್ರೂ, ಇಬ್ಬರು ಅವರವರ ಜೀವನದಲ್ಲಿ ಬ್ಯುಸಿಯಾದ ನಂತ್ರ ಅವರ ಜೀವನಕ್ಕೆ ಇವರು ಹೊಂದಿಕೊಳ್ಳಲು ಕಷ್ಟವಾಗಿ ಕೊನೆಗೂ ಅದು ಡಿವೋರ್ಸ್ ತನಕ ಬಂದಿತ್ತು.

ಅದಾದ ನಂತರ ನಟಿ ತಮ್ಮ ಇನ್‌ಸ್ಟಾಗ್ರಾಂನಲ್ಲಿನ ಫೋಟೊ, ವಿಡಿಯೋಗಳ ಮೂಲಕ ಹೆಚ್ಚು ಸದ್ದು ಮಾಡ್ತಿದ್ದಾರೆ. ತಮ್ಮ ಸಖತ್ ಬೋಲ್ಡ್ ಎನಿಸುವಂತಹ ಫೋಟೊ ಗಳನ್ನು ಹೆಚ್ಚಾಗಿ ಶೇರ್ ಮಾಡುವ ನಿವೇದಿತಾ, ಬೋಲ್ಡ್ ಆಗಿ ರೀಲ್ಸ್ ಕೂಡ ಮಾಡೋ ಮೂಲಕ ನೆಟ್ಟಿಗರ ಕೆಂಗಣ್ಣಿಗೆ ಗುರಿಯಾಗಿದ್ದರು. ನಿವೇದಿತಾ ಎಲ್ಲಾ ಫೋಟೊ ಹಾಗೂ ವಿಡಿಯೋಗಳಿಗೆ ತುಂಬಾನೆ ಕೆಟ್ಟದಾಗಿ ಜನ ಕಾಮೆಂಟ್ ಮಾಡುತ್ತಿದ್ದರು. ಒಂದೆರಡು ಪಾಸಿಟಿವ್ ಕಾಮೆಂಟ್‌ಗಳಿದ್ದರೆ, ಪೂರ್ತಿಯಾಗಿ ಕೆಟ್ಟ ಕಾಮೆಂಟ್‌ಗಳಿಂದಲೇ ತುಂಬಿ ರುತ್ತಿತ್ತು. ಇದೀಗ ಕೆಲ ದಿನಗಳಿಂದ ನಿವೇದಿತಾ ಸೋಶಿಯಲ್ ಮೀಡಿಯಾ ನೋಡಿದ್ರೆ, ಬುದ್ದಿ ಬಂತಾ ಇವಳಿಗೆ ಅಂತ ನೀವೇ ಹೇಳ್ತೀರಿ. ಹೌದು, ಇತ್ತೀಚಿನ ದಿನಗಳಲ್ಲಿ ನಿವೇದಿತಾ ಸೀರೆಯಲ್ಲಿ ಕಾಣಿಸಿಕೊಳ್ಳೋದು ಹೆಚ್ಚಾಗಿದೆ. ಬೇರೆ ಬೇರೆ ರೀತಿಯ ಸೀರೆಯಲ್ಲಿ ನಿವೇದಿತಾ ತುಂಬಾನೆ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ಒಂದು ಸಲ ಪೀಚ್ ಬಣ್ಣದ ಸೀರೆಯಲ್ಲಿ ಕಾಣಿಸಿಕೊಂಡ್ರೆ, ಮತ್ತೊಂದು ಸಲ ಪಿಂಕ್ ಬಣ್ಣದ ಸೀರೆಯಲ್ಲಿ ದೇವತೆ ಥರ ಕಾಣಿಸ್ತಿದ್ದಾರೆ ಅಂದ್ರೆ ತಪ್ಪಲ್ಲ.

ಸೀರೆ ತರ ನೀನು ಸರಳವಾಗಿ ಇದ್ದಿದ್ರೆ, ಜೀವನ ಅದೆಷ್ಟು ಸರಾಗವಾಗಿ ಇರ್ತಿತ್ತು ಅಲ್ವಾ..? ವೆರಿ ಗುಡ್ ಈ ರೀತಿ ಸ್ಯಾರಿ ಉಟ್ಕೊಂಡು ನಮ್ಮ ಭಾರತೀಯ ನಾರಿ ತರ ಇದ್ರೆ, ನಮಗೂ ಇಷ್ಟ ಎಲ್ಲರಿಗೂ ಇಷ್ಟ ಎಂದಿದ್ದಾರೆ .

# ಐಸ್ ನೀರಿನಲ್ಲಿ ಮುಖ ಕ್ಲೀನ್ ಮಾಡಿದ ರಶ್ಮಿಕಾ ಮಂದಣ್ಣ, ಹಲ್ ನೋಡ್ಕೊಳ್ಳಿ ಎಂದ ಫ್ಯಾನ್ಸ್

ನ್ಯಾಷನಲ್ ಕ್ರಶ್ ನಟಿ ರಶ್ಮಿಕಾ ಮಂದಣ್ಣ, ತೆಳ್ಳಗೆ, ಬೆಳ್ಳಗಿದ್ದಾರೆ. ಕೊಡಗಿನ ಬೆಡಗಿ ಈಗ ಬಾಲಿವುಡ್ ಆಳ್ತಿದ್ದಾರೆ. ಅವರ ಬ್ಯೂಟಿಗೆ ಬೋಲ್ಡ್ ಆಗದ ಹುಡುಗ್ರಿಲ್ಲ. ಮಾಡರ್ನ್ ಹಾಗೂ ಟ್ರಡಿಷನ್ ಎರಡೂ ಡ್ರೆಸ್ ನಲ್ಲಿ ಸುಂದರವಾಗಿ ಕಾಣುವ ನಟಿ, ಸೋಶಿಯಲ್ ಮೀಡಿಯಾದಲ್ಲಿ ಕ್ಯೂಟ್ ಎಕ್ಸ್‌ಪ್ರೆಶನ್ ಮೂಲಕ ಎಲ್ಲರನ್ನು ಹಿಡಿದಿಟ್ಟುಕೊಂಡಿದ್ದಾರೆ. ಈಗ ರಶ್ಮಿಕಾ ಮಂದಣ್ಣ, ಐಸ್ ನೀರಿನಲ್ಲಿ ಮುಖ ಕ್ಲೀನ್ ಮಾಡುವ ವಿಡಿಯೋ ಒಂದು ವೈರಲ್ ಆಗಿದೆ. ವಿಡಿಯೋ ನೋಡಿದ್ರೆ, ರಶ್ಮಿಕಾಗೆ ಐಸ್ ನೀರಿನಲ್ಲಿ ಮುಖ ಅದ್ದುವ ಟಾಸ್ಕ್ ನೀಡಿದಂತೆ ಕಾಣ್ತಿದೆ. ಫ್ಯಾನ್ ಪೇಜ್‌ನಲ್ಲಿ ಅವರ ವಿಡಿಯೋವನ್ನು ಪೋಸ್ಟ್ ಮಾಡಲಾಗಿದೆ. ಒಂದು ಬೌಲ್ ನಲ್ಲಿ ಐಸ್ ನೀರನ್ನು ಹಾಕಲಾಗಿದೆ. ಅದನ್ನು ಕೈನಲ್ಲಿ ಹಿಡಿದಿರುವ ನಟಿ, ಮುಖವನ್ನು ನೀರಿನಲ್ಲಿ ಅದ್ದಿ ತೆಗೆಯುತ್ತಾರೆ.



ಮತ್ತೆ ಮಾಡುವಂತೆ ಅಲ್ಲಿರುವವರು ಹೇಳ್ತಿದ್ದಂತೆ ವೇಟ್, ಒನ್ ಸೆಕೆಂಡ್ ಎನ್ನುವ ರಶ್ಮಿಕಾ, ಈ ವಿಡಿಯೋಕ್ಕೆ ವೇಟ್ ಅ ಸೆಕೆಂಡ್ ಅಂತಾನೆ ಶೀರ್ಷಿಕೆ ಹಾಕಲಾಗಿದೆ. ಈ ವಿಡಿಯೋ ವೈರಲ್ ಆಗ್ತಿದ್ದಂತೆ ಜನರ ಕಮೆಂಟ್ ಶುರುವಾಗಿದೆ. ರಶ್ಮಿಕಾ ಬಣ್ಣವಿಲ್ಲದ ಮುಖವನ್ನು ನೋಡಿದ ಫ್ಯಾನ್ಸ್, ನಾಚ್ಯುರಲ್ ಬ್ಯೂಟಿ ಅಂದ್ರೆ ಮತ್ತೆ ಕೆಲವರು, ಮುಖಕ್ಕೆ ಏನಾಗಿದೆ ಅಂತ ಪ್ರಶ್ನೆ ಮಾಡಿದ್ದಾರೆ.

ಕೆಲ ಬಳಕೆದಾರರು ರಶ್ಮಿಕಾ ಮಂದಣ್ಣ ಹಲ್ಲಿನ ಮೇಲೆ ಕಣ್ಣಿಟ್ಟಿದ್ದಾರೆ. ಹಳದಿ ಹಲ್ಲನ್ನು ಮೊದಲು ಕ್ಲೀನ್ ಮಾಡಿ, ನಿಮ್ಮ ಹಲ್ಲಿನ ಬಣ್ಣ ಯಾಕೆ ಹೀಗಿದೆ, ಮುಖ ಮಾತ್ರವಲ್ಲ ಬ್ರೆಷ್ ತೆಗೆದುಕೊಂಡು ನಿಮ್ಮ ಹಲ್ಲನ್ನು ಕೂಡ ಉಜ್ಜಿಕೊಳ್ಳಿ ಅಂತ ಫ್ಯಾನ್ಸ್ ಕಮೆಂಟ್ ಮಾಡಿದ್ದಾರೆ. ಮೇಕಪ್ ಇಲ್ದೆ ನೀವು ತುಂಬಾ ಚೆನ್ನಾಗಿ ಕಾಣ್ತೀರಾ ಅಂತ ಕೆಲವರು ಹೇಳಿದ್ರೆ ಮತ್ತೆ ಕೆಲವರು ಮೇಕಪ್ ಇದ್ರೆ ಮಾತ್ರ ರಶ್ಮಿಕಾ ಮುಖ ನೋಡ್ಬಹುದು ಎಂದಿದ್ದಾರೆ. ಕನ್ನಡ ಬಿಟ್ಟು ಬೇರೆ ಭಾಷೆಯಲ್ಲೇ ರಶ್ಮಿಕಾ ಹೆಚ್ಚು ಸಿನಿಮಾ ಮಾಡ್ತಿರುವ ಕಾರಣ, ಕನ್ನಡ ಇಂಡಸ್ಟ್ರಿ ಇವರನ್ನು ಹೊರಗೆ ಹಾಕಿದೆ ಎನ್ನುವ ಕಮೆಂಟ್ ಕೂಡ ಇಲ್ಲಿದೆ. ಕೆಲ ಫ್ಯಾನ್ಸ್ ಗೆ ರಶ್ಮಿಕಾ ಏನ್ ಮಾಡ್ತಿದ್ದಾರೆ ಎಂಬುದು ತಿಳಿದಿಲ್ಲ.

ಇದು ಐಸ್ ಥೆರಪಿ. ಐಸ್ ನೀರಿನಲ್ಲಿ ಮುಖವನ್ನು ಅದ್ದಿ ತೆಗೆಯಲಾಗುತ್ತದೆ. ಇದು ಮೊಡವೆ ಪೀಡಿತ ಸ್ಕಿನ್ ಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಮುಖ ಊದಿದ್ದರೆ ಇಲ್ಲವೆ ಕೆಂಪಾಗಿದ್ದರೆ, ಉರಿಯನ್ನು ಕಡಿಮೆ ಮಾಡಲು ಇದು ಅಹಕಾರಿ.

## ಸಿನಿಮಾದ ಟೈಟಲ್ ರಿವೀಲ್

# ದಳಪತಿ ವಿಜಯ್ ಕೊನೆಯ ಚಿತ್ರ ತೆಲುಗು ಸಿನಿಮಾದ ರಿಮೇಕ್?



ತಮಿಳಿನ ಸೂಪರ್ ಸ್ಟಾರ್ ವಿಜಯ್ ಅವರು ELU ಸಿನಿಮಾ ಮೂಲಕ ಸಾಧಾರಣ ಗೆಲುವು ಕಂಡಿದ್ದು ಗೊತ್ತೇ ಇದೆ. ಈ ಚಿತ್ರವು ಇತ್ತೀಚೆಗೆ ಬಿಡುಗಡೆ ಕಂಡಿದೆ. ಈ ಚಿತ್ರ ಅಂದುಕೊಂಡ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ ಎಂಬ ವಿಚಾರ ಅವರ ಅಭಿಮಾನಿಗಳಿಗೆ ಸಾಕಷ್ಟು ಬೇಸರ ಮೂಡಿಸಿದೆಯಂತೆ. ಇದಕ್ಕೂ ಮೊದಲು ರಿಲೀಸ್ ಆದ ಲಿಯೋ ಸಿನಿಮಾ ದೊಡ್ಡ ಮಟ್ಟದಲ್ಲಿ ಗೆಲುವು ಕಂಡಿತ್ತು ಎಂದೇ ಹೇಳಬಹುದು. ಈಗ ಅವರು ದಳಪತಿ 69 ಚಿತ್ರದ ಕೆಲಸದಲ್ಲಿ ಬ್ಯುಸಿ ಇದ್ದಾರೆ. ಈ ಚಿತ್ರವನ್ನು ತಮಿಳಿನ ಜನಪ್ರಿಯ ನಿರ್ದೇಶಕ ಹೆಚ್. ವಿನೋದ್ ಅವರು ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡದ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ ಇದನ್ನು ನಿರ್ಮಾಣ ಮಾಡುತ್ತಿದೆ ಅನ್ನೋದು ವಿಶೇಷ. ಈ ಸಿನಿಮಾದ ಕಥೆಯ ಬಗ್ಗೆ ಈಗ ವರದಿ ಒಂದು ಹರಿದಾಡಿದೆ. ಈ ಚಿತ್ರಕ್ಕೆ ಅನಿರುದ್ಧ್ ಅವರು ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಪೂಜಾ ಹೆಗ್ಡೆ, ಬಾಬಿ ಡಿಯೋಲ್, ಪ್ರಕಾಶ್ ರಾಜ್ ಅವರು ಈ ಸಿನಿಮಾದ ತಂಡ ಸೇರಿಕೊಂಡಿದ್ದಾರಂತೆ. ಇನ್ನು, ಮಲಯಾಳಂನ ನಟಿ ಮಮತಾ ಬೈಜು ಅವರು ಚಿತ್ರದ ಭಾಗವಾಗಲಿದ್ದಾರಂತೆ. ಅವರು ವಿಜಯ್ ತಂಯ ಪಾತ್ರ ಮಾಡುತ್ತಿದ್ದಾರೆ ಎನ್ನಲಾಗಿದೆ. ಈ ಸಿನಿಮಾ ತೆಲುಗು ಚಿತ್ರದ ರಿಮೇಕ್ ಎಂದು ಹೇಳಲಾಗುತ್ತಿದೆ. ವಿಜಯ್ ಅವರು ದಳಪತಿ 69 ರಾಜಕೀಯದಲ್ಲಿ ಬ್ಯುಸಿ ಆಗಲಿದ್ದಾರೆ ಅನ್ನೋದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಅವರು ಈಗಾಗಲೇ ಪಕ್ಷವನ್ನು ಕೂಡ ಘೋಷಣೆ ಮಾಡಿದ್ದಾರೆ ಅನ್ನೋದು ವಿಶೇಷ. ಈ ಕಾರಣದಿಂದಲೇ ಅವರ ಕೊನೆಯ ಸಿನಿಮಾ ರಾಜಕೀಯಕ್ಕೆ ಸಂಬಂಧಿಸಿದಂತೆ ಇರಲಿದೆ ಎಂದು ಹೇಳಲಾಗುತ್ತಿದೆ. ಸಿನಿಮಾದ ಟೈಟಲ್ ರಿವೀಲ್ ಆದ ಬಳಿಕ ಇನ್ನೊಂದಷ್ಟು ವಿಚಾರಗಳು ರಿವೀಲ್ ಆಗಲಿವೆ. ಇದು ಯಾವ ತೆಲುಗು ಸಿನಿಮಾದ ರಿಮೇಕ್ ಎಂಬ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗಳು ಕೂಡ ನಡೆಯುತ್ತಿವೆ.

# ಭಾರತದ ವಿರುದ್ಧ ಸರಣಿಗೂ ಮುನ್ನ ನ್ಯೂಝಿಲೆಂಡ್ ತಂಡದ ನಾಯಕ ಬದಲು

ನ್ಯೂಝಿಲೆಂಡ್ ಟೆಸ್ಟ್ ತಂಡದ ನಾಯಕತ್ವದಿಂದ ಟಿಮ್ ಸೌಥಿ ಕೆಳಗಿಳಿದಿದ್ದಾರೆ. ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಹೀನಾಯ ಸೋಲನುಭವಿಸಿದ್ದ ಬೆನ್ನಲ್ಲೇ ಸೌಥಿ ನಾಯಕತ್ವವನ್ನು ತ್ಯಜಿಸುವ ನಿರ್ಧಾರ ಪ್ರಕಟಿಸಿದ್ದಾರೆ. ಇದರ ಬೆನ್ನಲ್ಲೇ ತಂಡದ ನೂತನ ನಾಯಕನಾಗಿ ವಿಕೆಟ್ ಕೀಪರ್ ಬ್ಯಾಟರ್ ಟಾಮ್ ಲ್ಯಾಥಮ್ ಆಯ್ಕೆಯಾಗಿದ್ದಾರೆ. ಭಾರತದ ವಿರು ದ್ಧದ ಟೆಸ್ಟ್ ಸರಣಿಯಲ್ಲಿ ನ್ಯೂಝಿಲೆಂಡ್ ತಂಡವನ್ನು ಟಾಮ್ ಲ್ಯಾಥಮ್ ಮುನ್ನಡೆಸಲಿದ್ದಾರೆ. ಇದಕ್ಕೂ ಮುನ್ನ ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ನಾಯಕರಾಗಿ ಟಿಮ್ ಸೌಥಿ ಕಾಣಿಸಿಕೊಂಡಿದ್ದರು. ಎರಡು ಪಂದ್ಯಗಳ ಈ ಸರಣಿಯಲ್ಲಿ ಕಿವೀಸ್ ಪಡೆ ಹೀನಾಯ ಪ್ರದರ್ಶನ ನೀಡಿತ್ತು. 2-0 ಅಂತರದಿಂದ ಸರಣಿ ಸೋತ ಬೆನ್ನಲ್ಲೇ ಸೌಥಿ ನಾಯಕತ್ವವನ್ನು ತ್ಯಜಿಸಿದ್ದಾರೆ.ಇದೀಗ ತಂಡದ ಹೊಸ ನಾಯಕನಾಗಿ ಟಾಮ್ ಲ್ಯಾಥಮ್ ಆಯ್ಕೆಯಾಗಿದ್ದು, ಅಕ್ಟೋಬರ್ 16 ರಿಂದ ಶುರುವಾಗಲಿರುವ ಟೀಮ್ ಇಂಡಿಯಾ ವಿರುದ್ಧದ 3 ಪಂದ್ಯಗಳ ಟೆಸ್ಟ್ ಸರಣಿಯೊಂದಿಗೆ ಕಿವೀಸ್ ತಂಡದ ವಿಕೆಟ್ ಕೀಪರ್ ಬ್ಯಾಟರ್ ಹೊಸ ಇನಿಂಗ್ಸ್ ಆರಂಭಿಸಲಿದ್ದಾರೆ.ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಟೆಸ್ಟ್ ಸರಣಿಯು ಅಕ್ಟೋಬರ್ 16 ರಿಂದ ಶುರುವಾಗಲಿದೆ. ಈ ಸರಣಿಯ ಮೊದಲ ಪಂದ್ಯವು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಎರಡನೇ ಪಂದ್ಯ ಅಕ್ಟೋಬರ್ 24 ರಿಂದ ಆರಂಭವಾಗಲಿದ್ದು, ಎಂಸಿಎ ಸ್ಟೇಡಿಯಂ ಆತಿಥ್ಯ ವಹಿಸಲಿದೆ. ಹಾಗೆಯೇ ನವೆಂಬರ್ 9 ರಿಂದ ಶುರುವಾಗಲಿರುವ ಮೂರನೇ ಪಂದ್ಯವು ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ಜರುಗಲಿದೆ.ಪ್ರಸ್ತುತ ನ್ಯೂಝಿಲೆಂಡ್ ಟೆಸ್ಟ್ ತಂಡ: ಟಾಮ್ ಲ್ಯಾಥಮ್ (ನಾಯಕ), ಕೇನ್ ವಿಲಿಯಮ್ಸನ್, ಟಾಮ್ ಬ್ಲಂಡೆಲ್ (ವಿಕೆಟ್ ಕೀಪರ್), ಮೈಕೆಲ್ ಬ್ರೇಸ್‌ವೆಲ್, ಡೆವೊನ್ ಕಾನ್ವೇ (ವಿಕೆಟ್ ಕೀಪರ್), ಮ್ಯಾಟ್ ಹೆನ್ರಿ, ಡೇರಿಲ್ ಮಿಚೆಲ್, ವಿಲಿಯಂ ಓರೂರ್ಕ್, ಅಜಾಝ್ ಪಟೇಲ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ,ಮಿಚೆಲ ಸ್ಯಾಂಟ್ನರ್, ಬೆನ್ ಸಿಯರ್ಸ್, ವಿಲ್ ಯಂಗ್, ಟಿಮ್ ಸೌಥಿ.

# ಸ್ಫೋಟಕ ಡಬಲ್ ಸೆಂಚುರಿ ಸಿಡಿಸಿ ದಾಖಲೆ



ಲಕ್ನೋನಾ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಇರಾನಿ ಕಪ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸರ್ಫರಾಝ್ ಖಾನ್ ಸ್ಫೋಟಕ ದ್ವಿಶತಕ ಬಾರಿಸಿದ್ದಾರೆ. ಈ ಪಂದ್ಯದಲ್ಲಿ ಮುಂಬೈ ಪರ 6ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸರ್ಫರಾಝ್ 253 ಎಸೆತಗಳಲ್ಲಿ ಡಬಲ್ ಸೆಂಚುರಿ ಪೂರೈಸಿದರು. ಇದಕ್ಕೂ ಮುನ್ನ ಈ ಪಂದ್ಯದಲ್ಲಿ ಟಾಸ್ ಗೆದ್ದ ಶೇಷ ಭಾರತ ತಂಡದ ನಾಯಕ ರುತುರಾಜ್ ಗಾಯಕ್ವಾಡ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಪ್ರಥಮ ಇನಿಂಗ್ಸ್ ಆರಂಭಿಸಿದ ಮುಂಬೈ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ.

ಆರಂಭಿಕರಾದ ಪೃಥ್ವಿ ಶಾ (4) ಹಾಗೂ ಆಯುಷ್ (19) ಬೇಗನೆ ವಿಕೆಟ್ ಒಪ್ಪಿಸಿದ್ದರು. ಇನ್ನು ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಹಾರ್ದಿಕ್ ತಮೋರೆ (0) ಶೂನ್ಯಕ್ಕೆ ಔಟಾಗಿದ್ದರು. ಈ ಹಂತದಲ್ಲಿ ಜೊತೆಗೂಡಿದ ಶ್ರೇಯಸ್ ಅಯ್ಯರ್ ಹಾಗೂ ನಾಯಕ ಅಜಿಂಕ್ಯ ರಹಾನೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದರು.

**ಸರ್ಫರಾಝ್ ಡಬಲ್ ಸೆಂಚುರಿ**

ಇದರ ನಡುವೆ 84 ಎಸೆತಗಳಲ್ಲಿ 57 ರನ್ ಬಾರಿಸಿ ಶ್ರೇಯಸ್ ಅಯ್ಯರ್ ಔಟಾದರು. ಈ ವೇಳೆ ಕಣಕ್ಕಿಳಿದ ಸರ್ಫರಾಝ್ ಖಾನ್ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ರಹಾನೆ ಜೊತೆಗೂಡಿ ಇನಿಂಗ್ಸ್ ಕಟ್ಟುವ ಜವಾಬ್ದಾರಿ ಹೆಗಲೇರಿಸಿಕೊಂಡ ಯುವ ದಾಂಡಿಗ ಮೈದಾನದ ಮೂಲೆ ಮೂಲೆಗೂ ಫೋರ್‌ಗಳನ್ನು ಬಾರಿಸಿ ಗಮನ ಸೆಳೆದರು.

ಆದರೆ 2ನೇ ದಿನದಾಟದ ಆರಂಭದಲ್ಲಿ ಅಜಿಂಕ್ಯ ರಹಾನೆ (97) ವಿಕೆಟ್ ಪಡೆಯುವಲ್ಲಿ ಯಶ್ ದಯಾಳ್ ಯಶಸ್ವಿಯಾದರು. ಮತ್ತೊಂದೆಡೆ ಕ್ರೀಸ್ ಕಚ್ಚಿ ನೆಲೆಯೂರಿದ್ದ ಸರ್ಫರಾಝ್ ಖಾನ್ ಅತ್ಯುತ್ತಮ ಬ್ಯಾಟಿಂಗ್‌ನೊಂದಿಗೆ ತಂಡದ ಮೊತ್ತವನ್ನು 400ರ ಗಡಿದಾಟಿಸಿದರು.

**ಸರ್ಫರಾಝ್ ಡಬಲ್ ಸೆಂಚುರಿ ದಾಖಲೆ:** ಆಕರ್ಷಕ ಸ್ವೀಪ್ ಶಾಟ್‌ಗಳೊಂದಿಗೆ ಶೇಷ ಭಾರತ ತಂಡದ ಬೌಲರ್‌ಗಳ ಬೆಂಡೆತ್ತಿದ ಸರ್ಫರಾಝ್ ಖಾನ್ 253 ಎಸೆತಗಳಲ್ಲಿ 23 ಫೋರ್ ಹಾಗೂ 3 ಸಿಕ್ಸ್‌ಗಳೊಂದಿಗೆ ದ್ವಿಶತಕ ಪೂರೈಸಿದರು. ಈ ಮೂಲಕ ಇರಾನಿ ಕಪ್‌ನಲ್ಲಿ ಮುಂಬೈ ಪರ ದ್ವಿಶತಕ ಬಾರಿಸಿದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ.

1972 ರ ಇರಾನಿ ಕಪ್‌ನಲ್ಲಿ ಆರ್‌ಡಿ ಪಾರ್ಕರ್ 195 ರನ್ ಗಳಿಸಿದ್ದು ಈವರೆಗಿನ ದಾಖಲೆಯಾಗಿತ್ತು. ಇದೀಗ ಸರ್ಫರಾಝ್ ಖಾನ್ ಡಬಲ್ ಸೆಂಚುರಿ ಸಿಡಿಸುವ ಮೂಲಕ ಮುಂಬೈ ಪರ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇನ್ನು ಈ ದ್ವಿಶತಕದ ನೆರವಿನಿಂದ ಮುಂಬೈ ತಂಡವು 127 ಓವರ್‌ಗಳ ಮುಕ್ತಾಯದ ವೇಳೆಗೆ 8 ವಿಕೆಟ್ ಕಳೆದುಕೊಂಡು 484 ರನ್ ಕಲೆಹಾಕಿದೆ.

ಮುಂಬೈ ಪ್ಲೇಯಿಂಗ್ 11: ಪೃಥ್ವಿಶಾ, ಆಯುಷ್ ಮ್ಹಾತ್ರೆ, ಶ್ರೇಯಸ್ ಅಯ್ಯರ್, ಅಜಿಂಕ್ಯ ರಹಾನೆ (ನಾಯಕ), ಸರ್ಫರಾಝ್ ಖಾನ್, ಹಾರ್ದಿಕ್ ತಮೋರೆ (ವಿಕೆಟ್ ಕೀಪರ್), ಶಾರ್ದೂಲ್ ಠಾಕೂರ್, ಶಮ್ಸ್ ಮುಲಾನಿ, ತನುಷ್ ಕೋಟ್ಯಾನ್, ಮೋಹಿತ್ ಅವಸ್ತಿ, ಎಂ ಜುನೇದ್ ಖಾನ್.ಶೇಷ ಭಾರತ ಪ್ಲೇಯಿಂಗ್ 11: ರುತುರಾಜ್ ಗಾಯಕ್ವಾಡ್ (ನಾಯಕ), ದೇವದತ್ ಪಡಿಕ್ಕಲ್, ಅಭಿಮನ್ಯು ಈಶ್ವರನ್, ಸಾಯಿ ಸುದರ್ಶನ್, ಇಶಾನ್ ಕಿಶನ್, ಧ್ರುವ್ ಜುರೆಲ್ (ವಿಕೆಟ್ ಕೀಪರ್), ಮಾನವ್ ಸುತಾರ್, ಸರನ್ಶ್ ಜೈನ್, ಯಶ್ ದಯಾಳ್, ಪ್ರಸಿದ್ಧ್ ಕೃಷ್ಣ, ಮುಖೇಶ್ ಕುಮಾರ್.

# ಜಸ್‌ಪ್ರೀತ್ ಬುಮ್ರಾ ನಂಬರ್ 1 ಬೌಲರ್

ಐಸಿಸಿ ಪ್ರಕಟಿಸಿರುವ ಟೆಸ್ಟ್ ಬೌಲರ್‌ಗಳ ನೂತನ ಶ್ರೇಯಾಂಕ ಪಟ್ಟಿಯಲ್ಲಿ ಟೀಮ್ ಇಂಡಿಯಾ ವೇಗಿ ಜಸ್‌ಪ್ರೀತ್ ಬುಮ್ರಾ ಅಗ್ರಸ್ಥಾನ ಅಲಂಕರಿಸಿದ್ದಾರೆ. ಬಾಂಗ್ಲಾದೇಶ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಬುಮ್ರಾ ಇದೀಗ 870 ಅಂಕಗಳೊಂದಿಗೆ ನಂಬರ್ 1 ಬೌಲರ್ ಆಗಿ ಹೊರಹೊಮ್ಮಿದ್ದಾರೆ.

ವಿಶೇಷ ಎಂದರೆ ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು ಟೀಮ್ ಇಂಡಿಯಾ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್. ಕಳೆದ ಬಾರಿ ಅಗ್ರಸ್ಥಾನದಲ್ಲಿದ್ದ ಅಶ್ವಿನ್ ಅವರನ್ನು ಹಿಂದಿಕ್ಕಿ ಜಸ್‌ಪ್ರೀತ್ ಬುಮ್ರಾ ಮೊದಲ ಸ್ಥಾನಕ್ಕೇರಿದ್ದಾರೆ. ಇದೀಗ 869 ಅಂಕಗಳೊಂದಿಗೆ ಅಶ್ವಿನ್ ದ್ವಿತೀಯ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ವಿಶೇಷ ಎಂದರೆ ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು ಟೀಮ್ ಇಂಡಿಯಾ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್. ಇದೀಗ 869 ಅಂಕಗಳೊಂದಿಗೆ ಅಶ್ವಿನ್ ದ್ವಿತೀಯ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ಅಂದಹಾಗೆ ಜಸ್‌ಪ್ರೀತ್ ಬುಮ್ರಾ ಟೆಸ್ಟ್ ಕ್ರಿಕೆಟ್ ಬೌಲರಗಳ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸುತ್ತಿರುವುದು ಇದು 2ನೇ ಬಾರಿ. ಇದಕ್ಕೂ ಮುನ್ನ ಫೆಬ್ರವರಿ 2024ರ ಶ್ರೇಯಾಂಕ ಪಟ್ಟಿಯಲ್ಲಿ ಅವರು ನಂಬರ್-1 ಬೌಲರ್ ಆಗಿ ಹೊರಹೊಮ್ಮಿದ್ದರು. ಅಂದಹಾಗೆ ಜಸ್‌ಪ್ರೀತ್ ಬುಮ್ರಾ ಟೆಸ್ಟ್ ಕ್ರಿಕೆಟ್ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸುತ್ತಿರುವುದು ಇದು 2ನೇ ಬಾರಿ. ಇದಕ್ಕೂ ಮುನ್ನ ಫೆಬ್ರವರಿ 2024ರ ಶ್ರೇಯಾಂಕ ಪಟ್ಟಿಯಲ್ಲಿ ಅವರು ನಂಬರ್-1 ಬೌಲರ್ ಆಗಿ ಹೊರಹೊಮ್ಮಿದ್ದರು.

# 6,6,6,6,6: ಕಿಲ್ಲರ್ ಮಿಲ್ಲರ್ ತೂಫಾನ್‌ಗೆ ನೈಟ್ ರೈಡರ್ಸ್ ತತ್ತರ..!



ಕೆರಿಬಿಯನ್ ಪ್ರೀಮಿಯರ್ ಲೀಗ್‌ನ ಎಲಿಮಿನೇಟರ್ ಪಂದ್ಯದಲ್ಲಿ ಬಾರ್ಬಡೋಸ್ ರಾಯಲ್ಸ್ ತಂಡವು ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ರೂವಾರಿ ಸ್ಫೋಟಕ ದಾಂಡಿಗ ಡೇವಿಡ್ ಮಿಲ್ಲರ್. ಈ ಪಂದ್ಯದಲ್ಲಿ ಟಾಸ್ ಗೆದ್ದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡದ ನಾಯಕ ಕೀರನ್ ಪೊಲಾರ್ಡ್ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಅದರಂತೆ ಇನಿಂಗ್ಸ್ ಆರಂಭಿಸಿದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಆರಂಭಿಕರಾದ ಜೇಸನ್ ರಾಯ್ (25) ಹಾಗೂ ಸುನಿಲ್ ನರೈನ್ (2) ಬೇಗನೆ ವಿಕೆಟ್ ಒಪ್ಪಿಸಿದ್ದರು. ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ ಪೂರನ್ 60 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ ಅಜೇಯ 91 ರನ್ ಬಾರಿಸಿದರು. ಈ ಸ್ಫೋಟಕ ಇನಿಂಗ್ಸ್ ನೆರವಿನಿಂದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡವು 19.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 168 ರನ್ ಕಲೆಹಾಕಿತು. ಈ ವೇಳೆ ಮಳೆ ಬಂದಿದ್ದರಿಂದ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಮಳೆ ನಿಂತ ಬಳಿಕ ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ ಬಾರ್ಬಡೋಸ್ ರಾಯಲ್ಸ್ ತಂಡಕ್ಕೆ 5 ಓವರ್‌ಗಳಲ್ಲಿ 60 ರನ್‌ಗಳ ಗುರಿ ನೀಡಲಾಯಿತು. ಈ ಗುರಿಯನ್ನು ಬೆನ್ನತ್ತಿದ ಬಾರ್ಬಡೋಸ್ ತಂಡವು ಮೊದಲ ಓವರ್‌ನಲ್ಲೇ ಕ್ವಿಂಟನ್ ಡಿಕಾಕ್ (4) ವಿಕೆಟ್ ಕಳೆದುಕೊಂಡಿತು.ಈ ವೇಳೆ ಕ್ರೀಸ್‌ಗೆ ಆಗಮಿಸಿದ ಡೇವಿಡ್ ಮಿಲ್ಲರ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966